
# ಅಪರಂಜಿ

ತಿಳಿನಗೆಯ ಕಾರಂಜಿ

ನವೆಂಬರ್ 2017

ನಮ್ಮ ಸಮಸ್ಯೆ ನಿಮಗೆ ಗೊತ್ತಾಗೊಲ್ಲ. ರಸ್ತೆ ಸಲೀಸಾಗಿದ್ದರೆ ವಾಹನ ಜೋರಾಗಿ ಓಡಿಸಿ ಆಕ್ಸಿಡೆಂಟ್ ಮಾಡ್ತಾರೆ. ಫುಟ್ ಪಾತ್‌ಗಳು ಸರಿ ಇದ್ದರೆ ಹಾಕರ್ಸ್ ಅದನ್ನು ಅತಿಕ್ರಮ ಮಾಡ್ತಾರೆ...!



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 35**

**ಸಂಚಿಕೆ – 2**

**ನವೆಂಬರ್ – 2017**

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ***ಪ್ರಕಾಶ್*** | 2 |
| ನಮ್ಮ ನಿಮ್ಮಲ್ಲಿ | ***ಶಿವಕುಮಾರ್*** | 3 |
| ಕಾಲನಂ..... | ***ಎಸ್.ಆರ್. ವಿಜಯಶಂಕರ*** | 6 |
| ಕಮಲ ಖೋಟೆ ಪ್ರಸಂಗ | ***ಪಾಲಹಳ್ಳಿ ವಿಶ್ವನಾಥ್*** | 11 |
| ನವ ಪೀಳಿಗೆಯ ಫೋನು | ***ಎಚ್. ಗೋಪಾಲಕೃಷ್ಣ*** | 18 |
| ತುಂತುರು | ***ದಂನಆ*** | 23 |
| ಹವಾಮಾನ ಮುನ್ಸೂಚನೆ | ***ಸಿ.ಆರ್. ಸತ್ಯ*** | 24 |
| ದೋಣಿ ವಿಹಾರ ಭಾಗ್ಯ | ***ಗಣೇಶ ಹೆಗ್ಡೆ*** | 26 |
| ಗೂಬೆಯ ಪ್ರಭಾವ | ***ಡಿ.ವಿ. ಗುರುಪ್ರಸಾದ್*** | 29 |
| ದೀಪಾವಳಿ ಡಿಸ್ಕೌಂಟ್... | ***ವಿಜಯ್ ಕುಮಾರ್*** | 32 |
| ಪಂಚ್ ಪದ್ಯಗಳು | ***ಎಚ್. ಡುಂಡಿರಾಜ್*** | 37 |
| ಸ್ಯಾಂಡಲ್‌ವುಡ್.... | ***ಸುಕನ್ಯಾ ಸುರೇಶ್*** | 38 |
| ವ್ಯಂಗ್ಯ ಮೆಲುಕು | ***ಪ್ರಕಾಶ್ ಶೆಟ್ಟಿ*** | 40 |


**ಮುಖಪುಟ ವ್ಯಂಗ್ಯಚಿತ್ರ – ಜಿ.ಎಸ್. ನಾಗನಾಥ್**

ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಹೋಗೋ ಹೋಗೋ ಮಳೆರಾಯ' ಅಂತ ಕ್ರಿಕೆಟ್ ಪ್ರೇಮಿಗಳು ಪ್ರಾರ್ಥಿಸಿದರಂತೆ!!

★★★

ಆಧಾರ್; 58,500 ಕೋಟಿ ಬೊಕ್ಕಸಕ್ಕೆ – ಹೇಳಿಕೆ

***● ಯಾರ ?!***

★★★

ಬೆಂಗಳೂರು ಇಂದು ಭಯದ ಬೀಡು – ವಿಜ್ಞಾನಿ ಹೇಳಿಕೆ

***● ಒಪ್ಪಬೇಕಾದ ಮಾತು !!***

★★★

ಪಾದರಕ್ಷೆಗಳಲ್ಲಿ ಚಿನ್ನ ಸಾಗಣೆ ನಾಲ್ಕರ ಬಂಧನ – ಕಸ್ಟಂಸ್ ಸುದ್ದಿ

***● ಈಗ ಅವರು ಪೋಲೀಸರ ರಕ್ಷೆಯಲ್ಲಿದ್ದಾರಂತೆ ?!***

★★★

ಕಿತ್ತಾಟಕ್ಕೆ ಆಸ್ಥಾನ ಬ್ರಾಹ್ಮಣರೇ ಕಾರಣ – ಹೇಳಿಕೆ

***● ಶಿವ, ಶಿವಾ !!***

★★★

ಯುನೆಸ್ಕೋದಿಂದ ಹೊರಬಂದ ಅಮೆರಿಕ – ಪತ್ರಿಕೆ

***● ವಿನಾಶಕಾಲೇ...... !!***

★★★

''ಗುಂಡಿಗೆ ನಿಮಿಷ, ಮುಚ್ಚಲು ವರುಷ!''

''ಕೋಟಿ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ !''

***● ದಿನಪತ್ರಿಕೆಯಲ್ಲಿ ಮಾರ್ಮಿಕ ಶೀರ್ಷಿಕೆಗಳು !!***

★★★

72 ಲಕ್ಷ ದೊಂದಿಗೆ ಕಸ್ಟೋಡಿಯನ್ ಪರಾರಿ – ಸುದ್ದಿ

***● ಹಣ ಕಸ್ಟಡಿಯಲ್ಲೇ ಇದೆಯಲ್ಲ !!***

★★★

# ನಮ್ಮ ನಿಮ್ಮಲ್ಲಿ

**ಮೊ**ನ್ನೆ ಬುಧವಾರ ದೀಪಾವಳಿಯ ದಿನ, ಬೆಳಗ್ಗೆ ಎದ್ದು ವರಾಂಡಾದಲ್ಲಿ ಟೀ ಕುಡಿಯುತ್ತಾ ಕೂತಿದ್ದೆ. ಹಿಂದಿನ ವಾರವೆಲ್ಲಾ ಕಾಡಿದ್ದ ಜಡಿಮಳೆ ಈಗ ಇಲ್ಲದ್ದು ಕಂಡು ಮನಸ್ಸಿಗೆ ಹಾಯೆನಿಸಿತು. ಹಾಗೇ ಪೇಪರೋದುತ್ತಾ ಇದ್ದಾಗ ''ಅರೆ, ಏನೋ ವಿಚಿತ್ರ ಅನಿಸ್ತಿದೆಯಲ್ಲಾ'' ಎಂಬ ಭಾವನೆ ಮನಸ್ಸಿನಲ್ಲಿ ಮೂಡಿತು. ತಕ್ಷಣ ಉತ್ತರ ಕೂಡಾ ಹೊಳೀತು ಅನ್ನಿ. ಈ ಪಟಾಕಿ ಹಬ್ಬದ ದಿನ ಬೆಳಗ್ಗೆ ಹೊರಗೆಲ್ಲಾ ನಿಶ್ಯಬ್ಧ. ಒಂದು ಪಟಾಕಿ ಸದ್ದಿಲ್ಲ. ಪರವಾಗಿಲ್ಲ, ಪರಿಸರದ ಬಗ್ಗೆ ಕಾಳಜಿ. ಕೊನೇ ಪಕ್ಷ ಮಲ್ಲೇಶ್ವರದ ಮಕ್ಕಳಲ್ಲಾದರೂ ಮೂಡಿದೆಯಲ್ಲಾ ಅಂದುಕೊಳ್ಳುತ್ತಿದ್ದಾಗಲೇ, ನಾವೆಲ್ಲಾ ಚಿಕ್ಕವರಾಗಿದ್ದಾಗ ನಡೆಯುತ್ತಿದ್ದ ಈ ಪಟಾಕಿ ಹಬ್ಬದ ಸಂಭ್ರಮ ನೆನಪಿಗೆ ಬಂತು.

ಐವತ್ತರ ದಶಕದ ಪ್ರಾರಂಭ. ನಮ್ಮದು ತುಂಬಿದ ಮನೆ. ನಾವು ಆರು ಮನೆ ಮಕ್ಕಳ ಜೊತೆಗೆ ಇಬ್ಬರು ಚಿಕ್ಕಪ್ಪಂದಿರು, ಬಾಣಂತನಕ್ಕೆ ಬಂದಿದ್ದ ಒಬ್ಬ ಚಿಕ್ಕಮ್ಮ ಮತ್ತು ಅವರ ತೊಟ್ಟಿಲ ಕೂಸು, ಮನೆಯ ಔಟ್‌ಹೌಸಿನಲ್ಲಿ ಮುನಿಸ್ವಾಮಿ ಮತ್ತು ಅವನ ಕುಟುಂಬ. ಹಬ್ಬದ ಹಿಂದಿನ ರಾತ್ರಿ ನಮ್ಮಪ್ಪ ತಮ್ಮ ಅಂಗಡಿಯಿಂದ (ತಮ್ಮ ದವಾಖಾನೆಯನ್ನು ಅವರು ಹೀಗೇ ಕರೆಯುತ್ತಿದ್ದುದು) ಹಿಂತಿರುಗಿ ಬರುವುದನ್ನೇ ನಾವು ಕಾಯುತ್ತಿದ್ದೆವು. ಏಕೆಂದರೆ ಬಳೇಪೇಟೆಯಲ್ಲಿ ಪಟಾಕಿ ವ್ಯಾಪಾರ ಮಾಡುತ್ತಿದ್ದ ಬಾಷಾ ನಮ್ಮ ತಂದೆಯ ಪೇಷಂಟ್. ಹಬ್ಬದ ಹಿಂದಿನ ಸಂಜೆ ಅವನು ಒಂದು ಪಟಾಕಿ ತುಂಬಿದ ಬುಟ್ಟೀನ ತಂದು ನಮ್ಮಪ್ಪನ ಕಾರಿನ ಡಿಕ್ಕಿಯಲ್ಲಿ ಇಟ್ಟು ಬಿಡುತ್ತಿದ್ದ. ನಮ್ಮಪ್ಪ ಮನೆಗೆ ಬಂದು ಕಾರಿನ ಗರಾಜಿನಲ್ಲಿ ನಿಲ್ಲಿಸಿದ ಮೇಲೆ ಚಿಕ್ಕಪ್ಪ ಕಿಟ್ಟು ಡಿಕ್ಕಿ ತೆಗೆದು ಬುಟ್ಟಿಯನ್ನ ಮನೆಯೊಳಗೆ ತರುತ್ತಿದ್ದ. ಬುಟ್ಟಿಗೆ ಹೊದಿಸಿದ್ದ ನ್ಯೂಸ್ ಪೇಪರ್ ತೆಗೆದ ತಕ್ಷಣ ಚಿತ್ರ ವಿಚಿತ್ರ ಬಣ್ಣಗಳಿಂದ ಕಣ್ಣುಗ್ಗಳನ್ನು ಕೋರೈಸುತ್ತಿದ್ದ ವಿವಿಧ ಪಟಾಕಿಗಳು ನಮ್ಮೆಲ್ಲರ ಹೃದಯಗಳನ್ನು ಮಹದಾನಂದದಿಂದ ತುಂಬುತ್ತಿದ್ದವು. (ಅದೇ ಕೊನೆಯ ಬಾರಿ ನಾನು ಇಂತಹ ಪರಿಶುಭ್ರ ಉತ್ಕಟ ಆನಂದವನ್ನು ಸವಿದದ್ದು ಅನ್ನಿಸುತ್ತದೆ. ಅದಾದ ನಂತರ ನನ್ನ ಪಾಲಿಗೆ ಬಂದ ಯಾವ ಸಂತಸದ ಅನುಭವವೂ ಯಾವುದೋ ಒಂದು ಕೊರಗನ್ನು ಸಂಗಡವೇ ಹೊತ್ತು ತರುವಂತೆ ಕಾಣುತ್ತದೆ. ಇರಲಿ.) ಪಟಾಕಿಯ ವಿತರಣೆ ನಮ್ಮ ತಾಯಿಯವರ ಜವಾಬ್ದಾರಿ. ಮನೆಯ ಹೆಣ್ಣುಮಕ್ಕಳು ತಮಗೆ ಬೇಕಾದ ಹೂಬಾಣ, ಹೂ ಕುಡಿಕೆಗಳನ್ನು ಆರಿಸಿಕೊಳ್ಳುವ ಹಕ್ಕನ್ನು ಮೊದಲು ಚಲಾಯಿಸುತ್ತಿದ್ದರು. ಹೇಗಿದ್ದರೂ ಅವರೆಲ್ಲರೂ ನಮಗಿಂತ ದೊಡ್ಡವರಾಗಿದ್ದವರಲ್ಲವೇ. ಅನಂತರ ನಾವು ಮೂರು ಅಣ್ಣತಮ್ಮಂದಿರ ಸರದಿ. ''ಪಾಪ, ಚಿಕ್ಕ ಮಗು'' ಎಂಬ ಸಬೂಬಿನಿಂದ ನನ್ನ ಚಿಕ್ಕ ತಮ್ಮನಿಗೆ ಪಟಾಕಿ ಆರಿಸುವ ಮೊದಲ ಅವಕಾಶ ಸಿಗುತ್ತಿತ್ತು. ಅನಂತರ ಇನ್ನೊಬ್ಬ ತಮ್ಮ. ಕೊನೆಯ ಸರದಿ ನನ್ನದು. ಬುಟ್ಟಿಯಲ್ಲಿ ಎಲ್ಲೋ ತಳದಲ್ಲಿದ್ದ ಅಳಿದುಳಿದ ಪಟಾಕಿಗಳನ್ನು ಬುಟ್ಟಿಯ ಸಮೇತ ನನಗೆ ಕೊಟ್ಟಾಗ ಉಮ್ಮಳಿಸಿ ಬರುತ್ತಿದ್ದ ಅಳುವನ್ನು ಹೇಗೋ ತಡೆದುಕೊಂಡು ಬುಟ್ಟಿ ಹೊತ್ತು ರೂಮಿಗೆ ಹೋಗುತ್ತಿದ್ದೆ.

ಮಾರನೆಯ ಬೆಳಗ್ಗೆ ನಮ್ಮಮ್ಮ ನಮ್ಮನ್ನೆಲ್ಲಾ ನಾಲ್ಕು ಗಂಟೆಗೇ ಎಬ್ಬಿಸಿ, ಎಣ್ಣೆ ನೀರಿನ ಸ್ನಾನ ಮಾಡಿಸುತ್ತಿದ್ದರು. ಅನಂತರ ಹೊಸ ಚಡ್ಡಿ, ಷರಟು ಧರಿಸುವ ಹೊತ್ತಿಗಾಗಲೇ ಪಕ್ಕದ

ಮನೆಗಳಿಂದ ಪಟಾಕಿ ಹೊಡೆಯುವ ಸದ್ದು ಕಿವಿ ಗಡಚಿಕ್ಕುವಂತಿತ್ತು. ಬೆಳಗ್ಗೆ ಹೊತ್ತು ಶಬ್ದ ಮಾಡುವ ಪಟಾಕಿ, ರಾತ್ರಿ ಹೂ ಬಾಣಗಳು ಎಂಬುದು ಅಂದಿನ ನಿಯಮ. ನಾವು ಮೂವರು ಗಂಡುಮಕ್ಕಳೂ ಹೆದರು ಪುಕ್ಕಲರು. ನಮ್ಮ ಮನೆಯಲ್ಲೆಲ್ಲಾ ಧೈರ್ಯಸ್ಥೆ ಎಂದರೆ ನಮ್ಮ ಎರಡನೆಯ ಅಕ್ಕ ಕಮಲಾ. ಸರಿ, ಎಲ್ಲರ ಶಬ್ಧ ಮಾಡುವ ಪಟಾಕಿಗಳನ್ನೂ ಸರದಿಯ ಪ್ರಕಾರ ಅವಳೇ ಹೊಡೆದು ಮುಗಿಸುತ್ತಿದ್ದಳು. ಇಂತಹ ಆನೆ ಪಟಾಕಿಯನ್ನು ಹಚ್ಚುವಾಗ ಅದರ ಮೇಲೆ ಒಂದು ಸಿಗರೇಟ್ ಡಬ್ಬಿಯನ್ನು ಬೋರಲು ಹಾಕಿ, ಪಟಾಕಿಯ ಸ್ಫೋಟಕ್ಕೆ ಆ ಡಬ್ಬಿ ಮೇಲಕ್ಕೆ ಎಗರುತ್ತಿದ್ದುದನ್ನು ನೋಡುವುದೇ ಒಂದು ಮೋಜು. ಬೆಳಗ್ಗೆ ಎಂಟು ಗಂಟೆಯಹೊತ್ತಿಗೆ, ಇದೆಲ್ಲಾ ಮುಗಿದು, ನಮ್ಮ ಪಟಾಕಿ ಭಂಡಾರವೆಲ್ಲಾ ಉರಿದು ಬೂದಿಯಾಗಿರುತ್ತಿತ್ತು.

ಇಂತಹ ಒಂದು ದೀಪಾವಳಿಯ ದಿನ, ನಾವು ಪಟಾಕಿಯನ್ನೆಲ್ಲಾ ಎಂಟು ಗಂಟೆಯ ಹೊತ್ತಿಗೆ ಮುಗಿಸಿ, ಮನೆಯೊಳಗೆ ಬಂದು ತಿಂಡಿ ತಿನ್ನಲು ಊಟದ ಮನೆಯ ಕಡೆ ಹೊರಟಾಗ ನಮ್ಮ ತಂದೆ ಡ್ರಾಯಿಂಗ್ ರೂಮಿನಲ್ಲಿ ತಿಂಡಿ ತಿನ್ನುತ್ತಿದ್ದರು. ಅವರಿಗೆ ದೀಪಾವಳಿಯ ಹಬ್ಬದ ಶುಭ ಕೋರಲು ನಮ್ಮ ಬೀದಿಯವರೇ ಆದ ಜಿ.ಪಿ. ರಾಜರತ್ನಂ ಬಂದು ಕುಳಿತಿದ್ದರು.

ಬರಿಗೈಯ್ಯಲ್ಲಿ ತಿಂಡಿಗೆ ಹೋಗುತ್ತಿದ್ದ ನನ್ನನ್ನು ನೋಡಿ ನಮ್ಮ ತಂದೆ ''ಏನೋ ಆಗಲೇ ಪಟಾಕಿ ಎಲ್ಲಾ ಮುಗಿಸಿ ಬಿಟ್ಯಾ?'' ಅಂತ ಪ್ರಶ್ನಿಸಿದರು. ನನ್ನ ಪೆಚ್ಚು ಮುಖ ನೋಡಿಯೇ ತಿಳಿಯಬೇಕಾದ ವಿಷಯವನ್ನ ಈ ರೀತಿ ಪುನಃ ಪ್ರಶ್ನಿಸುವ ಅಗತ್ಯ ಇರಲಿಲ್ಲ ಎಂದು ನನಗೆ ಅನಿಸಿತಾದರೂ, ನಾನು ಸುಮ್ಮನೆ ''ಹುಂ'' ಅಂದು ಹೋಗಲು ನೋಡಿದೆ. ನಮ್ಮ ತಂದೆಯ ಪ್ರಶ್ನಾವಳಿ ಇನ್ನೂ ಮುಗಿದಿರಲಿಲ್ಲ. ''ಇನ್ನೂ ಸ್ವಲ್ಪ ಪಟಾಕಿ ತರಲು ಇಷ್ಟಾನಾ?'' ಅಂತ ಕೇಳಿದರು. ನಾನು ಉತ್ಸಾಹದಿಂದ ''ಹೌದು'' ಎಂದೆ. ಅವರು, ''ಇಷ್ಟು ಸುಟ್ಟಿದ್ದು ಸಾಲದೇ ಇನ್ನೂ ಹತ್ತು ರೂಪಾಯಿ ಸುಡಬೇಕು ಅನ್ನುತ್ತೀಯಾ? ಅದೇ ದುಡ್ಡನ್ನು ಯಾವುದಾದರೂ ಬಡ ಹುಡುಗನಿಗೆ ಕೊಟ್ಟರೆ ಒಂದು ವರ್ಷದ ಸ್ಕೂಲ್ ಫೀಸ್ ಆಗುತ್ತಲ್ಲೋ?'' ಎಂದು ಹೇಳಿದರು. ನನಗೆ ಏನು ಹೇಳಲೂ ತೋಚಲಿಲ್ಲ. ನನ್ನ ಪಾಡಿಗೆ ಹೋಗುತ್ತಿದ್ದ ನನ್ನನ್ನು ಈ ರೀತಿ ಜಗಳಕ್ಕೆ ಎಳೆದದ್ದು ನೋಡಿ ರಾಜರತ್ನಂ, ''ಲೋ ಕುಮಾರ್, ನಿಮ್ಮಪ್ಪ ಎಷ್ಟು ಬಡ ಹುಡುಗರಿಗಾದರೂ ಸ್ಕೂಲ್‌ಫೀಸ್ ಕೊಡಲಿ, ಇಗೋ ಈ ಹತ್ತು ರೂಪಾಯಿ ತೆಗೆದುಕೊಂಡು ನಿನಗಿಷ್ಟವಾದ ಪಟಾಕಿ ಕೊಂಡುಕೋ'' ಅನ್ನುತ್ತಾ ನನ್ನ ಕೈಗೆ ದುಡ್ಡು ಕೊಟ್ಟರು. ಅಂದು ನಮ್ಮ ತಂದೆಗಾದ ತೇಜೋವಧೆಯನ್ನು ಮನೆಯ ಮಕ್ಕಳೆಲ್ಲರೂ ಬಹು ಆನಂದದಿಂದ ಸವಿದರು. ನಮ್ಮ ತಾಯಿಯವರ ಮುಖಾರವಿಂದದಲ್ಲಿ ಬೆಳದಿಂಗಳು ಹರಡಿತು. ನಾನು ಮತ್ತು ನನ್ನ ತಮ್ಮ, ತಿಂಡಿಯನ್ನೂ ಮರೆತು ಪಟಾಕಿ ಅಂಗಡಿಗೆ ಓಡಿದೆವು.

ಹಿಂದಿನ ದಿನಗಳ ದೀಪಾವಳಿ ಸಂಭ್ರಮವನ್ನು ಯೋಚಿಸಿದಾಗ ಎಪ್ಪತ್ತರ ದಶಕದ ಒಂದು ಘಟನೆ ನೆನಪಿಗೆ ಬರುತ್ತದೆ. ಆ ದಿನಗಳಲ್ಲಿ ನಮ್ಮ ಮನೆಯಿಂದ ಮೂರನೆಯ ಮನೆಯಲ್ಲಿ ಜರ್ಮನ್ ದಂಪತಿಗಳಿಬ್ಬರು ಬಾಡಿಗೆಗೆ ಬಂದಿದ್ದರು. ಗಂಡ ಟಾಟಾ ಇನ್ಸ್ಟಿಟ್ಯೂಟಿನಲ್ಲಿ ವಿಸಿಟಿಂಗ್ ವಿಜ್ಞಾನಿ. ಬಂದ ದಿನವೇ ಪರಿಚಯ ಮಾಡಿಕೊಳ್ಳಲು ನಮ್ಮ ಮನೆಗೆ ಬಂದರು. ನನಗೆ ಜರ್ಮನ್ ಭಾಷೆ ಸರಾಗವಾಗಿ ಬರುತ್ತಿದ್ದುದನ್ನು ಕಂಡು ಅವರ ಆನಂದ ಹೇಳತೀರದು. ಇದಾದ ಒಂದು ವಾರದ ನಂತರ ದೀಪಾವಳಿ ಬಂತು. ಆ ಬೆಳಗ್ಗೆ ಎಂಟು ಗಂಟೆಗೆ ಹೊರಬಾಗಿಲ ಕರೆಗಂಟೆ ಟ್ರಿನ್ ಗುಟ್ಟಿತು. ನನ್ನ ಪತ್ನಿ ಹೋಗಿ ನೋಡಿದರೆ ಈ ಜರ್ಮನ್

ದಂಪತಿಗಳು ಗಾಬರಿ ಮುಖದಿಂದ ಬಾಗಿಲಲ್ಲಿ ನಿಂತಿದ್ದರು. ನಾನು ಹೋಗಿ ''ಏನು ವಿಷಯ?'' ಅಂತ ಕೇಳಿದೆ. ಆತ ''ನಿಮ್ಮ ಊರಿನಲ್ಲಿ ಇವತ್ತು ಏನಾದರೂ ಗಲಭೆ ಆಗ್ತಾ ಇದೆಯೇನು? ಎಲ್ಲೆಲ್ಲೂ ಬಾಂಬ್ ಸ್ಫೋಟ ಕೇಳಿಸ್ತಾ ಇದೆ'' ಅಂತ ಪ್ರಶ್ನಿಸಿದ. ನನ್ನ ಹೆಂಡತಿ ಜೋರಾಗಿ ನಕ್ಕು, ''ಇಲ್ಲ ಇಲ್ಲ, ಇವತ್ತು ನಮ್ಮ ದೀಪಾವಳಿ ಹಬ್ಬ, ಫೆಸ್ಟಿವಲ್ ಆಫ್ ಲೈಟ್ಸ್'' ಅಂತ ವಿವರಿಸಿದಳು. ಅವರ ಕುತೂಹಲ ತಣಿಯಲಿಲ್ಲ. ''ಲೈಟ್ಸ್ ಫೆಸ್ಟಿವಲ್ ಆದರೆ ಸೌಂಡ್ ಯಾಕೆ?'' ಅಂತ ತರ್ಕಬದ್ಧವಾಗಿಯೇ ಕೇಳಿದ. ಕೊನೆಗೆ ಅವರಿಗೆ ಹಬ್ಬದ ಸಿಹಿತಿಂಡಿ ಕೊಟ್ಟು ಸುದೀರ್ಘ ವಿವರಣೆ ಕೊಟ್ಟು ಸಾಗಹಾಕಿದೆವು ಅನ್ನಿ.

ಅಲ್ಲಾರೀ, ದೆಹಲಿಯಲ್ಲಿ ನೋಡಿದಿರಾ? ಪಟಾಕಿ ನಿಷೇಧಿಸಿದ ನಂತರವೂ ವಾಯುಮಾಲಿನ್ಯ ಗರಿಷ್ಠಕ್ಕಿಂತ ಜಾಸ್ತಿ ಇದೆಯಂತೆ. ಯಾವ ಸ್ಥಿತಿಗೆ ಬಂದಿದ್ದೇವೆ ನಾವು ಅಂತೀನಿ. ಈಗಲೇ ಹೀಗಾದರೆ ನಮ್ಮ ಮೊಮ್ಮಕ್ಕಳ ಕಾಲಕ್ಕೆ ದೀಪಾವಳಿ ಅನ್ನೋದನ್ನ ಕೇವಲ ಯೂ ಟ್ಯೂಬಿನಲ್ಲಿ ನೋಡಿ ಆನಂದಿಸುವ ಕಾಲ ಬರಬಹುದು. ಹಾಗಾಗದಿರುವಂತೆ ಭಗವಂತ ನಮಗೆಲ್ಲಾ ಸದ್ಬುದ್ಧಿಯನ್ನು ಕರುಣಿಸಲಿ ಎಂಬುದೇ ನನ್ನ ಪ್ರಾರ್ಥನೆ.

**ಶಿವಕುಮಾರ್**



**ಈ ವರ್ಷಾದ್ರೂ ರಾಜ್ಯೋತ್ಸವ ಪ್ರಶಸ್ತಿ ಸಿಗಬಹುದೇನೋ!**
**ಪೇಪರು, ಟಿ.ವಿ. ನೋಡ್ತಾ ಇರ್ರಿ. ಎಲ್ಲಾರೂ ಎಲ್ಲಿದ್ದೀರಿ!!**

# ಕಾಲನಂ ಪೆಣನಟ್ಟುವಂತಾಯ್ತುಲಾ ಎಂದ ಲಕ್ಷ್ಮೀಶ

- ಎಸ್.ಆರ್. ವಿಜಯಶಂಕರ

‘‘ಹೀಗೂ ಬರೆಯುವುದಾ? ದಾಯಿತ ಆಪುಂಡು ಈ ಜನಕ್ಕು ಪಂಡ’’ ಎಂದು ಅದ್ರಾಮ ಅಸಹನೆ ತೋರಿಸಿದ. ವಿಷಯ ಎಂತದು ಅಂತ ಎಂದು ತಕ್ಷಣ ತಿಳಿಯದ ಪೊಮ್ಮ ಮೇಲೆ ಕೆಳಗೆ ನೋಡಿದ. ದೊಡ್ಡ ಬರಹಗಾರರೊಬ್ಬರನ್ನು ಹೊಗಳುವ ತರಾತುರಿಯಲ್ಲಿ, ಲೇಖಕ ವಿಷ್ಣುರೂಪ ಕನ್ನಡ ವಿಮರ್ಶಾ ಪರಂಪರೆಯಲ್ಲಿ ಯಾರೂ ಏನೂ ಬರೆದಿಲ್ಲ ಎಂದು ಲೇಖನವೊಂದರಲ್ಲಿ ಸಾರಿದ್ದರು. ತಮ್ಮ ಬರಹಕ್ಕೊಂದು ವಿಶೇಷ ಪರಿಮಳ ಬರಲಿ ಎಂದು ಒಂದೆರಡು ಇಂಗ್ಲಿಷ್ ಲೇಖಕರ ಹೆಸರುಗಳ ವಗ್ಗರಣೆ ಬೆರೆಸಿದ್ದರು.

ಈ ಹಿನ್ನಲೆ ನೆನಪಿಗೆ ಬಂದೊಡನೆ ಪೊಮ್ಮ ಸಮಾಧಾನ ಚಿತ್ತದಲ್ಲಿ ಅದಕ್ಕೆಲ್ಲ ಯಾಕೆ ಅಷ್ಟು ಮಂಡೆ ಬಿಸಿ ಮಾಡುದು ಮಾರಾಯ. ಮೊದಲು ಗುರಿತಲುಪುವ. ಕಮರ್ಶಿಯಲ್ ಸ್ಟ್ರೀಟ್‌ನ ಭಗತ್‌ರಾಂ ಅಂಗಡಿಯಲ್ಲಿ ಎರಡು ಬಿಸಿ ಜಿಲೇಬಿ ತಿಂದು ಅದರ ಮೇಲೆ ಒಂದು ಸಮೋಸ ಸ್ವಾಹಾ ಮಾಡಿದರೆ ಎಲ್ಲಾ ಸರಿ ಹೋಗುತ್ತದೆ ಎಂದ.

ನಿನ್ನ ಮಂಡೆ. ನಾವು ಇಲ್ಲಿ ಎಂ.ಜಿ. ರೋಡಿನ ಮೆಟ್ರೋ ಸ್ಟೇಷನ್ನಿನಲ್ಲಿ ಅಪ್ಪಣ್ಣ ಬರುವವರೆಗೆ ಕಾಯುವುದು ಬೇಡವಾ? ಇಲ್ಲಿಂದ ಒಟ್ಟಿಗೆ ನಡಕೊಂಡು ಭಗತ್‌ರಾಂ ಅಂಗಡಿಗೆ ಹೋಗುವುದು ಅಂತ ಮಾಡಿದ್ದಲ್ವ ಎಂದು ತುಸು ಬಿಗಿಯಾಗಿ ಹೇಳಿದ.

ಒಂದು ಕ್ಷಣ ಇಬ್ಬರೂ ಮೌನ. ಆಮೇಲೆ ಅದ್ರಾಮ ತನಗೆ ತಾನೇ ಎಂಬಂತೆ ಹೇಳಿದ. ‘‘ಅಲ್ಲ ಮಾರಾಯ್ರೆ. ತಮ್ಮ ಕತೆ ಕಾದಂಬರಿಗಳ ಬಗ್ಗೆ ಬರೆದದ್ದು ಸಾಲದು ಎಂದು ಎಲ್ಲಾ ವಿಮರ್ಶಕ ಕುಲವನ್ನೇ ಹೀಗೆ ಬೇಕಾಬಿಟ್ಟಿ ಬಯ್ಯೋದಾ? ನನಗಂತೂ ಈ ಕೆಲವು ಪತ್ರಿಕಾ ವೀರರ ಸ್ವಾರ್ಥ ನೋಡಿ ಸಿಟ್ಟು ಬರುತ್ತದೆ. ಸ್ವಾರ್ಥಕ್ಕೊಂದು ಸ್ವಯ ಅಂತ ಇಲ್ವಾ?’’ ಎಂದ.

‘‘ನಿನ್ನದು ಒಳ್ಳೆ ಕತೆಯಾಯ್ತು. ಜೀವಮಂ ಕೊಂಡೊಯ್ವ ಕಾಲನಂ ಹೆಣನಟ್ಟುವಂತಾಯ್ತುಲಾ ನಿಮ್ಮ ಸಾಹಸಂ ಅಂತ ಗ್ರಹಿಸಿ ಬಿಟ್ಟು ಬಿಡು’’ ಎಂದ ಪೊಮ್ಮ.

ಪೊಮ್ಮನ ಮಾತು ಮುಗಿಯುವುದಕ್ಕೂ ಮೆಟ್ರೋದ ಮೇಲಿನ ಮೆಟ್ಟಲುಗಳಿಂದ ಅಪ್ಪಣ್ಣ ಇಳಿದು ಬರುವುದಕ್ಕೂ ಸರಿಯಾಯಿತು. ಇವರ ಮಾತು ಕೇಳಿ ಮುಖದಲ್ಲಿ ಗಾಬರಿಯನ್ನು ನಟಿಸುತ್ತಾ ಮೆತ್ತಗಿನ ದನಿಯಿಂದ ಕೇಳಿದ. ‘‘ಎಂತದು ಹೆಣ ಗಿಣ ಅಂತ ಮಾತಾಡ್ತಾ ಇದ್ದೀರಿ? ನೀವೆಲ್ಲಾದ್ರೂ ಅದನ್ನು ನೋಡಿದ್ರೆ ಯಾರನ್ನಾದ್ರೂ ಹಾಗೆ ಮಾಡಿದ್ರೆ ಕಬ್ಬನ್ ಪೇಟೆ ಪೋಲಿಸ್ರು ನಿಮ್ಮನ್ನು ಎಳಕೊಂಡು ಹೋಗ್ತಾರೆ. ಅಲ್ಲಾ, ಏನಾದ್ರೂ ಸ್ಮಶಾನ, ಮಾಟ ಮಂತ್ರ ಅಂತ ವಾಮಾಚಾರಕ್ಕೆ ಹೊರಟ್ರೆ ಹೊಸತಾದ ಮೂಢನಂಬಿಕೆ ಕಾನೂನಲ್ಲಿ ಜೈಲಿಗೆ ಹಾಕ್ತಾರೆ. ಸಂಗತಿ ಎಂತದು?’’

ಇದನ್ನು ಕೇಳಿ ಹೆದರಿಕೆಯನ್ನು ನಟಿಸುತ್ತಾ ನಾಟಕೀಯವಾಗಿ ಪೊಮ್ಮ ಹೇಳಿದ, ‘‘ಮಹಾಧೀಕ್ಷಕ ಆರಕ್ಷಕ ವರ್ಯರೆ, ನಾವೇನು ಇವತ್ತು ಕಂಡ ಹೆಣದ ಬಗ್ಗೆ ಮಾತಾಡಿದ್ದಲ್ಲ,

ತಮ್ಮ ಪ್ರಿಯ ಕವಿಗಳಾದ ದ.ರಾ. ಬೇಂದ್ರೆಯವರು ಹದಿನೈದನೇ ಶತಮಾನದವನೆಂದು ಅಪ್ಪಣೆ ಕೊಡಿಸಿದ ದೇವಪುರದ ಕರ್ಣಾಟ ಕವಿಚೈತ್ರ ವನಚೂತ ಲಕ್ಷ್ಮೀಶನೆಂಬ ಕವಿಯು ತಮ್ಮ ಜೈಮಿನಿ ಭಾರತವೆಂಬ ಪುಸ್ತಕದಲ್ಲಿ ಐನೂರು ವರುಷಗಳಿಗೂ ಹಿಂದೆ ಕಂಡ ಹೆಣದ ಬಗ್ಗೆ ಹೇಳಿದ್ದು'' ಎಂದು ಹೇಳಿ ವಕೀಲರ ಶೈಲಿಯಲ್ಲಿ, ''ಕನ್ನಡ ವಿಮರ್ಶಕರ ಹಗಲು ಕೊಲೆಗಳನ್ನು ಪತ್ರಿಕಾ ಲೇಖನಗಳಲ್ಲಿ ಕಣ್ಣಾರೆ ಓದಿ ನೊಂದಿರುವ ಪ್ರಾಮಾಣಿಕನೂ ಸತ್ಯ ಸಂದನೂ ಆದ ಪ್ರಜೆ ಕಾನೂನು ಪ್ರಕಾರ ನಡಕೊಳ್ಳುತ್ತಿರುವ ನನ್ನ ಕಕ್ಷಿಗಾರ ಶ್ರೀಮಾನ್ ಅದ್ರಾಮ ಸಾಹುಕಾರರನ್ನು ಬಂಧಿಸಲು ಯಾವ ಸಾಕ್ಷಿಯೂ ಇಲ್ಲ'' ಎಂದು ನಾಟಕೀಯವಾಗಿ ಪೊಮ್ಮ ಹೇಳುತ್ತಿದ್ದ ಮಾತು ಮುಗಿಯುವ ಮೊದಲೆ ಕಿಸಕ್ಕನೆ ಹೊರಟ ನಗು ಸಾಂಕ್ರಾಮಿಕವಾಗಿ ಮೂವರೂ ನಗತೊಡಗಿದರು.

ಎಂತದು ಸಂಗತಿ ಮಾರಾಯ. ತುಸು ಬಿಡಿಸಿ ಹೇಳಬಾರ್ದಾ ಎಂದ ಅಪ್ಪಣ್ಣ.

ಎಂತದೂ ಇಲ್ಲ ಮಾರಾಯ. ಲಕ್ಷ್ಮೀಶ ಕವಿಯು ಭಾರತದಲ್ಲಿ ಮಹಾಯುದ್ಧದ ಬಳಿಕ ಅಶ್ವಮೇಧ ಯಾಗ ಮಾಡಲು ಹೊರಟ ಪಾಂಡವರ ಬಳಿ ಕುದುರೆ ಇಲ್ಲದ್ದರಿಂದ ಯೌವನಾಶ್ವನ ಕುದುರೆಯನ್ನು ಹಾರಿಸಿಕೊಂಡು ಘಟೋತ್ಕಚನ ಮಗ ಬರುತ್ತಾನಲ್ಲ. ಆಗ ಯೌವನಾಶ್ವನ ಸೈನಿಕರು ಹೈಡಿಂಬಿಯನ್ನು ಅಟ್ಟಿಸಿಕೊಂಡು ಬರುವಾಗ ''ಜೀವಮಂ ತೆಗೆದು ಕೊಂಡೊಯ್ವ ಕಾಲನಂ ಪೆಣನಟ್ಟುವಂತಾಯ್ತುಲಾ ನಿಮ್ಮ ಸಾಹಸಂ'' ಎಂದ ಹೈಡಿಂಬಿ ಎಂದು ನಗುತ ಲಕ್ಷ್ಮೀಶ ಹೇಳಿದ ಅಲ್ವಾ. ಜೀವ ಒಯ್ಯುವ ಯಮನನ್ನು ಹೆಣ ಅಟ್ಟಿಸಿಕೊಂಡು ಹೋದ ಹಾಗೆ ಎಂಬ ಮಾತನ್ನು ವಿಮರ್ಶಕರನ್ನು ಸುಮ್ಮನೆ ಬೈದು ಬರೆಯುವ ಲೇಖಕರಿಗೆ ಅನ್ವಯಿಸಿ ಹೇಳಿದ್ದು ಅಷ್ಟೆ. ಈ ಅದ್ರಾಮನನ್ನು ವಿಷ್ಣು ರೂಪರ ಅಭಿಮಾನಿ ಸಂಘದಿಂದ ಬಿಡಿಸದಿದ್ದರೆ, ಹೀಗೆ ಯಾವಾಗ ನೋಡಿದ್ರೂ ಕೊರಗ್ತಾ ಇರ್ತಾನೆ. ಭಗತ್‌ರಾಂ ಅಂಗಡಿಗೆ ಜಿಲೇಬಿ ತಿನ್ಲಿಕ್ಕೆ ಹೋಗುವಾಗ್ಲೂ ಇವಂದೊಂದು ಸಾಹಿತ್ಯ ಕರ್ಮ ಎಂದು ಗೊಣಗಿದ ಪೊಮ್ಮ.

ಹೈಡಿಂಬಿ ಅಂದರೆ ಘಟೋತ್ಕಚನ ಮಗ ಅಲ್ವಾ. ಹಿಡಿಂಬಿಯ ಮಗ ಹಿಡಿಂಬ ಅಂದರೆ ಘಟೋತ್ಕಚ. ಈ ಹಿಡಿಂಬನ ಮಗ ಹೈಡಿಂಬಿ ಎಂಬ ವ್ಯತ್ಯಾಸವನ್ನು ಡಾ. ಪ್ರಸನ್ನ ಗಮಕ ವ್ಯಾಖ್ಯಾನದಲ್ಲಿ ವಿವರಿಸಿದ್ದು ನೆನಪಾಗ್ತಾ ಇದೆ ಎಂದು ತನ್ನ ಗೂಡಿನಿಂದ ಹೊರಬಂದ ಅದ್ರಾಮ.

ಅದರ ಸಂಗತಿ ಬಿಡು ಮಾರಾಯ. ನಮ್ಮ ಯಕ್ಷಗಾನ ಪ್ರಸಂಗ ಕಾರರಿಗೆ ಲಕ್ಷ್ಮೀಶನ ಬರಹ ಕಥನ ಶೀಲ. ಮಾಸ್ತಿಯವರಿಗಂತೂ ಅವನು ಕಥನ ಕುತೂಹಲ. ಬೇಂದ್ರೆಗೆ ನಾದಲೋಲ. ಕುವೆಂಪುಗೆ ಉಪಮಾಲೋಲ. ನಮ್ಮ ಕಾಲದ ಸಿ.ಎನ್. ರಾಮಚಂದ್ರನ್ ಅವರಿಗಂತೂ ಅದರಲ್ಲಿರುವ ಅಶ್ವಮೇಧದ ಸಂಚಾರ ಒಂದು ಪರಿಭ್ರಮಣ ಆಶೋಧನೆಯಿಂದ ದೊರಕುವುದು ಶೋಧನ ತತ್ವ ಎಂದ ಅಪ್ಪಣ್ಣ.

ಕಮರ್ಶಿಯಲ್ ಸ್ಟ್ರೀಟ್ ಕಡೆ ಹೆಜ್ಜೆ ಹಾಕುತ್ತಾ ಅದ್ರಾಮ ಹೇಳಿದ, ''ಕೋವಿದರ್ ಗರ್ವಮಂ ಮಾಡಲಾಗದು ಪಾರ್ಥ'' ಎಂಬ ಬಕದಾಲ್ಭ್ಯ ಮುನಿಯ ಮಾತು ಅವ ಅರ್ಜುನನಿಗೆ ಸಾವಿರ ಮುಖದ ಬ್ರಹ್ಮನ ದರ್ಶನ ಮಾಡಿಸಿದ ಬಳಿಕ ಹೇಳುದಲ್ವಾ.''

ವಾಮನ ಬೇಂದ್ರೆಯವರ ಪಿ.ಎಚ್.ಡಿ. ಥೀಸಿಸ್ ಲಕ್ಷ್ಮೀಶ ಭಾರತದ ಮೇಲೆ. ಅರ್ಜುನ ಅಶ್ವಮೇಧದ ಕುದುರೆ ಹಿಂದೆ ಹೊರಟ ಮೇಲೆ ಎಷ್ಟು ಕಥೆ ಮಾರಾಯ, ಯೌವನಾಶ್ವ, ಚಂದ್ರಹಾಸ, ಸುಧನ್ವ, ಮಯೂರ ಧ್ವಜ, ಪ್ರಮೀಳ, ಬಬ್ರುವಾಹನ, ಬಕದಾಲ್ಭ್ಯ ಮುನಿ –

ಒಂದೆ ಎರಡೆ. ನೆನಪಿಟ್ಟುಕೊಳ್ಳಲು ಈ ಅದ್ರಾಮನಂತಹ ಯಕ್ಷಗಾನ ಶಿಶುಗಳಿಗೆ ಮಾತ್ರ ಸಾಧ್ಯ ಎಂದು ಛೇಡಿಸಿದ ಪೊಮ್ಮ.

ಹೌದೌದು. ಮತ್ತೆ ''ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಕಡುಪಾಪಂ ಗೈದು ಪೆಣ್ಣಿಗೆ ಜನಿಸಿ ತನ್ನೊಡಲಂ ಪೊರೆವುದೆನ್ನೊಳಪರಾಧ ಮುಂಟು'' ಎಂದ ಸೀತಾತ್ಯಾಗ ಇರುವ ರಾಮಾಯಣದ ಕತೆಯೂ ಜೈಮಿನಿ ಭಾರತದಲ್ಲಿ ಉಂಟಲ್ಲ. ಅದನ್ಯಾಕೆ ಬಿಟ್ಟೆ ಎಂದು ಅದ್ರಾಮ ಪೊಮ್ಮನಿಗೆ ಮಾತಿನಲ್ಲಿ ಹೆಚ್ಚಿದ.

''ಯಾಕಂದ್ರೆ, ಕರುಣಾಳು ರಾಘವನಲ್ಲ ತಪ್ಪಿಲ್ಲ ಅಂತ ಕಾಡಿನಲ್ಲಿ ಬಿಡುವಾಗ ಸೀತೆ ಹೇಳುವುದನ್ನು ಸಪೋರ್ಟ್ ಮಾಡಿದ್ರೆ ಸ್ತ್ರೀವಾದಿಗಳು ಏನು ಹೇಳಿಯಾರು ಅಂತ ಹೆದರಿಕೆ ನನಗೆ. ನಿನಗೆ ಸ್ತ್ರೀವಾದಿ ಸ್ಟಾರ್‌ಗಳೆಲ್ಲಾ ಪರಿಚಯ ಉಂಟಲ್ಲ'' ಎಂದು ದನಿ ಸಣ್ಣಮಾಡಿ ನಾಟಕವಾಡಿದ ಪೊಮ್ಮ. ಮೂರು ಸಲ ಬಿಡು ಒಂದು ಸಲವೂ ತಲಾಕ್ ಹೇಳದೆ ಕಾಡಿಗೆ ಕಳಿಸಿದ್ದಲ್ವಾ ಎಂದು ಕೊಂಕು ನಗೆ ಬೀರಿದ.

ನಿನ್ನದೊಂದು ಕತೆಯ. ಸೀತೆ ರಾಮನಿಗೆ ಲಕ್ಷ್ಮಣನ ಮೂಲಕ ಮಾತಿನಲ್ಲಿ ಸಮಾ ಹೆಟ್ಟಿ ಕಳಿಸಿದ್ದಾಳೆ ಆಯಾ. ಸೀತೆ ಹಾಗೇನೂ ಬಾಯಿಮುಚ್ಚಿ ಪ್ರತಿಭಟನೆ ಇಲ್ಲದೆ ಕೂತದ್ದು ಅಲ್ಲ. ಬಿರುಗಾಳಿ ಹೊಡೆಯಲು ಕಂಪಿಸಿ ಗೊನೆ ತುಂಬಿದ ಬಾಳೆ ತೂರಾಡಿ ಮುರಿದು ನೆಲಕ್ಕೆ ಬೀಳುವಂತೆ. ಆ ತುಂಬಿದ ಬಸುರಿ ಸೀತೆ ಬೀಳುವ ಮುನ್ನ ಹಮ್ಮೈಸಿ ಅಂದರೆ ಗೋಳಾಡಿ ಎಚ್ಚರ ತಪ್ಪಿಸಿ ಬಿದ್ದಳಂಗನೆ ಧರೆಗೆ ನಡನಡಗುತ ಅಂತ ಉಪಮೇಯಗಳ ಸಾರ್ವಭೌಮ ಲಕ್ಷ್ಮೀಶ ಹೇಳಿದ್ದು ನೆನಪಿಲ್ವಾ ಎಂದ ಅದ್ರಾಮ.

ನಿನ್ನ ವ್ಯಂಗ್ಯ ಸಾಕು, ಅಮ್ಮ ಸೀತೆ ಎಂತದು ರಾಮನಿಗೆ ನೋವಾಗುವ ಹಾಗೆ ಹೇಳಿದ್ದಾಳೆ. ಲಕ್ಷ್ಮೀಶ ರಾಮ ಪಕ್ಷಪಾತಿ ಅಲ್ವಾ ಅಂದ ಅಪ್ಪಣ್ಣ.

ಕರುಣಾಳು ರಾಘವನಲ್ಲಿ, ತಪ್ಪಿಲ್ಲ ಅಂತ ಹೇಳಿಸಿದ್ದು ಲಕ್ಷ್ಮೀಶ ಇರಬಹುದು. ಆದರೆ ಆ ಮೊದಲು ಲಕ್ಷ್ಮಣನಿಗೆ ಮೂರು ಮಾತು ಹೇಳುತ್ತಾಳೆ. ಯಕ್ಷಗಾನದಲ್ಲಿ ಇದೆಲ್ಲಾ ಉಂಟು. ತನ್ನ ಅಪರಾದ ಒಂದೂ ಇಲ್ಲದೆ ನಿನ್ನ ಮಗ ನನ್ನನ್ನು ತೊರೆದುದು ಅಂತ ಕೌಸಲ್ಯೆಗೆ ತಿಳಿಸಲು ಹೇಳುತ್ತಾಳೆ. ಅತ್ತೆಯ ಎದುರು ತಪ್ಪಿಲ್ಲ ಎಂದ ಹಾಗಾಯ್ತು ಎಂದ ಅದ್ರಾಮ.

ಅದು ನಿಜ ನೆನಪಿದೆ. ಅಪರಾಧವೊಂದು ವಿಲ್ಲದೆ ನಿನ್ನ ಕಂದನೆನ್ನಂ ತೊರೆದುದು ಎಂದು ಹೇಳಿದ್ದಾಳೆ. ಮತ್ತೆ ಎರಡು ಎಂತದು? ಎಂದ ಅಪ್ಪಣ್ಣ.

ಅದೇ ಅವಳ, ಹತಾಶೆ, ವ್ಯಂಗ್ಯ, ಚುಚ್ಚುವಿಕೆ. ರಾಮ ಅಲ್ಲಿ ಒಬ್ಬನೇ ಇರ್ತಾನೆ ನೀನು ಹೋಗು. ನಾನಾದರೆ ಒಬ್ಬಂಟಿ ಅಲ್ಲ. ಕಾಡೊಳಗೆ ತನ್ನನ್ನು ನೋಡಿಕೊಳ್ಳಲು ಬೇಕಾದಷ್ಟು ಉಗ್ರ ಜಂತುಗಳಿವೆ ಎನ್ನುತ್ತಾಳಲ್ಲ. ಸ್ತ್ರೀವೇಷ ಮಾಡುವವರು ಹೇಳ್ತಾರಲ್ಲ ''ಪೋಗು ಸೌಮಿತ್ರಿ ಕೋಪಿಸನೆ ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನಗೀ ಕಾಡೊಳುಗ್ರ ಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು'' ಎಂದ ಅದ್ರಾಮ.

ಆದರೆ ಇದು ರಾಮನ ಬಗೆಗಿನ ಕೋಪವಲ್ಲ, ಇದು ಬೇಸರ ಅಸಹಾಯಕತೆಗಳ ಪ್ರತಿಕ್ರಿಯೆ ಅಂತ ಹೇಳುವವರೂ ಇದ್ದಾರಲ್ಲ ಎಂದ ಅಪ್ಪಣ್ಣ.

ಇರಬಹುದು ಅಪ್ಪಣ್ಣ, ಆದರೆ ಅಲ್ಲಿ ವ್ಯಂಗ್ಯ ಬೆರೆತ ಧ್ವನಿ ಇದೆಯಲ್ಲ, ಅದು ತಪ್ಪಾ? ನನ್ನ ಮಗಳಿಗೆ; ನಿನ್ನ ಮಗಳಿಗೆ ಇಂತಹ ಕಷ್ಟ ಬಂದ್ರೆ ನಮಗೆ ಹೇಗಾದೀತು? ಎಂದ ಅದ್ರಾಮ.

''ಹೇಗಾದೀತು ಅಂದ್ರೆ. ಹೊಟ್ಟೆಗೆ ಕತ್ತಿ ಹಾಕಿ ಎಳೆದ ಹಾಗಾದೀತು. ತಡ್ಕೊಳ್ಳಿಕ್ಕೆ ಸಾಧ್ಯ ಇಲ್ಲ'' ಎಂದು ಮಾತು ಸೇರಿಸಿದ ಪೊಮ್ಮ.

ಅದಕ್ಕೆ ತನ್ನನ್ನು ಕಾಪಾಡುವವರು ಯಾರೂ ಇಲ್ಲವೆಂದು ಅವಳಿಗೂ ಗೊತ್ತು. ಭರತ, ಶತ್ರುಘ್ನ, ಹನುಮಂತರು ಈ ನಿರ್ಧಾರವನ್ನು ಪ್ರಶ್ನಿಸಲಿಲ್ಲ. ಯಾಕೆ ಎಂಬ ವಿವೇಚನೆಯೂ ಸೀತೆಗೆ ಬಂದಿರಬೇಕು. ಹಾಗಾಗಿಯೇ ಅವಳು ''ಆರಿರ್ದೊಡೇ ಗೈವರಿದು ತನ್ನ ಮರುಳಾಟಮಂ'' ಎಂಬ ಮಾತು ಸೀತೆಯ ಬಾಯಿಯಿಂದ ಬಂದುದಿರಬೇಕು. ರಾಮನ ಪಾತ್ರದಲ್ಲಿ ಅಷ್ಟು ಸೊಗಸಾಗಿ ತಾಳಮದ್ದಳೆಗಳಲ್ಲಿ ಅರ್ಥ ಹೇಳುವ ವಿದ್ವಾನ್ ಉಮಾಕಾಂತ ಭಟ್ಟರಂತಹವರೇ ಇಂತಹ ಸಂದರ್ಭಗಳಲ್ಲಿ ನಡುಗಿ ಬಿಡ್ತಾರೆ. ಈ ಕೆಲಸವನ್ನು ತಡೆದುಕೊಂಡು ರಾಮನ ಅರ್ಥ ಹೇಳೋದೇನು ಸುಲಭವೋ? ಅಗ್ನಿ ಪರೀಕ್ಷೆಯ ರಾಮ ಆದಮೇಲೆ ಉಮಾಕಾಂತ ಭಟ್ಟರು ರಾಮನ ಪಾತ್ರದಲ್ಲಿ ಅಂತರಂಗ ಮಾತನಾಡಿಕೊಳ್ಳುವುದು ಯಾಕೆ? ಹಾಗೆ ಮಾತನಾಡಿ ಸಮಾಧಾನ ಮಾಡಿಕೊಳ್ಳದಿದ್ದರೆ ರಾತ್ರಿ ಹಾಗೆ ಅರ್ಥ ಹೇಳಿದವನಿಗೆ ನಿದ್ರೆ ಬರ್ಲಿಕ್ಕಿಲ್ಲ ಗೊತ್ತುಂಟಾ ನಿಮಗೆ. ಸುಮ್ಮನೆ ನಿಮ್ಮದೊಂದು ರಗಳೆ ಎಂದು ಸಿಡುಕಿದ ಅದ್ರಾಮ.

ಅದ್ರಾಮ ಎಮೋಶನಲ್ ಆದಾಗ ಕಣ್ಣಲ್ಲಿ ನೀರು ತುಂಬುತ್ತದೆ. ನಡೆಯುವುದು ಬಿಟ್ಟು ಬದಿಗೆ ಸರಿದು ನಿಂತ ಅದ್ರಾಮನ ಮುಖ ನೋಡಿ ಅವನನ್ನು ಭಾವುಕನಾಗಲು ಬಿಡಬಾರದು ಅನಿಸಿ ಪೊಮ್ಮ ಮಾತು ಬದಲಾಯಿಸಿ ಅಪ್ಪಣ್ಣನಿಗೆ ಹೇಳಿದ, ಲಕ್ಶ್ಮೀಶನ ಹಾಸ್ಯದ ಬಗ್ಗೆ ಮಾಸ್ತಿಯವರು ಹೇಳಿದ್ದನ್ನು ಕಾರ್ಕಳದ ಪ್ರೊ. ಎಮ್. ರಾಮಚಂದ್ರ ಪ್ರಸ್ತಾವ ಮಾಡಿದ್ದು ನೆನಪಿಗೆ ಬರ್ತದೆ ಮಾರಾಯ.

''ಎಂಚಿನವು ಅವು ಪೊಮ್ಮ. ನನಗೆ ಮರೆತೇಹೋಗಿದೆ'' ಎಂದ ಅಪ್ಪಣ್ಣ.

ಅದೇ ಮಾಸ್ತಿ ಗಂಡು ಉಡುಗೆಯಲ್ಲಿ ಬಂದ ಪ್ರಮೀಳೆಯ ಹೆಣ್ಣು ಸೈನಿಕರ ವರ್ಣನೆಯ ನವಿರಾದ ಹಾಸ್ಯದ ಬಗ್ಗೆ ಬರೆದಿದ್ದಾರಲ್ಲ ಪ್ರೊ. ರಾಮಚಂದ್ರ ಅದನ್ನು ವಿವರಿಸಿ ಬಳಿಕ ಮಾಸ್ತಿ ಹೇಳಿದ್ದನ್ನು ಹೇಳಿದ್ದರು. ಅದುವೇ ಈ ಕವಿಗೆ ಹೊಟ್ಟೆ ಬಾಕರ ವಿಷಯದಲ್ಲಿ ಗಂಡುಬೀರಿ ಹೆಂಗಸರ ವಿಷಯದಲ್ಲಿ ಶಕ್ತಿಗೆ ಮಿಂಚಿದ ಕೆಲಸಕ್ಕೆ ಹೋಗುವವರ ವಿಷಯದಲ್ಲಿ ಕನಿಕರ ಮತ್ತು ಹಿರಿತನದ ಸಹಾನುಭೂತಿ. ಆದ್ದರಿಂದ ಮಾಸ್ತಿ ಹೇಳಿದ್ದಲ್ಲವಾ, ಲಕ್ಶ್ಮೀಶನ ಹಾಸ್ಯಕ್ಕೆ ಬಹಳ ಹತ್ತಿರದಲ್ಲಿ ಕಣ್ಣೀರಿದೆ ಎಂಬುದಾಗಿ, ನೆನಪಿಸಿದ ಪೊಮ್ಮ.

ಅಂದರೆ ಭಗತ್‌ರಾಂ ಜಿಲೇಬಿ ತಿನ್ನಲು ಹೊರಟಿರುವ ನಾವು ಹೊಟ್ಟೆ ಬಾಕರೆಂಬುದರಿಂದ... ಆ..ಆ.. ಎಂದ ಅಪ್ಪಣ್ಣ.

ನಾವೇನು ಹೊಟ್ಟೆ ಬಾಕರೆ? ಏನೋ ಯಥಾನುಶಕ್ತಿ ಒಂದೆರಡು ಜಿಲೇಬಿ ಗುಳುಂಕಾಯಿ ಸ್ವಾಹಾ ಮಾಡಿ ರಾತ್ರಿ ಊಟ ಕಮ್ಮಿ ಆಗಿ ಹೆಂಡತಿ ಕೈಯಲ್ಲಿ ಸಿಕ್ಕಿ ಬೀಳುವಾಗ ಕಣ್ಣೀರಿಗೆ ಹತ್ತಿರ ಆಗಬಹುದು. ತಪ್ಪಿಸಿಕೊಳ್ಳುವ ಉಪಾಯಾರ್ಥವಾಗಿ ಮನೆಗೆ ಜಿಲೇಬಿ ಕಟ್ಟಿಸಿಕೊಂಡರೆ ಆಯಿತು ಎಂದ ಪೊಮ್ಮ.

ಇರ್ಲಿ ಬಿಡು. ನಮ್ಮ ಪಕ್ಕದ ಮನೆ ಮಂಜುನಾಥ ಇದ್ದಾನಲ್ಲ ಅವನ ಮಗಳು ಪ್ರಬಂಧ ಸ್ಪರ್ಧೆಗೆ ಹೇಳಿಕೊಡಿ ಅಂಕಲ್ ಅಂತ ಮನೆಗೆ ಬಂದಿದ್ದರಿಂದ ಈಚೆಗೆ ಕುವೆಂಪು ಅವರ 'ಉಪಮಾಲೋಲ ಲಕ್ಶ್ಮೀಶ' ಎಂಬ ವಿಮರ್ಶಾ ಪ್ರಬಂಧ ಓದಿದೆ ಮಾರಾಯ. ಎಷ್ಟು ಚೆನ್ನಾಗಿದೆ. ನೀನು ಒಮ್ಮೆ ಓದು. ಮಾಸ್ತಿ ಸತ್ಯ ಮತ್ತು ಸೌಂದರ್ಯಗಳಲ್ಲಿ ಸೌಂದರ್ಯವನ್ನು ನಮ್ಮ ರಸಧ್ವನಿ ತತ್ವಗಳ ಹಿನ್ನೆಲೆಯಲ್ಲಿ ರಾಗ ಭಾವಗಳಿಗೆ ಹೋಲಿಸುತ್ತಾರಲ್ಲ, ಕುವೆಂಪು

ವಿಜ್ಞಾನ ಮತ್ತು ಅಲಂಕಾರಗಳನ್ನು ವಿಶ್ಲೇಷಿಸುತ್ತಾ ಆ ಪ್ರಬಂಧದಲ್ಲಿ ಸತ್ಯವು ಸೌಂದರ್ಯದ ಆಚಾರವಾಗಿರುತ್ತದೆ; ಸೌಂದರ್ಯವು ಸತ್ಯದ ಆಚಾರ್ಯನಾಗಿರುತ್ತದೆ; ಸತ್ಯ ಸೌಂದರ್ಯಗಳಿಗೆ ಅಭೇದ ಭಾವ ಉಂಟಾಗುತ್ತದೆ ಎಂದು ಹೇಳುತ್ತಾರೆ ಮಾರಾಯ ಎಂದ ಅಪ್ಪಣ್ಣ.

ಈ ಮಾತು ವಿಚಾರಶೀಲ ಅದ್ರಾಮನನ್ನು ಪ್ರಸನ್ನವಾಗಿಸಿತು. ಉಪಮೆ ಎಂದರೆ ಹೋಲಿಕೆ ಎಂಬುದನ್ನು ಅಲಂಕಾರ ಶಾಸ್ತ್ರಜ್ಞರ ಮತದಿಂದ ವಿವರಿಸಿ. ಕುವೆಂಪು, ಚೆನ್ನಾಗಿ ಅನುಭವಕ್ಕೆ ಬಂದ ವಸ್ತುವಿನ ಸಾದೃಶ್ಯವನ್ನು ಹೇಳಿ, ಚೆನ್ನಾಗಿ ಅನುಭವಕ್ಕೆ ಬಾರದ ವಸ್ತುವಿನ ಅನುಭವವನ್ನು ಆದಷ್ಟು ಮಟ್ಟಿಗಾದರೂ ಮಾಡಿಕೊಡಬಹುದು ಎಂಬ ಉಪಮಾ ತತ್ವದ ಮೂಲಕ ಲಕ್ಷ್ಮೀಶ ಯಾಕೆ ದೊಡ್ಡ ಕವಿ ಎಂಬುದನ್ನು ವಿವರಿಸುತ್ತಾರೆ ನೋಡು, ಅದು ಮುಖ್ಯವಾದ್ದು ಎಂದ ಅದ್ರಾಮ.

ಎಂತದು ಉಪ್ಪುಮಾ ತತ್ವವಾ? ಕುವೆಂಪುಗೆ ಉಪ್ಪಿಟ್ಟು ಅಷ್ಟು ಇಷ್ಟವ ಎಂದು ಕಾಲೆಳೆದ ಪೊಮ್ಮ. ನಿನ್ನ ಮಂಡೆಗೆ ಎಂದು ಅದ್ರಾಮ ಪೊಮ್ಮನ ತಲೆಗೆ ಒಂದು ಹುಸಿ ಏಟು ನೀಡಿದಾಗ, ಗಂಭೀರನಾಗಿ ಅಪ್ಪಣ್ಣ ಹೇಳಿದ: 'ಲಕ್ಷ್ಮೀಶನ ಹೃದಯ' ಎಂಬ ಭಾಷಣದಲ್ಲಿ ಕವಿ ಬೇಂದ್ರೆ ಕವಿ ಲಕ್ಷ್ಮೀಶ 'ಪಂಚಾಯತನ'ವನ್ನು 'ಏಕಾಯತನ' ಮಾಡಿ ಸ್ತುತಿಸುತ್ತಾನೆ ಎಂದದ್ದಲ್ಲವಾ? ಶಿವ, ಗಣಪತಿ, ವಿಷ್ಣು, ಸೂರ್ಯ, ದೇವಿ ಯಾರನ್ನೇ ಕಾಣಲಿ ಲಕ್ಷ್ಮೀಶನಿಗೆ ಎಲ್ಲೆಲ್ಲೂ ಕೃಷ್ಣ ಮುಖ. ಅಂತಹ ಭಕ್ತಿ ಕವಿ ಅವ ಎಂದು ಸರಾಗವಾಗಿ ಲಕ್ಷ್ಮೀಶನ ಷಟ್ಪದಿ ಹೇಳಿದ –

ಪುಣ್ಯಮಿದು ಕೃಷ್ಣ ಚರಿತಾಮೃತಂ ಸುಕವೀಂದ್ರ ।
ಗಣ್ಯಮಿದು ಶೃಂಗಾರ ಕುಸುಮತರು ತರುಗಿದಾ ।
ರಣ್ಯಮಿದು ನವರಸ ಪ್ರೌಢಿ ಲಾಲಿತ್ಯ ನಾನಾ ವಿಚಿತ್ರಾರ್ಥಂಗಳ ॥
ಗಣ್ಯಮಿದು ಶಾರದೆಯ ಸಮ್ಮೋಹನಾಂಗ ಲಾ
ವಣ್ಯಮಿದು ಭಾವಕರ ಕಿವಿದೊಡವಿಗೊದವಿದ ಹಿ ।
ರಣ್ಯಮಿದು ಭೂ ತಳದೊಳೆನೆ ವಿರಾಜಿಪುದು ಲಕ್ಷ್ಮೀ ಪತಿಯ ಕಾವ್ಯರಚನೆ ॥

ಎಲ್ಲರೂ 'ಶ್ರೀ ವಧುವಿನಂಬಕ ಚಕೋರಕಂ ಪೊರೆಯೆ...' ಕೋಟ್ ಮಾಡಿದರೆ ನೀನು ಲಕ್ಷ್ಮೀಶನ 'ಪುಣ್ಯಮಿದು ಕೃಷ್ಣ ಚರಿತಾಮೃತಂ' ನೆನಪಿಟ್ಟಿದ್ದೀಯಲ್ಲ ಮಾರಾಯ ಎಂದ ಪೊಮ್ಮ. 'ಹರಿಮನೆಯೊಳಿರೆ ಗಾರ್ದ ಭಾಕೃತಿಯ ಹರಿಯೊಡನೆ ಬಂದೆ' ಎಂದ ಮಯೂರಧ್ವಜ. ಅಥವಾ ಅಗ್ನಿ ಅರ್ಜುನನಿಗೆ ''ನಿಮಗೆ ಹರಿ ಸಮೀಪದೊಳಿರ್ದು ಮೀ ವಾಜಿ ಮೇಧವೇಕೆ'' ಎಂದ ಮಾತಾಗಲಿ ಎಷ್ಟು ಮಹತ್ವದ್ದು ಎಂದು ಇಂತಹ ಭಕ್ತಿ ನೋಡಿದರೆ ತಿಳಿಯುತ್ತದೆ ಎಂದು ಹೇಳತೊಡಗಿದ.

ಮಾರಾಯ್ರೆ, ಭಗತ್‌ರಾಂ ಅಂಗಡಿ ಬಂತು. ಮೊದಲೇ ದುಡ್ಡು ಕೊಟ್ಟು ಚೀಟಿ ತೆಗೆದರೆ ಮಾತ್ರ ಇಲ್ಲಿ ಜಿಲೇಬಿ. ಮನೆಗೂ ಒಂದು ಪ್ಯಾಕ್ ಕಟ್ಟಿಸಿಕೊಳ್ಳುವನಾ ಎಂದ ಅದ್ರಾಮ. ನನ್ನ ಮಗಳಿಗೆ ಜಿಲೇಬಿ ಅಂದರೆ ಪ್ರಾಣ ಮಾರಾಯ. ಮನೆಗೂ ಒಂದು ಪ್ಯಾಕ್ ಇರಲಿ ಎಂದ ಅಪ್ಪಣ್ಣ. ನಿನ್ನ ಮಗಳಿಗೆ ಇಷ್ಟ, ನನ್ನ ಹೆಂಡತಿಗೆ ಪ್ರೀತಿ. ಅದ್ರಾಮನ ಮನೆಯಲ್ಲಿ ಎಲ್ಲರಿಗೂ ಜಿಲೇಬಿ ಅಂದರೆ ಜೀವ. ನಾವು ಇಲ್ಲಿ ಒಂದೊಂದು ಫುಲ್ ಪ್ಲೇಟ್ ಹೊಡೆದು ಮನೆಗೂ ಪ್ಯಾಕ್ ಮಾಡಿಸಿಕೊಂಡು ಹೋಗುವ ಎಂದು ಪೊಮ್ಮ ಹೇಳುವ ಮೊದಲೇ ಅದ್ರಾಮ ಜಿಲೇಬಿ ಗಾಗಿ ಸರತಿಯ ಸಾಲಿನಲ್ಲಿ ನಿಂತು ಆಗಿತ್ತು.

✤

# ಕಮಲ ಖೋಟೆ ಪ್ರಸಂಗ

**- ಪಾಲಹಳ್ಳಿ ವಿಶ್ವನಾಥ್**

ನಿಮಗೇ ಗೊತ್ತಲ್ಲ ನಮ್ಮ ಜೀವ್ಸ್ ವಿಷಯ. ರಾಮನ ಭಂಟ ಹನುಮಂತ ಇದ್ದ ಹಾಗೆ ನಾನು ಮತ್ತು ಅವನು. ರಾಮನಿಗೆ ಹನುಮಂತ ಏನು ಮಾಡಿಕೊಡುತ್ತಿದ್ದನೋ ಗೊತ್ತಿಲ್ಲ, ನನಗಂತೂ ಜೀವ್ಸ್ ಎಲ್ಲಾ ಮಾಡಿಕೊಡ್ತಾನೆ. ಈಗ ನಮ್ಮ ಬಿಂಗೊ ಚಿಕ್ಮನೆಯ ವಿಷಯ. ಚಿಕ್ಮನೆಯೇನೋ ಅವನ ಮನೆತನದ ಹೆಸರು. ಆದರೆ ಹೆಸರು ಸೂಚಿಸುವ ಹಾಗೆ ಅವರೇನೂ ಬಡವರಲ್ಲ, ಉತ್ತರ ಕರ್ನಾಟಕದ ಶ್ರೀಮಂತ ಮನೆತನ ಅವರದ್ದು. ಆದರೆ ಬಿಂಗೊ ಹೆಸರು ಎಲ್ಲಿಂದ ಬಂತು? ನಿಮಗೆ ಗೊತ್ತಿರಬಹುದು. ನಾವೆಲ್ಲ ಕಾನ್ವೆಂಟ್ ಸ್ಕೂಲಿನಲ್ಲಿ ಓದಿದ್ದರ ಫಲ. ನನ್ನ ಹೆಸರು ಭರತ, ಆದರೆ ನಾನು ಅಲ್ಲಿ ಬರ್ಟಿ ಆದೆ. ತಪಸ್ವಿ ಗೆಸೊಪ್ಪೆ ಟಪ್ಪಿ ಆದ. ಘನಶ್ಯಾಮ ಗಸ್ಸಿಯಾದ. ಹಾಗೆಯೆ ಬಿಂದುಮಾಧವ ಬಿಂಗೊ ಆದ.

ಎಲ್ಲರೂ ಒಂದಲ್ಲ ಒಂದು ಸತಿ ಪ್ರೀತಿಸ್ತಿರ್ತಾರೆ ಅಲ್ಲವೆ? ಯಾವುದೋ ಋಷಿ ಹೆಸರು ಹೇಳಬೇಡಿ. ನಾನು ಸಾಮಾನ್ಯ ಜನರ ವಿಷಯ ಹೇಳ್ತಿರೋದು. ಕೆಲವರು ಎರಡು ಸಾರಿನೂ ಪ್ರೀತಿಸಿರ್ತಾರೆ. ಮೂರು ಸತಿ? ಇರಬಹುದೋ ಏನೋ. ಆದರೆ ನಮ್ಮ ಬಿಂಗೋನ ಯಾರೂ ಮೀರಿಸೋಕೆ ಆಗೋಲ್ಲ. ಮನುಷ್ಯ ಬಹಳ ವಿಶೇಷ. ಪ್ರೀತಿಸೋದು ಅವನ ಖಯಾಲಿ. ಇಂಗ್ಲಿಷ್ ಭಾಷೆಯಲ್ಲಿ ಪ್ರೇಮದಲ್ಲಿ ಬಿದ್ದ ಅಂತಾರಲ್ಲ ಅಂದು ಬಿಂಗೊವನ್ನೇ ನೋಡಿರುವ ಪದಜೋಡನೆ ಇರಬೇಕು. ಏಕೆಂದರೆ ಕಾಲೇಜಿನ ಮೊದಲನೆ ದಿನದಿಂದ ನೋಡ್ತಾ ಇದ್ದೀನಿ. ತಿಂಗಳಿಗೊಮ್ಮೆ, ಬಿಂಗೊ ಪ್ರೀತಿಯಲ್ಲಿ ಬೀಳುತ್ತಿದ್ದ. ನಮ್ಮೆಲ್ಲರ ತರಹವೆ ಅವನ ಪ್ರೀತಿಯೂ ಒನ್ ವೇ ಸ್ಟ್ರೀಟ್! ಆ ಹುಡುಗೀರಿಗೆ ಇವನು ಇರೋದೂ ತಿಳೀತಿರಲಿಲ್ಲ. ತಿಂಗಳ ಮೊದಲ ವಾರ - ಯಾವುದೋ ಹುಡುಗೀನ ನೋಡೋದು, ಪ್ರೀತಿಯಲ್ಲಿ ಬೀಳೋದು, ಆ ದೇವಿಯಿಲ್ಲದೆ ನನ್ನ ಪ್ರಪಂಚವಿಲ್ಲ ಎಂದುಕೊಂಡು ಎಲ್ಲರ ಹತ್ತಿರವೂ ಹೇಳಿಕೊಂಡು ಬರೋದು, ಕೆಂಪು ಶಾಯಿಯಲ್ಲಿ ಪ್ರೇಮಪತ್ರ ಬರೆದು ನಾನು ರಕ್ತದಲ್ಲಿ ಬರೆದಿದ್ದೇನೆ ಅನ್ನೋದು, ಆದರೆ ಪತ್ರ ಕಳಿಸ್ದೇ ಇರೋದು. ಹಾಗೆ ಮತ್ತೊಂದು ಹುಡುಗಿಯನ್ನು ನೋಡಿದಾಗ ಹಳೇ ಗುಂಗಿನಿಂದ ಹೊರಬಂದು ಮತ್ತೆ ಹೊಸ ಪ್ರೇಮದಲ್ಲಿ ಬೀಳೋದು. ಇವಳೇ ನನಗೆ ಮಾಡಿಸಿದ ಹಾಗಿದೆ ಅನ್ನೋದು... ಇದೇ ರೀತಿ ನಮ್ಮ ಬಿಂಗೊವಿನ ಪ್ರೇಮ ಪ್ರಸಂಗಗಳು.

ಹೀಗೇ ಕಾಲೇಜು ಆಯಿತು, ನಮ್ಮಲ್ಲಿ ಕೆಲವರು ಕೆಲಸ ಕೂಡ ಮಾಡಲು ಕಲಿತರು. ನಾನು ಬಿಂಗೊ ಮತ್ತು ನಮ್ಮಂತಹವರು ಕಾಲೇಜಿನಲ್ಲಿ ಸುಮಾರು ವರ್ಷಗಳು ಕಳೆದವು. ಕಾಲೇಜಿನವರಿಗೇ ನಮ್ಮ ಮೇಲೆ ದಯ ಬಂದು ಕಡೆಗೂ ಹೊರಗೆ ಕಳಿಸಿದರು. ಆದಾದ ಮೇಲೆ ಬೇರೆಯವರಿಗೆ ಏಕೆ ಕೆಲಸ ತಪ್ಪಿಸಬೇಕು ಅಂತ ತ್ಯಾಗಮಾಡಿ ಮನೇಲೇ ಕುಳಿತೆವು. ಬಿಂಗೊ ಚಿಕ್ಕಪ್ಪ ದೇಶದ ಪ್ರಮುಖ ಕೈಗಾರಿಕೋದ್ಯಮಿ ಶಾಮರಾವ್ ಚಿಕ್ಮನೆ. ಅದಕ್ಕಿಂತ ಮುಖ್ಯವಾಗಿ ಬಿಂಗೊವಿಗೆ ಆಗಾಗ್ಗೆ ದುಡ್ಡು ಕಾಸು ಕೊಡುವ ಪೋಷಕ. ಬಿಂಗೊ ತಂದೆ ಅವರ ತಮ್ಮ

ಶಾಮರಾವ್ ಕೈಲಿ ಬಿಂಗೊಗೆ ದುಡ್ಡು ಇಟ್ಟು ತೀರಿಹೋದರು. ಮಗ ದುಂದುವೆಚ್ಚ ಮಾಡಿಬಿಡ್ತಾನೆ ಅಂತ ಅವರಿಗೆ ಹೆದರಿಕೆ ಇತ್ತು. ಒಳ್ಳೇದೇ ಮಾಡಿದರು. ಏನು ಹೆಚ್ಚು ಖರ್ಚು ಮಾಡಬೇಕಾದರೂ ಬಿಂಗೊ ಅವರ ಚಿಕ್ಕಪ್ಪನ ಹತ್ತಿರ ಹೋಗಿ ಗೋಗರಿಯ ಬೇಕಾಗುತ್ತಿತ್ತು.

ಹೀಗೆಯ ಒಂದುದಿನ ನಾನು ಅವನು ಕಂಟೋನ್ಮೆಂಟಿಗೆ ಹೋಗಿ ಅಲ್ಲಿ ಒಂದು ರಸ್ತೆ ದಾಟಬೇಕಾಯಿತು. ಒಬ್ಬ ಪೊಲೀಸ್ ಯುವತಿ ಅಲ್ಲಿ ಟ್ರಾಫಿಕ್ ನಿಯಂತ್ರಣ ಮಾಡುತ್ತಿದ್ದಳು. ಬಿಂಗೊ ಅವಳನ್ನೇ ನೋಡಲು ಶುರುಮಾಡಿದ. ಅವಳು ಹೋಗಿ ಎಂದು ಕೈ ತೋರಿಸಿದರೂ ಬಿಂಗೊ ರಸ್ತೆ ದಾಟಲಿಲ್ಲ. ಎರಡು ಸತಿ ಹಾಗಾದ ಮೇಲೆ ಕಡೆಗೂ ಗಲಾಟೆ ಮಾಡಿ ನಾನು ಅವನನ್ನು ಕೈ ಹಿಡಿದು ರಸ್ತೆ ದಾಟಿಸಿದೆ. ಆದರೆ ಮತ್ತೆ ಅಲ್ಲೇ ನಿಂತು ಈ ಕಡೆಯಿಂದ ಆ ಕಡೆಗೆ ರಸ್ತೆ ದಾಟಿದ. ಮತ್ತೆ ಆ ಕಡೆಯಿಂದ ಈ ಕಡೆಗೆ! ನನಗೆ ಕೋಪ ಬಂದು, ಏನು ಹೇಳೋಕೆ ಮೊದಲೆ 'ಬ್ರದರ್, ನನಗೆ ಜೀವನಸಾಥಿ ಸಿಕ್ಕಿ ಬಿಟ್ಟಿದ್ದಾಳೆ.... ಇತ್ಯಾದಿ.' ನಾನೂ ಸುಮ್ಮನೆ ಕೇಳಿಸಿಕೊಂಡು ಬಂದೆ.

ಹಾಗೇ ಒಂದು ದಿನ ಫೋನ್ ಮಾಡಿ ಅವಳನ್ನೂ ಕರಕೊಂಡು ಬರ್ತೀನಿ ಅಂದ.

'ಯಾರನ್ನೋ?' ಅಂತ ಕೇಳಿದೆ.

'ಏನು ಬರ್ಟಿ, ಮರೆತುಬಿಟ್ಟೆಯಾ... ಅದೇ ಸುಹಾಸಿನಿ.'

'ಸುಹಾಸಿನಿ, ಸುಭಾಷಿಣಿ, ಇತ್ಯಾದಿ. ಹೇಗೋ ಜ್ಞಾಪಕ ಇಟ್ಟುಕೊಳ್ಳೋದು.'

'ಅಲ್ಲ ಬರ್ಟಿ ಅವತ್ತು ಕಂಟೋನ್ಮೆಂಟಿನಲ್ಲಿ ಟ್ರಾಫಿಕ್‌ನಲ್ಲಿ...'

''ಓ, ಅವಳಾ? ಅಂದೆ.

''ಆ ತರಹ ಮಾತಾಡ್ಬೇಡ. ನಾವಿಬ್ಬರೂ ಮದುವೆ ಮಾಡಿಕೊಳ್ಳೋದಕ್ಕೆ ಮನಸ್ಸು ಮಾಡ್ಬಿಟ್ಟಿದೀವಿ. ನಿನಗೆ ಸರಿಯಾಗಿ ಗುರುತು ಮಾಡಿಸ್ಬೇಕಲ್ವ? ಅದಕ್ಕೆ ನಿಮ್ಮ ಮನೆಗೆ ಬರ್ತೀವಿ.''

''ಅಲ್ವೋ ನೀನು ಆಗರ್ಭ ಶ್ರೀಮಂತ. ಆಕೆ ಬಡ ಪೊಲೀಸ್ ಹುಡುಗಿ'' ಎಂದಿದ್ದಕ್ಕೆ ಅವನು ''ಕಾರ್ಲ್‌ಮಾರ್ಕ್ಸ್ ಗೊತ್ತಲ್ವಾ'' ಅಂತ ಏನೇನೋ ಹೇಳೋಕೆ ಶುರುಮಾಡಿದ. ಅವನು ಕೊರೆಯುವುದನ್ನು ತಪ್ಪಿಸಿಕೊಳ್ಳಲು ಸರಿ ಅಂತ ಸುಮ್ಮನೆ ಆದೆ. ಆಮೇಲೆ ಜೀವ್ಸ್‌ನ ಕೇಳಿದೆ. 'ಯಾರಿವನು ಕಾರ್ಲ್‌ಮಾರ್ಕ್ಸ್?' ಸರಿ ಜೀವ್ಸ್ ಶುರುಮಾಡಿದ. ಯಾಕಪ್ಪ ಕೇಳಿದೆ ಅನ್ನಿಸಿಬಿಡ್ತು. ಇದೆಲ್ಲಾ ತಿಳಿದುಕೊಂಡು. ನಾನು ಏನು ಮಾಡಲಿ? ಅದು ಹೇಗೆ ಬಿಂಗೊಗೆ ಈ ಮಾರ್ಕ್ಸ್ ಗೀರ್ಕ್ಸ್ ವಿಷಯ ಎಲ್ಲಾ ಗೊತ್ತಾಯ್ತು? ಅಂತೂ ಅವರಿಬ್ಬರೂ ಬಂದರು. ಅವಳನ್ನು ನೋಡಿದಾಗ ಇವಳೇನಾ ಆ ಟ್ರಾಫಿಕ್ ನಿಯಂತ್ರಿಸುತ್ತಿದ್ದ ಹೆಣ್ಣು ಅಂತ ಆಶ್ಚರ್ಯವಾಯಿತು. ಅವತ್ತು ಪೊಲೀಸ್ ಸಮವಸ್ತ್ರ ಧರಿಸಿದ್ದಳು, ಇಂದು ಸಲ್ವಾರ್ ಕಮೀಜ್, ಇತ್ಯಾದಿ.

'ಬರ್ಟಿ. ಇವಳೆ ಸುಹಾಸಿನಿ' ಎಂದು ಬಿಂಗೊ ನಮ್ಮನ್ನು ಪರಿಚಯಿಸಿದ.

'ನೀವು... ಪೊಲೀಸ್..' ಎಂದು ಹೇಳಿದಾಗ ಸುಹಾಸಿನಿ ನಕ್ಕಳು.

‘ನಾನು ಅಂತ ಒಂದು ಪ್ರಬಂಧ ಬರೀಬೇಕಿತ್ತು. ಟ್ರಾಫಿಕ್ ಪೊಲೀಸ್‌ನಲ್ಲಿ ಕೆಲ್ಸ ಮಾಡುವ ಮಹಿಳೆಯರ ಬಗ್ಗೆ ಬರೆಯೋಣ’ ಅನ್ನಿಸಿತು. ಅದಕ್ಕೋಸ್ಕರ ಸ್ವಲ್ಪ ಟ್ರೈನಿಂಗ್ ತೆಗೆದುಕೊಂಡೆ ಎಂದಳು. ಜಾಣೆ ಅನ್ನಿಸಿತು. ಅದಲ್ಲದೆ ಬಿಂಗೊ ಮೂರು ತಿಂಗಳಿಂದ ಬೇರೆ ಯಾವ ಹುಡುಗೀ ಮೇಲೂ ಗಮನ ಕೊಟ್ಟಿಲ್ಲ. ಹಾಗಾದರೆ ಸರಿಯಾದವಳೇ ಸಿಕ್ಕಿದಾಳೆ ಅನ್ನಿಸ್ತು.

ಆಗ ಬಿಂಗೊ ‘ನೋಡು ಬರ್ಟಿ, ನೀನು ಸಹಾಯ ಮಾಡಲೇಬೇಕು.’

‘ಏನೋ ಅದು?’

‘ನಮ್ಮ ಚಿಕ್ಕಪ್ಪ ಗೊತ್ತಲ್ಲ?’

‘ಗೊತ್ತಿಲ್ಲದೇ ಏನು?’

‘ನೀನು ಹೋಗಿ ನಮ್ಮ ವಿಷಯ ಹೇಳಿ ಹೇಗಾದರೂ ಚಿಕ್ಕಪ್ಪನ್ನ ಒಪ್ಪಿಕೊಳ್ಳುವ ಹಾಗೆ ಮಾಡಬೇಕು. ಅದಲ್ಲದೆ ಮದುವೆಯಾದರೆ ಹೆಚ್ಚು ದುಡ್ಡೂ ಬೇಕಾಗುತ್ತೆ.’

‘ಅಲ್ವೋ, ನಾನು ಏನು ಮಾಡೋದಕ್ಕೆ ಆಗುತ್ತೆ?’ ಬಿಂಗೊ. ನನ್ನ ಕೈಲಿ ಆಗೋಲ್ಲ.

‘ಬರ್ಟಿ, ನಾನು ನಿನ್ನ ಚಡ್ಡಿ ದೋಸ್ತ್! ಬರ್ಟಿ, ಮರೆತುಬಿಟ್ಟೆಯಾ. ನಾವೆಲ್ಲಾ ಶಾಲೆಯಲ್ಲಿ ಒಟ್ಟಿಗೆ ಇದ್ದೆವು.’

‘ಅದಕ್ಕೆ ನಾನು ಏನು ಮಾಡಬೇಕು?’

‘ಅಲ್ಲ ನಿನಗೆ ಜ್ಞಾಪ್ಸಿಸ್ತಾ ಇದೀನಿ. ಸರಿ, ನಿನಗೆ ಸಹಾಯ ಮಾಡಲು ಇಷ್ಟವಿಲ್ಲದಿದ್ದರೆ ಬಿಡು. ನಾನು ಹೀಗೇ ಒಬ್ಬಂಟಿಗನಾಗಿಯೇ ಮುದುಕನಾಗಿಬಿಡ್ತೀನಿ. ಪ್ರತಿ ತಿಂಗಳೂ ಬಂದು ನಿನ್ನ ನೋಡ್ತಾ ಇರ್ತೀನಿ.’

ಯಾವಾಗಲೋ ಒಂದು ಸತಿ ಇವನನ್ನ ನೋಡೋದೆ ಸಾಕು, ಇನ್ನು ಪ್ರತಿ ತಿಂಗಳೂ ಅಂತ ಬೇರೆ ಹೆದರಿಸ್ತಿದಾನಲ್ಲ! ಸದ್ಯ ಬೇಡ! ಇವನಿಗೆ ಏನು ಸಹಾಯ ಮಾಡಬೇಕೋ ಮಾಡಿ ಬಿಡೋಣ.

‘ಏ ಬಿಂಗೊ! ನಿನ್ನ ಪ್ರಲಾಪ ಸಾಕುಮಾಡು. ಆಗಲಿ, ನಿನಗೆ ಸಹಾಯ ಮಾಡ್ತೀನಿ...’

ಬಿಂಗೊ ಮತ್ತು ಸುಹಾಸಿನಿ ಹೊರಟುಹೋದನಂತರ...

‘ಜೀವ್ಸ್, ಕೇಳಿಸಿಕೊಂಡೆಯಾ?’

ಅವನು ಒಳಗೇ ಇದ್ದರೂ ಎಲ್ಲ ಕೇಳಿಸಿಕೊಂಡಿರ್ತಾನೆ. ಆದರೂ ನಾನು ಕೇಳೋದು ಇದ್ದೇ ಇತ್ತು.

‘ಸ್ವಲ್ಪ ಕಿವಿಗೆ ಬಿತ್ತು ಸಾರ್.’

‘ಕಿವಿಗೆ ಪೂರ್ತಿಬೇಕಾ?’

‘ಇಲ್ಲ, ಇಲ್ಲ ಸಾರ್, ಅರ್ಥವಾಯ್ತು.. ಒಂದು ಉಪಾಯ ಇದೆ ಸಾರ್.. ನಮ್ಮ ಶ್ರೀ ಬಿಂದುಮಾಧವರ ಚಿಕ್ಕಪ್ಪ ಶ್ರೀ ಶ್ಯಾಮ್ರಾವ್ ಚಿಕ್ಮನೆಯವರಿಗೆ ಕಥೆ ಕಾದಂಬರಿ ಎಂದರೆ ಬಹಳ ಹುಚ್ಚು.’

ಅದು ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳೋಣ ಎಂದುಕೊಂಡವನು ಬಾಯಿ

ಮುಚ್ಚಿಕೊಂಡೆ. ಅವನಿಗೆ ತಿಳಿಯದ ವಿಷಯಗಳು ಈ ಪ್ರಪಂಚದಲ್ಲಿ ಬಹಳವಿಲ್ಲ ಎಂದು ನಿಮಗೆ ನಾನು ಮೊದಲೇ ಹೇಳಿದ್ದೇನಲ್ಲವೆ?

'ಸಾರ್, ಅವರಿಗೆ ಕಮಲ ಖೋಟೆ ಎನ್ನುವ ಲೇಖಕಿಯ ಪುಸ್ತಕಗಳು ಬಹಳ ಇಷ್ಟ..' ಸಾರ್.

'ಅದಕ್ಕೆ ನಾನು ಏನು ಮಾಡಲಿ?'

'ಸ್ವಲ್ಪ ಸಾವಧಾನದಿಂದಿರಿ ಸಾರ್, ಆಗಲೇ ಆಕೆ ಐದು ಕಾದಂಬರಿಗಳನ್ನು ರಚಿಸಿದ್ದಾರೆ. ಎಲ್ಲೆಲ್ಲೂ ಅವರ ಪುಸ್ತಕಗಳೇ ಕಾಣಿಸುತ್ತಿವೆ. ನೀವು ಶ್ರೀ ಶ್ಯಾಮರಾಯರ ಹತ್ತಿರ ಹೋಗಿ 'ನಾನೆ ಕಮಲ ಖೋಟೆ' ಎಂದರೆ!

'ಅಲ್ಲ ಜೀವ್ಸ್, ಪುಸ್ತಕದ ಹಿಂದೆ ಅವರ ಚಿತ್ರ ಇರೋದಿಲ್ಲವಾ?'

'ಇವರ ಪುಸ್ತಕದ ಹಿಂದೆ ಯಾವ ಚಿತ್ರವೂ ಇಲ್ಲ. ನಾನೂ ವಿಚಾರಿಸಿದೆ. ಅವರು ಯಾರು ಎಂದು ಯಾರಿಗೂ ಗೊತ್ತಿಲ್ಲವಂತೆ.'

'ಅದಕ್ಕೆ?'

'ನೀವು ಅವರೇ ನಾನು ಎಂದು ಶಾಮರಾವ್‌ರನ್ನು ಭೇಟಿಮಾಡಿದರೆ ನಿಮ್ಮ ಮಾತಿಗೆ ಒಂದು ಬೆಲೆ ಬರುತ್ತದೆ. ಆಗ ನೀವು ಶ್ರೀ ಬಿಂದುಮಾಧವರ ಬಗ್ಗೆ ಮಾತನಾಡಿ. ಶಿಫಾರಸ್ಸು ಮಾಡಬಹುದು..'

'ನಾನು? ಲೇಖಕ? ಅದೂ ಹೆಂಗಸಾ?'

'ಸಾರ್, ಹೆಂಗಸರು ಗಂಡಸರ ಹೆಸರಿಟ್ಟುಕೊಂಡು ಮತ್ತು ಗಂಡಸರು ಹೆಂಗಸರ ಹೆಸರಿಟ್ಟುಕೊಂಡು ಬರೆದಿರುವ ಉದಾಹರಣೆಗಳು ಚರಿತ್ರೆಯಲ್ಲಿ ಬಹಳ ಸಿಕ್ಕುತ್ತವೆ ಸಾರ್, ಉದಾಹರಣೆಗೆ....

ಮತ್ತೆ ಶುರು ಮಾಡಿದನಲ್ಲ ಇವನು.

'ಜೀವ್ಸ್ ನನ್ನ ಕೈನಲ್ಲಿ ಇದೆಲ್ಲ ಆಗೋದಿಲ್ಲ.'

'ಸಾರ್ ಯೋಚಿಸಿ ನೋಡಿ, ಈಗಾಗಲೇ ಬಿಂದುಮಾಧವರು ಹೇಳಿ ಹೋದರಲ್ಲ! ಪ್ರತಿ ತಿಂಗಳೂ ಬಂದು ನಿಮ್ಮನ್ನು.. ನೋಡ್ತಾ ಇರ್ತೀನಿ ಅಂತ..'

ಕೇಳಿ ಮೈನಲ್ಲಿ ನಡುಕ ಬಂದಿತು.

'ಆಯ್ತು ಜೀವ್ಸ್! ಆ ಕಮಲ ಖೋಟೆ ಬರೆದಿರುವ ಪುಸ್ತಕಗಳೆಲ್ಲವನ್ನೂ ತಂದುಕೊಡು. ಈ ಬಿಂಗೊ ಚಿಕ್ಕಪ್ಪ ನನ್ನನ್ನು ಏನಾದರೂ ಪ್ರಶ್ನೆ ಕೇಳಿದರೆ ಕಷ್ಟ!'

'ಆಯ್ತ ಸಾರ್, ಆಗಲೇ ತಂದಿಟ್ಟಿದೀನಿ. ಅದಲ್ಲದೆ ನಿಮ್ಮ ಇತ್ತೀಚಿನ ಕಾದಂಬರಿಯನ್ನು ಶ್ರೀ ಶ್ಯಾಮರಾವ್ ಚಿಕ್ಮನೆಯವರಿಗೆ ಕಳಿಸಿಕೊಡ್ತಾ ಇದ್ದೀನಿ.'

'ಜೀವ್ಸ್, ಕಾದಂಬರಿಯ ಹೆಸರು?'

ಸರ್, 'ಅವಳು ದಡ ಸೇರಿದಳು'

'ಕಾದಂಬರಿಯ ಹೆಸರು ಕೇಳಿದೆ.'

ಅದೇ ಸರ್ ಹೆಸರು – 'ಅವಳು ದಡ ಸೇರಿದಳು'

ರಾತ್ರಿಯೆಲ್ಲಾ ನಿದ್ದೆಗೆಟ್ಟು ಆ ಪುಸ್ತಕ ಓದಲು ಪ್ರಯತ್ನಿಸಿದೆ. ಹೇಗೆ ಜನ ಇಂಥ ಪುಸ್ತಕ ಓದ್ತಾರೋ ಅಂದುಕೊಂಡೆ. ಅದೂ ಮುದ್ರಣವಾದ ಒಂದೇ ವಾರದಲ್ಲಿ ಎಲ್ಲಾ ಪುಸ್ತಕಗಳೂ ಮಾರಾಟವಾಗಿಬಿಡ್ತಂತೆ. ನನಗೇನೋ ಬಹಳ ಕಷ್ಟವಾಯಿತು. ಓದು ಎಂದರೆ ನನಗೆ ಮೊದಲಿಂದಲೇ ಅಷ್ಟಕ್ಕಷ್ಟೆ! ಈ ಪುಸ್ತಕ ಓದೋದಲ್ಲದೆ ಜ್ಞಾಪಕ ಕೂಡಾ ಇಟ್ಟುಕೋಬೇಕಂತೆ! ಬಿಂಗೊನ, ಜೀವ್ಸನ ಸಾವಿರ ಸತಿ ಬೈಕೊಂಡೆ. ಓದೇನೋ ಮುಗಿಸಿದೆ. ಆದರೆ ಯಾವ ದಡ ಅಂತ ಕೇಳಬೇಡಿ. ನದಿಯ ಹೆಸರೂ ಜ್ಞಾಪಕವಿಲ್ಲ. ಬೆಳಿಗ್ಗೆ ಎದ್ದಾಗ ಜೀವ್ಸ್‌ನ ಆ ನದಿಯ ಹೆಸರು ಕೇಳಿದೆ. 'ಜೀವನ ಸಾರ್ ಅದು. ನದಿ ತರಹ ಹರಿಯುತ್ತಲ್ವ ಸಾರ್' ಅಂದ. ಆಯ್ತು ಆ ನದೀನ ಅವಳು ಏಕೆ ದಾಟೋದಕ್ಕೆ ಹೋದಳು?

ಅಂತೂ ಬೆಳಿಗ್ಗೆ 11ಕ್ಕೆ ಶ್ಯಾಮರಾಯರ ಮನೆಗೆ ಹೋದೆ. ನಿರೀಕ್ಷಿಸಿದ ಹಾಗೆ ಭವ್ಯ ಬಂಗಲಾ! ನನಗೆ ಬಹಳ ಒಳ್ಳೆಯ ಸ್ವಾಗತ ಸಿಕ್ಕಿತು.

'ನಿಮ್ಮಂಥ ದೊಡ್ಡ ಸಾಹಿತಿಗಳು ನಮ್ಮ ಮನೆಗೆ ಬರುವುದು ನಮ್ಮ ಪುಣ್ಯ ಅದೂ ನಮ್ಮ ಬಿಂದುಮಾಧವನ ಸ್ನೇಹಿತರಾಗಿರೋದು ಅವನ ಪುಣ್ಯ.'

'ನಾನು ಅಂತಹ ದೊಡ್ಡ.....'

'ಹೌದು, ನೀವು ಎಲ್ಲಿ ಒಪ್ಪಿಕೊಳ್ಳುತ್ತೀರಿ?' ಬಿಡಿ, ಆದರೆ ನಿಮ್ಮ ಪ್ರತಿ ಪುಸ್ತಕವೂ ಅದ್ಭುತ ಎಂದೇ ಹೇಳಲೇಬೇಕು ನಿಮ್ಮ ಟ್ರಿಲೊಜಿ – 'ಅವನು ಬರಲಿಲ್ಲ' 'ಅವಳು ಬರಲಿಲ್ಲ' 'ಇಬ್ಬರೂ ಬಂದರು' – ಎಂತಹ ಮಹಾ ಕಾದಂಬರಿಗಳು, ಎಷ್ಟು ನೀತಿ ಇದೆ ಅದರಲ್ಲಿ.'

'ಏನೋ ನೀವು...'

ಇನ್ನು ನಿಮ್ಮ ಇತ್ತೀಚಿನ ಪುಸ್ತಕ – 'ಅವಳು ದಡ ಸೇರಿದಳು' ಎಂತಹ ಉಪಮೇಯಗಳು. ಎಂತಹ ಮಾನವೀಯತೆ. ನನಗಂತೂ ಕಣ್ಣಿನಲ್ಲಿ ನೀರು ಬಂದುಬಿಟ್ಟಿತು. ಎಲ್ಲರನ್ನೂ ಒಪ್ಪಿಕೊಳ್ಳೋಣ, ಎಲ್ಲರಿಗೂ ಸಹಾಯಮಾಡಬೇಕು ಅನ್ನಿಸಿದೆ..

'ಸಾರ್, ನಿಮ್ಮ ಅಣ್ಣನ ಮಗ ಅಂದರೆ ಬಿಂದುಮಾಧವ ಕಷ್ಟಲ್ಲಿದ್ದಾನೆ ಸಾರ್, ಅವನಿಗೆ ಹಣದ ಅವಶ್ಯಕತೆ ಬಹಳವಿದೆ. ಅದಲ್ಲದೆ ಮದುವೆ ಕೂಡ ಮಾಡಿಕೋತಾ ಇದಾನೆ...'

'ನಾನು ಅವನ ಬಗ್ಗೆ ಅಷ್ಟು ಯೋಚಿಸಿಯೇ ಇಲ್ಲ. ನನ್ನದೇ ತಪ್ಪು. ಪಾಪ ತಂದೆತಾಯಿ ಇಲ್ಲದ ಹುಡುಗ. ನಾನೇ ಅವನಿಗೆ ಎಲ್ಲಾ. ನನ್ನನ್ನು ಬಿಟ್ಟು ಯಾರನ್ನು ಕೇಳುತ್ತಾನೆ? ಭರತ ಅವರೆ. ಅಥವಾ ನಿಮ್ಮನ್ನು ಕಮಲ ಖೋಟೆ ಎಂದು ಕರೆಯಬೇಕೇ?'..

ನಾವಿಬ್ಬರೂ ನಕ್ಕೆವು.

'ಬಿಂದುಗೆ ಒಂದು ಚೆಕ್ ಕಳಿಸಿಕೊಡ್ತೇನೆ. ಮದುವೆ ಆದಮೇಲೆ ನನ್ನ ಬಂದು ನೋಡೋದಕ್ಕೆ ಹೇಳಿ ಈಗ ಅವನ ವಿಷಯ ಬಿಡಿ. ನಿಮ್ಮ ಪುಸ್ತಕಗಳ ಬಗ್ಗೆ ಚರ್ಚಿಸೋಣವೇ? ನಿಮಗೆ ಈ ವಿಷಯಗಳು ಹೇಗೆ ಹೊಳೆಯುತ್ತವೆ ಅಂತ. ಸ್ಫೂರ್ತಿ ಎಲ್ಲಿಂದ ಬರುತ್ತೆ? ಅದೂ ಈ ಪುಸ್ತಕದ ಟ್ರಾಫಿಕ್ ಪೋಲೀಸ್ ಯುವತಿ?'

ಏನೋ ನೆವ ಹೇಳಿ ನಾನು ತಪ್ಪಿಸಿಕೊಂಡು ಬಂದೆ. ಹೀಗೇ ಒಂದು ವಾರದ ನಂತರ ಬಿಂಗೊ ಫೋನ್ ಬಂತು.

''ನಾವಿಬ್ಬರೂ ರಿಜಿಸ್ಟರ್ಡ್ ಮದುವೆ ಮಾಡಿಕೊಂಡೆವು'' ಅಂದ.

'ಕಂಗ್ರಾಟ್ಸ್' ಅಂದೆ.

'ಅದಿರಲಿ, ಇಲ್ಲಿ ಕೇಳು. ಜೀವ್ಸ್‌ಗೆ ಎಲ್ಲಾದರೂ ದೂರದ ಊರಿಗೆ ಬುಕ್ ಮಾಡೋಕೆ ಹೇಳು.'

'ಯಾಕೋ?'

'ಏನಾಯಿತು ಗೊತ್ತಾ? ಚಿಕ್ಕಪ್ಪನ್ನ ನೋಡೋಕೆ ನಾವಿಬ್ಬರೂ ಒಳಗೆ ಹೋದೆವು. ನಾನು ಮತ್ತು ಸುಹಾಸಿನಿ. ಅಲ್ಲೇ ನಿನ್ನ ಪುಸ್ತಕ ಟೇಬಲ್ ಮೇಲೆ ಬಿದ್ದಿತ್ತು. ಅದನ್ನು ನೋಡಿ ಸುಹಾಸಿನಿ ಚಿಕ್ಕಪ್ಪನ್ನ 'ನಿಮಗೆ ಈ ಕಮಲ ಖೋಟೆಯ ಪುಸ್ತಕಗಳು ಇಷ್ಟವೇ' ಅಂತ ಕೇಳಿದಳು... ಅದಕ್ಕೆ ಚಿಕ್ಕಪ್ಪ 'ಅವರೇ ನನಗೆ ಬಹಳ ಇಷ್ಟವಾದ ಸಾಹಿತಿ'. ಅವರು ಬರೆದಿರುವುದನ್ನೆಲ್ಲ ಓದಿದ್ದೇನೆ. ಈಗಿನದಂತೂ ಅದ್ಭುತವಾಗಿದೆ' ಎಂದರು.

ಅದಕ್ಕೆ ಸುಹಾಸಿನಿ 'ಸರ್, ನಾನೇ ಕಮಲ ಖೋಟೆ' ಎಂದಳು. ಆಗ ನನಗೂ ಶಾಕ್, ಚಿಕ್ಕಪ್ಪನಿಗೂ ಶಾಕ್. ಅದಕ್ಕೆ ಚಿಕ್ಕಪ್ಪ ಇಲ್ಲ, ಈವತ್ತು ಬೆಳಿಗ್ಗೆ ನಾನು ನಿಜವಾದ ಕಮಲ ಖೋಟೆಯವರನ್ನು ನೋಡಿದ್ದೇನೆ.

ನೋಡಮ್ಮ, ನೀನು ಸುಳ್ಳು ಹೇಳ್ತಿದ್ದೀಯ ಅಂದರು. 'ಇಲ್ಲ ಸಾರ್' ಎಂದು ಅವಳು ತನ್ನ ವಿಷಯ ಪೂರ್ತಿ ಹೇಳಿದಳು. ಚಿಕ್ಕಂದಿನಿಂದಲೇ ಬರೆಯಲು ಶುರುಮಾಡಿದಳಂತೆ. ಮನೆಯವರು ಬಯ್ಯದಿರಲಿ ಅಂತ ಕಮಲ ಖೋಟೆ ಎಂಬ ಹೆಸರಿಟ್ಟುಕೊಂಡು ಬರೆದಳಂತೆ. ಇದೆಲ್ಲ ಕೇಳಿದನಂತರ ಚಿಕ್ಕಪ್ಪ ನಂಬಿದರು. ಆಮೇಲೆ ಇಬ್ಬರೂ ನನ್ನನ್ನು ಬಯ್ಯಲು ಶುರುಮಾಡಿದರು. ನಾನು ಏನಾದರೂ ಹೇಳಬೇಕಲ್ಲ. ಬರ್ಟಿ ಮೊದಲಿನಿಂದಲೂ ಹೀಗೆಯೇ. ಶಾಲೆಯಲ್ಲೂ ಅವನಿಗೆ ಏನೇನೋ ಭ್ರಮೆ. ಆದರೂ ನಾನೇ ಕಮಲ ಖೋಟೆ ಎಂದು ಹೇಳಿದಾಗ ನಾನೂ ನಂಬಿದೆ... ಏನೇ ಆಗಲಿ ಅವರಿಬ್ಬರಿಗೂ ನಿನ್ನ ಮೇಲೆ ಬಹಳ ಕೋಪ ಬಂದಿದೆ. ಸುಹಾಸಿನಿ ನಿನ್ನ ಮೆಲೆ ಕಂಪ್ಲೇಂಟ್ ಕೊಡುತ್ತಾಳಂತೆ.. ಸ್ವಲ್ಪ ದೂರ ಹೊರಟುಹೋಗು ಎಂದು ಫೋನ್ ಕೆಳಗಿಟ್ಟ

'ನೋಡು ಜೀವ್ಸ್ ಈ ಬಿಂಗೊ ಮಾಡಿಟ್ಟಿರೋದು!'

'ಸಾರ್, ನಿಮಗೆ ಪ್ಲೇನ್‌ನಲ್ಲಿ ಭೂತಾನ್‌ಗೆ ಟಿಕೆಟ್ ತಂದಿದೀನಿ. ಈವತ್ತು ಸಂಜೇನೆ. ನೀವು ಹೊರಡುವುದು ಉತ್ತಮ' ಎಂದ.

★★★

ಸರಿ, ಅಂತೂ ನಾನು 9 ವಾರ ಭೂತಾನಿನಲ್ಲಿ ಇದ್ದು ವಾಪಸ್ಸು ಬಂದೆ.

'ಜೀವ್ಸ್ ಈಗ ವಾತಾವರಣ ಹೇಗಿದೆ' ಎಂದು ಕೇಳಿದೆ?

'ಸಾರ್, ಮೊದಲು ಸ್ವಲ್ಪ ತೊಂದರೇನೇ ಇತ್ತು. ಶ್ರೀ ಬಿಂದುಮಾಧವ ಅವರು ನಿಮ್ಮ ಬಗ್ಗೆ ಏನೇನೋ ಹೇಳಿ ಬಿಟ್ಟಿದ್ದರು. ಮೊದಲಿನಿಂದಲೂ ಭ್ರಮೆ ಇತ್ಯಾದಿ.'

'ಅಂದರೆ, ತಲೆ ಸರಿಯಾಗಿಲ್ಲ, ನಾನು ಹುಚ್ಚ' ಇತ್ಯಾದಿ.

''ಹೌದು ಸಾರ್ ಸ್ವಲ್ಪ ಹಾಗೆಯೇ ಇತ್ತು. ಆಮೇಲೆ ನಾನೇ ಹೋಗಿ ಸುಹಾಸಿನಿ ಮೇಡಮ್ ಜೊತೆ ಮಾತಾಡಿದೆ. ಸ್ನೇಹಕ್ಕಾಗಿ ಇಷ್ಟೆಲ್ಲ ಮಾಡಿದ್ದಾರೆ ಸಾಹೇಬರು ಎಂದು ವಿವರಿಸಿದೆ. ಈಗ ಅವರಿಗೆಲ್ಲಾ ನೀವು ಬಹಳ ಇಷ್ಟವಾಗಿದ್ದೀರಿ. ಶ್ಯಾಮರಾವ್ ಚಿಕ್ಕನೆಯವರು ನಿಮ್ಮನ್ನು ನೋಡಬೇಕಂತೆ. ಸುಹಾಸಿನಿಯವರು, ಅಂದ್ರೆ ಕಮಲ್ ಖೋಟೆಯವರು, ಈ ಪ್ರಸಂಗವನ್ನೆ ಆಧರಿಸಿ ಒಂದು ಕಾದಂಬರಿ ಕೂಡಾ ಬರೆಯುತ್ತಾರಂತೆ.. ಸಾರ್, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀ ಬಿಂದುಮಾಧವ ಅವರು ತಮ್ಮ ಪತ್ನಿಯೊಂದಿಗೆ ಸಂತೋಷವಾಗಿದ್ದು ನಿಮ್ಮಿಂದ ದೂರವಿರುತ್ತಾರಲ್ಲವೇ?''

'ಹೌದು! ಇನ್ನೊಂದೆರಡು ವರ್ಷ ಅವನನ್ನು ನೋಡದೆ ಇದ್ದರೂ ಪರ್ವಾಗಿಲ್ಲ ಒಳ್ಳೇದು ಮಾಡಿದೆ ಜೀವ್ಸ್!'

✤

---

## ಕೃಪೆ

ತರುಣಿಯೊಬ್ಬಳು ತಾನು ಮದುವೆಯಾಗಲಿರುವ ಹುಡುಗನನ್ನು ತಂದೆತಾಯಿಗೆ ಪರಿಚಯಿಸಲು ಕರೆತಂದಳು. ಊಟೋಪಚಾರದ ನಂತರ ಅವಳ ತಂದೆ - ಅಂದರೆ ಭಾವಿ ಮಾವ - ಅವನನ್ನು ವಿಚಾರಿಸತೊಡಗಿದರು.

ಏನು ನಿನ್ನ ಯೋಜನೆಗಳು?

ನಾನೊಬ್ಬ ಕನ್ನಡ ಪಂಡಿತ, ಹುಡುಗ ಹೇಳಿದ.

ಸರಿ, ಆದರೆ ನನ್ನ ಮಗಳಿಗೊಂದು ದೊಡ್ಡ ಮನೆ ಮಾಡಬೇಕಲ್ಲ. ಅವಳಿಗೆ ಅಂತಹ ಮನೆಯಲ್ಲಿ ಇದ್ದು ಅಭ್ಯಾಸ, ಭಾವಿ ಮಾವ ಹೇಳಿದ.

ತಾಯಿ ಭುವನೇಶ್ವರಿಯ ಕೃಪೆಯಿಂದ ಆಗುತ್ತದೆ.

ಅವಳಿಗೆ ಎಂಗೇಜ್‌ಮೆಂಟ್ ರಿಂಗ್?

ತಾಯಿ ಭುವನೇಶ್ವರಿಯ ಕೃಪೆಯಿಂದ ಸಿಗುತ್ತದೆ, ಭಾವಿ ಅಳಿಯ ಹೇಳಿದ.

ನಾಳೆ ಮಕ್ಕಳಾದ ಮೇಲೆ ಅವರ ಪಾಲನೆ ಪೋಷಣೆ?

ತಾಯಿ ಭುವನೇಶ್ವರಿಯ ಕೃಪೆ.

ಹೀಗೆ ಭಾವಿ ಮಾವ ಏನು ಕೇಳಿದರೂ ಅವನು ಅದೇ ಉತ್ತರ ನೀಡತೊಡಗಿದ.

ನಂತರ ಭಾವಿ ಮಾವನನ್ನು ಹುಡುಗನ ಭಾವಿ ಅತ್ತೆ ಕೇಳಿದರು: ಹುಡುಗ ಏನಂತಾನೆ?

ಭಾವಿ ಮಾವ ಅಂದರೆ ಹುಡುಗಿಯ ತಂದೆ ಹೇಳಿದರು: ನಾನೇ ಆ ಭುವನೇಶ್ವರಿ ಎಂದು ಅವನು ತಿಳಿದುಕೊಂಡಿದ್ದಾನೆ.

# ನವ ಪೀಳಿಗೆಯ ಫೋನು

**- ಎಚ್. ಗೋಪಾಲಕೃಷ್ಣ**

ಹುಡುಗರು ಪ್ರೀತೀಗೆ ಅಂತ ಮಾಡೋ ಕೆಲಸಗಳು ಎಷ್ಟು ಫಜೀತಿ ಮಾಡುತ್ವೆ ಗೊತ್ತಾ? ಮೊನ್ನೆ ಯಾವುದೋ ಹುಟ್ಟಿದ ಹಬ್ಬವೋ ಮದುವೆ ದಿನವೋ ಅಥವಾ ಹೊಟ್ಟೆತುಂಬಾ ಉಣ್ಣೆ ದಿನವೋ ಆದಾಗ ನನ್ನ ಮಕ್ಕಳು, ಸೊಸೆ ಸೇರಿ ನನಗೆ ಒಂದು ಮುಯ್ಯಿ ಮಾಡಿ ಗಿಫ್ಟು ಅಂತ ಒಂದು ಹೊಸಾ ನ್ಯೂ ಜನರೇಷನ್ ಫೋನ್ ಅಂತೆ ಅದನ್ನ ಕೊಟ್ರು. ನನ್ನ ಹತ್ತಿರ ಹಳೇದು ಒಂದು ಫೋನು ಇತ್ತು, ಅದೋ ಕಿಸೇಲಿ ಮಡಗಬಹುದು ಮತ್ತು ಯಾವುದೇ ಸಮಯದಲ್ಲೂ ಯಾರಿಗೆ ಬೇಕಾದರೂ ಫೋನು ಹಚ್ಚಬಹುದಿತ್ತು. ಇವಾಗ ಇವರು ಕೊಟ್ಟರಲ್ಲಾ ಫೋನು ಅದಕ್ಕೆ ಅದೇನೇನೋ ಅಟ್ಯಾಚುಮೆಂಟುಗಳು ಮತ್ತು ಸಖತ್ ಯೂಸರ್ ಅನ್ ಫ್ರೆಂಡ್ಲಿ! ಪ್ಯಾಂಟಿನ ಜೇಬಲ್ಲಿ ಇದನ್ನ ಇಟ್ಟರೆ ಕೂತಾಗ ಎದ್ದಾಗ ಬಿದ್ದು ಹೋಗುತ್ತೆ, ಬಿದ್ದು ಹೋಗಲಿ ಅಂದರೆ ಅದರ ಮುಖ ಒಡೀತದೆ, ಅದಕ್ಕೆ ಅದೆಷ್ಟೋ ಕುಕ್ಕ ಬೇಕು - ಹೆಚ್ಚು ಕಡಿಮೆ ನನ್ನ ಒಂದು ತಿಂಗಳ ಪೆನ್ಷನ್ ಹಣ. ಒಂದು ತಿಂಗಳ ಪೆನ್ಷನ್ ಹಣ ಬರೀ ಫೋನಿನ ಮುಖಕ್ಕೆ ಕೊಟ್ಟರೆ ಜೀವನ ಮಾಡೋದು ಹೇಗೆ? ಇದಕ್ಕೋಸ್ಕರ ಬೇರೆ ದೊಡ್ಡ ಜೇಬಿರುವ ಷರ್ಟು ಹೊಲಿಸಿದ್ದಾಯಿತು. ಅದನ್ನ ಹೇಗೆ ಉಪಯೋಗಿಸಬೇಕು ಅನ್ನೋದನ್ನ ಒಂದೂವರೆ ತಿಂಗಳು ಕ್ಲಾಸಿಗೆ ಹೋಗಿ ಕಲಿತೆ, ಆದರೂ ಈಗಲೂ ನನಗೆ ಎಲ್ಲವೂ ಬರುತ್ತೆ, ನಾನು ಸರ್ವಜ್ಞ ಎಂದು ಹೇಳಿಕೊಳ್ಳುವ ನಂಬಿಕೆ ಬಂದಿಲ್ಲ. ಇವೆಲ್ಲಕ್ಕಿಂತಲೂ ನನಗೆ ಕೊರೀತಿರೋ ಮುಖ್ಯವಾದ ದುಃಖ ಅಂದರೆ ಸರೀಕರ ಜತೆಗೆ ಹೆಜ್ಜೆಹೆಜ್ಜೆಗೂ ಅವಮಾನಕ್ಕೆ ಒಳಗಾಗ್ತಾ ಇದೀನಲ್ಲಾ ಎನ್ನುವ ಯಾರಿಗೂ - ಸ್ವತಃ ಹೆಂಡತೀಗೂ ಹೇಳಿಕೊಳ್ಳಲಾಗದ ಬೇಗುದೀನೋ ದುಗುಡವೋ ಅಥವಾ ಅದೇನು ಹಾಳೋ....!

ಹೀಗೆ ಹೇಳಿದರೆ ನಿಮಗೆ ಅರ್ಥವಾಗೋಲ್ಲ ಅಂತ ನನಗೆ ಗೊತ್ತು - ಯಾಕೆ ಅಂದರೆ ನೀವೂ ಸಹ ಇದೇ ಪಾಡು ಪಟ್ಟಿದ್ದೀರಾ ಮತ್ತು ಇನ್ನೂ ನಿಮ್ಮ ಹೊಸಾ ಫೋನು ನಿಮಗೆ ಹೊಂದಿಕೆಯಾಗಿಲ್ಲ ಅನ್ನೋದೂ ನನಗೆ ತಿಳಿದಿದೆ. ನನ್ನ ಕಷ್ಟ ಹೇಳಿದರೆ ಅದರಲ್ಲಿ ನಿಮ್ಮ ಕಷ್ಟವೂ ಕಾಣಬಹುದು ಅಂತ ಅಂದುಕೊಂಡೇ..... ನನ್ನ ಫಜೀತಿ ನಿಮಗೆ ಅರುಹಲೇ?

ಯಾವುದಾದರೂ ಫೋನು ಬಂದಕೂಡಲೇ ಎಡಗಡೆಯ ಒಂದು ಗುಂಡಿ ಒತ್ತಿ ಹಲೋ ಅಂತ ಇದ್ವಾ? ಈಗ ಹಾಗೆ ಆಗಲ್ಲ! ಫೋನು ರಿಂಗಿಸಿದ ಕೂಡಲೇ ಅದೇನೋ ಹಸಿರು ಕೆಂಪು ಬಣ್ಣ ಬಂದುಬಿಡುತ್ತೆ ಮತ್ತು ಯಾವುದೋ ಬಣ್ಣದ ಲೈಟು ಒತ್ತಿ, ಫೋನು ಕಟ್ ಆಗಿಬಿಡುತ್ತೆ. ಯಾರು ಫೋನು ಮಾಡಿದೋರು ಗೊತ್ತಾಗಲ್ಲ, ಅವರೇ ಮಾಡಲಿ ಮತ್ತೆ ಅಂತ ಕಾಯೋಣಾ ಅಂದರೆ ಅನ್‌ನೆಸೆಸರಿ ಟೆನ್ಷನ್ನು! ಇದು ಮನೆ ಒಳಗಡೆ ಇದ್ದಾಗಿನ ಕಥೆಯಾದರೆ ಮನೆಯಿಂದ ಆಚೆ ಹೋದಾಗ ಫೋನು ಬಂದರೆ ಯಾವುದನ್ನ ಒತ್ತಬೇಕು, ಯಾವುದನ್ನ ಒತ್ತಬಾರದು ಏನೂ ಗೊತ್ತೇ ಆಗದು! ಬೆಳಕಿನಲ್ಲಿ ಏನೂ ಕಾಣದು. ಹಳೇ ಫೋನಿನಲ್ಲಿ ಯಾವ ಹೊತ್ತಾದರೂ ಎಲ್ಲವೂ ಕಾಣುತ್ತಿತ್ತು - ಈಗಲೋ ಮನೆಯಲ್ಲಿದ್ದಾಗ ಕಾಣುತ್ತೆ, ಹೊರಗಡೆ...

ಊಹೂಂ ಸುತರಾಂ ಏನೂ ಇಲ್ಲ. ಯಾಕೋ ಅದಕ್ಕೆ ಕರೀ ಅಂದರೆ ಕರೀ ಗಾಜು ಹಾಕಿದ್ದಾರೆ. ಇದು ಯಾಕೆ ಹಾಕಿದ್ದಾರೆ ಅಂದರೆ ಯಾರಿಗೂ ಗೊತ್ತಿಲ್ಲ!

ಈ ಸಮಸ್ಯೆ ಮಕ್ಕಳಿಗೆ ಹೇಳಿದೆ. ಇದು ಹೈಟೆಕ್ಕು ಸ್ವಲ್ಪ ಸಮಯ ಕಾಯಬೇಕು ಅಂತ ಮಕ್ಕಳ ಉಪದೇಶ ಕೇಳಿ ಸಹಿಸಿದೆ. ಸ್ವಲ್ಪ ಅಂದರೆ ಎಷ್ಟು ಅಂತ ಕೇಳಲಿಲ್ಲ – ಈಗ ಸುಮಾರು ತಿಂಗಳುಗಳೇ ಕಳೆದಿದೆ ಆದರೂ ಹಗಲಿನಲ್ಲಿ ಆಚೆ ಇರಬೇಕಾದಾಗ ಫೋನು ಬಂದರೆ ಅದನ್ನ ರಿಸೀವು ಮಾಡಲು ಆಗುತ್ತಿಲ್ಲ. ಇದಕ್ಕಿಂತಲೂ ತಮಾಷೆ ಅಂದರೆ ಮೊನ್ನೆ ಯಾವುದೋ ಫೋನು ಬಂದಿದೆ ವಾಪಸ್ಸು ಅವರಿಗೇ ತುರ್ತಾಗಿ ಮಾಡಬೇಕು. ನಂಬರು ಗೊತ್ತಾಗ್ತಿಲ್ಲ! ಬ್ಯಾಂಕಿನಲ್ಲಿ ಇದ್ದೀನಿ ನಾನು ಆಗ.

ಕೌಂಟರಿನಲ್ಲಿ ಕೂತಿದ್ದ ಹುಡುಗಿ ಹತ್ತಿರ ಹೋದೆ. ನನ್ನ ಮೊಮ್ಮಗಳ ವಯಸ್ಸಿನವಳು.

ಮೇಡಂ ಅಂತ ಅವರ ಗಮನ ಸೆಳೆದೆ. ಈಗ ಹತ್ತು ನಿಮಿಷ ಹಿಂದೆ ಒಂದು ಫೋನು ಬಂದಿತ್ತು, ಈಗ ಅವರಿಗೆ ವಾಪಸ್ಸು ಮಾಡಬೇಕು, ಮಾಡಿಕೊಡ್ತೀರಾ? ಅಂತ ಫೋನು ಮುಂದೆ ಹಿಡಿದೆ. ಹುಡುಗಿ ತಲೆ ಓರೆ ಮಾಡಿ ನಕ್ಕಳು.

ಕ್ಯಾ ಬೋಲಾ ಅಂದಳು.

ಮತ್ತೆ ಹೇಳಿದೆ – ಈಗ ಹತ್ತು ನಿಮಿಷ ಹಿಂದೆ ಒಂದು ಫೋನು ಬಂದಿತ್ತು, ಈಗ ಅವರಿಗೆ ವಾಪಸ್ಸು ಮಾಡಬೇಕು, ಮಾಡಿಕೊಡ್ತೀರಾ?

ಕನ್ನಡ್ ನೈ ಆತಾ..... ಅಂದಳು.

ಕನ್ನಡ ಬರೋಲ್ಲಾಂದಮೇಲೆ ಇಲ್ಲಿ ಯಾಕೆ ಕೂತಿದ್ದೀ ಅಂತ ಬೇರೆ ಸಮಯದಲ್ಲಿ ಆಗಿದ್ದರೆ ಜಗಳ ಕಾಯಬಹುದಿತ್ತು. ಆದರೆ ನನ್ನ ಕೆಲಸ ನೋಡಿ, ಇಂಗ್ಲಿಷಿನಲ್ಲಿ ರಿಕ್ವೆಸ್ಟು ಮಾಡಿದೆ. ಹುಡುಗಿ ಗಂಭೀರಳಾದಳು. ನಾವು ಹೀಗೆ ಫೋನು ತಗೊಳ್ಳೋ ಹಾಗಿಲ್ಲ..... ಅಂದಳು.

ತೆಪ್ಪಗೆ ಆಚೆ ಬಂದೆ. ಹೈಸ್ಕೂಲು ವಯಸ್ಸಿನ ಹುಡುಗ ಎದುರಿಗೆ ಕಾಣಿಸಿತು. ಅದನ್ನ ಲೋಯ್ ಮರೀ ಅಂತ ಕೂಗಿ ನಿಲ್ಲಿಸಿದೆ. ನನ್ನ ಸಮಸ್ಯೆ ಹೇಳಿ ಫೋನು ಮಾಡಿಕೊಡ್ತೀಯಾ ಅಂತ ಕೇಳಿದೆ. ಅಷ್ಟರಲ್ಲೇ ಅದಕ್ಕೆ ಯಾವುದೋ ಫೋನು ಬಂತು. ಅವನ ಫೋನು ತೆಗೆದ, ನಂದು ಅವನ ಕೈಲೇ ಇತ್ತು. ವೈಟ್ ಮ್ಯಾನ್ ಸಂ ಓಲ್ಡ್ ಬಗ್ಗರ್ ಈಸ್ ಹ್ಯಾವಿಂಗ್ ಸಂ ಪ್ರಾಬ್ಲಂ.... ಅಂತ ಹೇಳಿ ನನ್ನ ಕಡೆ ತಿರುಗಿದ.

ಏನೋ ಮರೀ ನಾನು ಬಗ್ಗರ್ ಥರ ಕಾಣಿಸ್ತೀನಾ ಅಂದೆ.

ಅಯ್ಯೋ ತಾತಾ ಈಗೆಲ್ಲರೂ ಹಾಗೇ ಮಾತಾಡೋದು, ಹೇಳಿ ನಿಮ್ಮ ಪ್ರಾಬ್ಲಮ್ಮು.... ಅಂದ. ಪ್ರಾಬ್ಲಂ ಹೇಳಿದೆ.

ಫೋನು ಮಾಡಿಕೊಟ್ಟ! ಯಾವುದೋ ಚಿಲ್ಟಾರಿ ಹತ್ತಿರ ಬಗ್ಗರ್ ಅನಿಸಿಕೊಂಡೆನಲ್ಲಾ ಅನ್ನುವ ನೋವು ಈಗಲೂ ನನ್ನ ಕಾಡುತ್ತಿದೆ.

ಹೈಟೆಕ್ ಫೋನಿನಲ್ಲಿ ವಾಟ್ಸಪ್ಪು ಅಂತ ಇದೆ, ಅದು ಕಲಿತ್ಕೋ.... ಅಂತ ಮಗಳು ಅಪ್ಪಣೆ ಮಾಡಿದ್ದಳು ಅಂತ ಅದನ್ನ ಕಲಿತೆ ಹಾಗೂ ಉಪಯೋಗಿಸಲೂ ಶುರು ಹಚ್ಚಿದೆ. ಬೆಳಿಗ್ಗೆ ಏಳುತ್ತಿದ್ದ ಹಾಗೇ ಮೆಸೇಜುಗಳೋ ಮೆಸೇಜುಗಳು, ತಲೆ ಚಿಟ್ಟು ಹಿಡಿದು ಹೋಗುವಷ್ಟು

ಆದರೂ ಹೊಸಾದು ನೋಡಿ, ಒಂದು ರೀತಿಯ ಖುಷಿ! ಇಲ್ಲಿ ತಮಾಷೆ ಏನಾಯಿತು ಅಂದರೆ ಮೆಸೇಜುಗಳು ಯಾರಿಗೋ ಹೋಗಬೇಕಾಗಿದ್ದು ಮತ್ಯಾರಿಗೋ ಹೋಗೋದೂ, ಯಾರಿಗೋ ತಿಳಿಸಬೇಕಾಗಿದ್ದ ಸಂಗತಿ ಮತ್ಯಾರಿಗೋ ತಿಳಿಯೋದೂ..... ಹೀಗೆ ಆಗುತ್ತಿತ್ತು.

ಹೊಸಾದು, ಒಂದು ರೀತಿ ಟೀತಿಂಗ್ ಪ್ರಾಬ್ಲಮ್ಮುಗಳು ಅಂತ ಇಗ್ನೋರಿಸಿದೆ. ಒಂದು ಪೋಲೀಸು ಗುಂಪಿಗೆ ಯಾರೋ ನನ್ನನ್ನೂ ಸೇರಿಸಿಕೊಂಡು ಬಿಟ್ಟಿದ್ದಾರೆ. ಈ ಗುಂಪಿಗೆ ಈ ರೀತಿ ಅವರಿಗೆ ಹೋಗಬಾರದ ಸುದ್ದಿ ಹೋಗಿಬಿಡಬೇಕೇ? ಅದೂ ಎಂತಾ ಸುದ್ದಿ ಅಂತೀರೀ?

ನನ್ನ ಸ್ನೇಹಿತನ ಮೊಮ್ಮಗ ಯಾವತ್ತೂ ಹೆಲ್ಮೆಟ್ಟು ಹಾಕಲ್ಲ. ಅವನು ಬರೋ ರಸ್ತೇಲಿ ಪೋಲೀಸಿನೋರು ಹೆಲ್ಮೆಟ್ಟು ಹಾಕದೇ ಬರೋರನ್ನ ಹಿಡಿದು ಹಿಡಿದು ಫೈನು ಹಾಕಲಿಕ್ಕೆ ನಿಂತಿರ್ತಾರೆ. ಮೊನ್ನೆ ನಮ್ಮ ಮೈನ್‌ರೋಡಿನಲ್ಲೇ ಆರು ಜನ ಬಿಳಿ ಷರ್ಟು ಹಾಕಿದ್ದ ಟ್ರಾಫಿಕ್ ಪೋಲೀಸರು ಹೆಲ್ಮೆಟ್ ಇಲ್ಲದವರನ್ನ ಹಿಡಿದು ಹಿಡಿದು ಹಾಕ್ತಾ ಇದ್ದರು. ಹೆಲ್ಮೆಟ್ ಇಲ್ಲದವರನ್ನು ಹಿಡಿಯಲು ನರರಾಕ್ಷಸರು ಕಾಯುತ್ತಿದ್ದಾರೆ – ಎಚ್ಚರ ಅಂತ ಸಂದೇಶ ಗೆಳೆಯನಿಗೆ ರವಾನಿಸಿದೆ. ಆದರೆ ಸಂದೇಶ ಗೆಳೆಯನ ಬದಲಿಗೆ ಪೋಲೀಸರಿಗೆ ಹೋಗಬೇಕೇ? ಪೋಲೀಸರ ಸರ್ಕಲ್ಲಿನಲ್ಲಿ ಅದೂ ವಾಟ್ಸಪ್ಪಿನಲ್ಲಿ ಇದಕ್ಕೆ ವ್ಯಾಪಕವಾದ ಆಕ್ರೋಶ ಕೋಪ ವ್ಯಕ್ತವಾಗಬೇಕೇ? ಹೂ ಈಸ್ ದಿಸ್ ಈಡಿಯಟ್? ಅಂತ ಕೆಲವರು ಪ್ರಶ್ನೆ ಹಾಕಿದ್ದರು ! ಇವರನ್ನ ಮೊದಲು ಕಿತ್ತುಹಾಕಿ ಗುಂಪಿನ ಹಿತಾಸಕ್ತಿಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ ಅಂತ ಒಂದು ಒತ್ತಾಯ ಕೂಡ ಹೊರಡಬೇಕೇ? ಸರಿ ಇವರು ಕ್ಷಮಾಪಣೆ ಕೇಳಲಿ ಈ ಸಲ ಇವರನ್ನ ಕ್ಷಮಿಸೋಣಾ ಅಂತ ನನಗೆ ನಿರೂಪ ಹೊರಡಿಸಿದರು. ಬೇಡ ಹೋಗ್ರಯ್ಯಾ ನಿಮ್ಮ ಗುಂಪು ಅಂತ ಬಿಟ್ಟು ಬಿಡೋಣ ಅಂತ ಅನಿಸಿತು. ಆದರೆ ಗುಂಪಿನಲ್ಲಿ ಬರೋ ಸಂದೇಶಗಳು ಏನು ಮಜಾ ಇರುತ್ತೆ ಅಂದರೆ ಅದನ್ನು ಬಿಡೋಕ್ಕೆ ಮನಸೇ ಆಗಲಿಲ್ಲ. ಕ್ಷಮಾಪಣೆ ಕೇಳಿ ಇನ್ನೂ ಸುಮಾರ್ಗದಲ್ಲೇ ಇದೀನಿ ! ಈ ಗುಂಪಿನಲ್ಲಿ ಬರೋ ಸಂದೇಶಗಳ ಬಗ್ಗೆ ನೀವು ಇನ್ನೊಂದು ಸಲ ಸಿಕ್ತೀರಲ್ಲಾ ಆಗ ಹೇಳತೀನಿ – ಏನು ಮಜಾ ಕೊಡುತ್ತೆ ಅಂತೀರಾ!

ಮೊನ್ನೆ ಅಂದರೆ ಕಳೆದ ವಾರ ಮತ್ತೂ ಒಂದು ತಮಾಷೆ ಪ್ರಸಂಗ ನಡೀತು. ಈ ಹೈಟೆಕ್ ಫೋನು ಚಾರ್ಜಿಗೆ ಹಾಕಿದಾಗ ಬರೋ ಫೋನುಗಳನ್ನು ರಿಂಗಿಸಿ ನಮಗೆ ಸೂಚನೆ ಕೊಡೋದಿಲ್ಲ ಅಂತ ನಾನು ನಂಬಿದ್ದೀನಿ. ಯಾಕೆ ಅಂದರೆ ಈವರೆಗೂ ನನಗೆ ಈ ಸೂಚನೆ ಬಂದಿಲ್ಲ. ಆದರೆ ನನ್ನ ಹೆಂಡತಿ ನಿನಗೆ ಕಿವಿ ಕೇಳೋಲ್ಲ ಅದರಿಂದ ನಿನಗೆ ಫೋನು ರಿಂಗ್ ಆಗಿದ್ದು ಕೇಳಿಸೊಲ್ಲ ಅಂತಾಳೆ. ಅಯ್ಯೋ ಹೆಂಗಸರು ಬಿಡಿ, ಮದುವೆಯಾದ ಮಾರನೇ ದಿವಸದಿಂದಲೇ ಗಂಡನಿಗೆ ಕಿವಿ ಕೇಳೋಲ್ಲ ಅಂತ ನಂಬಿರ್ತಾರೆ !!

ತಮಾಷೆ ಪ್ರಸಂಗ ಹೇಳ್ತಾ ಇದ್ದೆ ಅಲ್ವೇ? ಸ್ನಾನ ಮುಗಿಸಿ ಆಚೆ ಬಂದೆ. ಚಾರ್ಜರ್‌ನಿಂದ ಫೋನು ತೆಗೆದೆ. ಇಲ್ಲಿ ಇನ್ನೊಂದು ಸಂಗತಿ – ಈ ಫೋನು ಬಂದಮೇಲೆ ನನ್ನ ಮಾತುಕಥೆ ಎಲ್ಲಾ ನಿಂತು ಹೋಗಿದೆಯಂತೆ ಮತ್ತು ಯಾವಾಗಲೂ ನಿದ್ದೆಯಲ್ಲೂ ಸಹ ನಾನು ಫೋನಿನಲ್ಲೇ ಮುಳುಗಿರುತ್ತೇನೆ ಎಂದು ನನ್ನ ಹೆಂಡತಿ ಮಕ್ಕಳು ದೂರುತ್ತಾರೆ. ಇದು ಹಾಗಿರಲಿ ಬಿಡಿ – ಅವರಿಗೆ ಹೊಟ್ಟೆಕಿಚ್ಚು – ನನ್ನ ಹತ್ತಿರ ಫೋನು ಇದೆ ಅಂತ. ಆದರೆ ನನಗೊಂದು ರೀತಿಯ ನೆಮ್ಮದಿ ಸಿಕ್ಕಿದೆ – ಹೆಂಡತಿ ಹೇಳುವ ಅವರಿವರ ವಿಷಯಗಳಿಂದ ಮುಕ್ತಿ ದೊರಕಿದೆ ಮತ್ತು

ಇದು ಹೇಳಬಾರದೋ ಹೇಳಬಹುದೋ ತಿಳಿಯದು – ಆಗಾಗ್ಗೆ ಹಾಂ ಹಾಂ ಅಂತ ಅಂದು ನಿಮಗೆ ಹಾಳಾದ್ದು ಕಿವಿ ಬೇರೆ ಕೇಳೊಲ್ಲ ಅಂತ ಹಂಗಿಸಿಕೊಂಡು ಹೇಳಿದ್ದನ್ನೇ ಜೋರಾಗಿ ಕೇಳಿಸಿಕೊಳ್ಳುವ ಅಗತ್ಯತೆಯಿಂದ ತಪ್ಪಿಸಿಕೊಂಡಿದ್ದೀನಿ !

ಚಾರ್ಜರ್ ನಿಂದ ಫೋನು ತೆಗೆದೆ ಅಂದೆ. ಯಾರದ್ದೋ ಫೋನು ಬಂದಿತ್ತು ಅಂತ ಒಂದು ನಂಬರು ಕಾಣಿಸಿತು. ಆ ನಂಬರಿಗೆ ಫೋನು ಒತ್ತಿದೆ. ಆಕಡೆಯಿಂದ ಹಲೋ ಅಂದಿತು – ಹೆಣ್ಣುದನಿ. ದನಿ ಕೇಳಿದ ಕೂಡಲೇ ಅವರು ನನ್ನ ಕಲೀಗು, ದಿವಸಕ್ಕೆ ಹತ್ತು ಸಲ ಫೋನಾಯಿಸುವ ಗರಗಸ ಅಂತ ಗೊತ್ತಾಯಿತು.

ಈ ನಂಬರಿನಿಂದ ಫೋನು ಬಂದಿತ್ತು, ಯಾರು ನೀವು?

ನೀವು ಯಾರು?

ರೀ ನಿಮ್ಮ ಫೋನಿಂದ ನನಗೆ ಫೋನು ಬಂದಿದ್ದು. ನೀವು ಯಾರು ಅಂತ ಹೇಳ್ರೀ.....

ನಾನು ಗೋಲ್ಡ್ ಮರ್ಚಂಟಿಗೆ ಫೋನು ಮಾಡಿದ್ದೂ..

ನಾನು ಯಾರು ಅಂತ ಅವರಿಗೆ ಗೊತ್ತಾಗಿಲ್ಲ ಅನಿಸಿತು.

ಅಯ್ಯೋ ನಾನು ಡೈಮಂಡ್ ಮರ್ಚಂಟೂ ಅಮ್ಮ, ಡೈಮಂಡ್ ಬೇಕಿದ್ದರೆ ಹೇಳಿ ಚೀಪಾಗಿ ಹಾಕಿಕೊಡ್ತೀನಿ..... ಅಂದೆ.

ಎಷ್ಟು ಚೀಪು?

ಗ್ರಾಮಿಗೆ ನೂರು ಕಡಿಮೆ....

ಡೈಮಂಡ್‌ನ ಗ್ರಾಂ ಲೆಕ್ಕದಲ್ಲಾ ಮಾರೋದೂ?

ಇಲ್ಲಾಮ್ಮಾ ಇದು ಹೊಸಾ ಸಿಸ್ಟಮ್ಮು....

ಕ್ಯಾರೆಟ್ ಲೆಕ್ಕದ್ದು ಗ್ರಾಂ ಅಂತ ಹೇಳಿಬಿಟ್ಟಿದ್ದೆ !

ಇಲ್ಲಾರೀ ಈಗ ಬೇಡ್ರೀ..

ಪ್ಲಾಟಿನಮ್ಮೂ? ಅದು ತಗೋತೀರಾ?

ಇಲ್ಲ ಅದೂ ಬೇಡಾ..

ಹಾಗಿದ್ರೆ ಬರೀ ಗೋಲ್ಡಾ?

ಗೋಲ್ಡು ಮಾರಬೇಕಿತ್ತು ಅದಕ್ಕೇ ಈ ನಂಬರಿಗೆ ಮಾಡಿದ್ದೆ. ಅವರೆಲ್ಲೋ ನಿಮಗೆ ಈ ನಂಬರು ಕೊಟ್ಟಿರಬೇಕು.....

ನಗು ಮುಕ್ಕು ಹರಿಕೊಂಡು ಬರ್ತಿತ್ತು. ನಾನು ನಕ್ಕರೆ ಅವರಿಗೆ ನನ್ನ ಗುರುತು ಸಿಗುತ್ತೆ ಅನ್ನಿಸಿ ಸರೀಮ್ಮಾ ಡೈಮಂಡು ಬೇಕಿದ್ದರೆ ಫೋನು ಮಾಡಿ..... ಅಂತ ಫೋನು ಡಿಸ್‌ಕನೆಕ್ಟು ಮಾಡಿದೆ. ಎಲ್ಲರ ಹತ್ತಿರವೂ ಈ ತಮಾಷೆ ಹೇಳಿಕೊಂಡು ನಕ್ಕೆ.

ಇವತ್ತು ಬೆಳಿಗ್ಗೆ ಒಂದು ಫೋನು ಬಂತು. ಹಲೋ ಅಂದೆ. ನೀವೇನಾ? ಅಂತ ಆಕಡೆಯಿಂದ ದನಿ ಕೇಳಿಸಿತು. ಮೊನ್ನೆ ನಾನು ಫೋನಾಯಿಸಿದವರೇ...... ಹೌದೂ ಅಂದೆ.

ಮೊನ್ನೆ ಯಾರೋ ನಿಮ್ಮ ಫೋನಿನಿಂದ ಮಾತಾಡಿ ಅವರು ಡೈಮಂಡ್ ಮರ್ಚಂಟು ಅಂತ ಹೇಳಿದರೂ ರೀ..... ಯಾರು ಯಾರದ್ದೋ ಸಿಮ್‌ನ ಬೇರೆಯವರೂ ಉಪಯೋಗಿಸ್ತಾರಂತೆ ಹುಷಾರು.... ಅಂತ ಅರ್ಧತಾಸು ಎಚ್ಚರಿಕೆ ಕೊಟ್ಟರು.

ನಾನೂ ಈ ನೆಪದಿಂದಲಾದರೂ ಡೈಮಂಡ್ ಮರ್ಚಂಟು ಆದೆನಲ್ಲಾ ಅಂತ ಖುಷಿಯಾಯಿತು. ಹೈಟೆಕ್ ಫೋನು ಏನೇನು ಮಾಡುತ್ತೆ ನೋಡಿ.. ನನ್ನ ಈ ಹೈಟೆಕ್ ಫೋನಿನಲ್ಲಿ ಅದೆಷ್ಟೋ ಆಪ್‌ಗಳಿವೆ, ಆದರೆ ಅದರಲ್ಲಿ ಶೇ. 10 ರಷ್ಟನ್ನೂ ನಾನು ಉಪಯೋಗಿಸುತ್ತಿಲ್ಲ - ನಿಮ್ಮ ಹಾಗೇ! ಆದರೆ ಬಿ.ಎಂ.ಟಿ.ಸಿ. ಬಸ್ಸಿನಲ್ಲಿ ಕೂತಾಗ ಪಕ್ಕದವರು ಗಾಂಭೀರ್ಯದಿಂದ ಕೂತು ಬಿಗುಮಾನದ ಮುಖ ಹೊತ್ತು ಜೇಬಿನಿಂದ ಈ ಹೈಟೆಕ್ ಫೋನು ತೆಗೆದು ಅದರ ಸ್ವಿಚ್ಚು ಒತ್ತಿ ಗಹನವಾಗಿ ಅದೇನೋ ಭಾರೀ ಮುಖ್ಯವಾದ ಸಂಗತಿಯನ್ನು ಓದುವವರಂತೆ ನಟಿಸಿದಾಗ - ನನಗೂ ಹಾಗೇ ಮಾಡಬೇಕು ಅಂತ ಅನಿಸಿ ಜೇಬಿನಿಂದ ಫೋನು ಆಚೆ ತೆಗೆದು..... ಹೋಗಲಿ ಬಿಡಿ !

✤





**ನಾನು ಇನ್ನೂ ಎರಡು ವರ್ಷ ಜ್ಯೂನಿಯರ್. ಪ್ರಶಸ್ತಿ ಇಲ್ಲಾಂತ ಆಯ್ತು!!**

– ದಂನಆ

- ನಮ್ಮನ್ನು ಹೊಗಳಿಕೊಂಡು ನಾವೇ ಹಾಡತೊಡಗಿದರೆ ಯಾರೂ 'ಒನ್ಸ್ ಮೋರ್' ಎನ್ನುವುದಿಲ್ಲ.
- ಇಂಡಿಯ ಈಸ್ ಎ ನೈಸ್ ಹೌಸ್ ಆನ್ ಎ ಬ್ಯಾಡ್ ಸ್ಟ್ರೀಟ್.
- ತುಂಬಾ ಹಣ ನಿಮ್ಮ ಕೈಗೆ ಬಂದರೂ ಅದು ನಿಮ್ಮದಾಗಿರಲಿಲ್ಲ ಎಂದರೆ ನೀವು ಬ್ಯಾಂಕ್ ಕ್ಯಾಷಿಯರ್ ಆಗಿರುತ್ತೀರಿ.
- ಟುಡೆ ಇಫ್ ಯು ಆರ್ ನಾಟ್ ಸೋಷಿಯಲ್ ಯು ಆರ್ ಆಂಟಿಸೋಷಿಯಲ್.
- ಚಿಕ್ಕವನಿದ್ದಾಗ 'ನೀನು ದೊಡ್ಡವನಾದ ಮೇಲೆ ಏನಾಗಬೇಕು?' ಎಂದು ಕೇಳುತ್ತಿದ್ದರು. ಆದರೆ 'ನೀನು ಈಗ ಏನಾಗಿದ್ದೀಯ?' ಎಂದು ಯಾರೂ ಕೇಳರು.
- ಯು ಆರ್ ಹಿಯರ್ ಓನ್ಲಿ ಫಾರ್ ಎ ಶಾರ್ಟ್ ವಿಸಿಟ್. ಡೋಂಟ್ ಹರಿ, ಡೋಂಟ್ ವರಿ. ಅಂಡ್ ಬಿ ಶ್ಯೂರ್ ಟು ಸ್ಮೆಲ್ ದಿ ಫ್ಲವರ್ಸ್ ಅಲಾಂಗ್ ದಿ ವೆ.
- ಸನ್ಯಾಸಿಗಳೂ ನಟರೇ ಸರಿ. ಮಾರುಕಟ್ಟೆಯಲ್ಲಿ ಯಶಸ್ವಿಯಾಗಿರುವ ಒಬ್ಬ ಸನ್ಯಾಸಿ ಮಾರುಕಟ್ಟೆಯಲ್ಲಿ ಯಶಸ್ವಿಯಾಗಿರುವ ಒಬ್ಬ ಸ್ಟಾರ್‌ನಷ್ಟೇ ಒಳ್ಳೆಯ ನಟ.
- ಖಿನ್ನತೆಗೆ ಮನರಂಜನೆ ಔಷಧಿ ನಿಜ. ಆದರೆ ಮನರಂಜನೆಯೇ ಒಂದು ವ್ಯಸನವಾಗಬಾರದು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಐ ಲೈಕ್ ಟು ಥಿಂಕ್ ಆಫ್ ಮನಿ ಅಸ್ ದಿ ಫ್ರೀಡಂ ಆಫ್ ನಾಟ್ ಹ್ಯಾವಿಂಗ್ ಟು ವರಿ ಅಬೌಟ್ ಮನಿ.
- ಹಿಂದೆ ಮನುಷ್ಯ ನೀರಿದ್ದೆಡೆಗೆ ಹೋಗುತ್ತಿದ್ದ. ಇಂದು ಅವನಿರುವ ಕಡೆಗೇ ನೀರು ಬರಬೇಕು ಎಂದು ಬಯಸುತ್ತಿದ್ದಾನೆ.
- ನೊಬಡಿ ಮೇಡ್ ಎ ಗ್ರೇಟರ್ ಮಿಸ್ಟೇಕ್ ದ್ಯಾನ್ ಹಿ ಹು ಡಿಡ್ ನಥಿಂಗ್ ಬಿಕಾಸ್ ಹಿ ಕುಡ್ ಡು ಓನ್ಲಿ ಎ ಲಿಟಲ್.
- ಸ್ವೆಟರ್ ಖರೀದಿಸುವ ಸಾಮರ್ಥ್ಯವಿರುವ ಕಾರಣಕ್ಕಾಗಿ ಚಳಿಯನ್ನು ಸಹಿಸಿಕೊಳ್ಳುವ ಶಕ್ತಿ ಇಲ್ಲದಾಗಿರುತ್ತದೆ.
- ನಿಮಗೆ ಅವಕಾಶ ಸಿಕ್ಕರೆ ಯಾವ ಬೀದಿಯ ಯಾರ ಮನೆಯ ಕಿಟಕಿಯೊಳಗೆ ಇಣುಕುತ್ತೀರಿ? ಯಾರನ್ನು ಮಾತಿನಲ್ಲಿ ಬೀದಿಗೆಳೆಯುತ್ತೀರಿ? ಅದಕ್ಕಿಂತ ಮುಖ್ಯವಾಗಿ ನಿಮ್ಮ ಯಾವ ಗುಟ್ಟುಗಳನ್ನು ಬಚ್ಚಿಡುತ್ತೀರಿ?
- ಬ್ಯಾನರ್ಜಿ, ಮುಖರ್ಜಿ, ಚಟರ್ಜಿ ಗೊತ್ತು, ಆದರೆ ಲೆತಾರ್ಜಿ ಬಗ್ಗೆ?

✤

# ಹವಾಮಾನ ಮುನ್ಸೂಚನೆ

## (ಬೆಂಗಳೂರಿಗೆ ಮಾತ್ರ)

**- ಸಿ.ಆರ್. ಸತ್ಯ**

ನಮ್ಮ ಸೂಪರ್ ಕಂಪ್ಯೂಟರ್ ಹೇಳೋ ಪ್ರಕಾರ, ಬೆಂಗಳೂರಿಗೆ ನಾಳೆಯ ಹವಾಮಾನ ಮುನ್ಸೂಚನೆ ಹೀಗಿದೆ:

ದಕ್ಷಿಣ ದಿಕ್ಕಿನಿಂದ ಒತ್ತಡದ ಗಾಳಿ ಇದ್ದಕ್ಕಿದ್ದಂತೇ ಪೂರ್ವ ದಿಕ್ಕಿಗೆ ತಿರುಗುವ ಸಾಧ್ಯತೆಯಿಂದ, ಕೋರಮಂಗಲ ಮತ್ತು ಎಚ್.ಎಸ್.ಆರ್. ಲೇಔಟ್‌ನ ಫ್ಲೈ ಓವರ್‌ಗಳ ಕೆಳಗೆ ಆರು ಅಡಿ ನೀರು ನಿಂತು, ಅಲ್ಲಿರುವ ಮನೆಗಳಿಗೆ ಒಂದರಿಂದ ಎರಡು ಅಡಿ ನೀರು ನುಗ್ಗುವ ಸಾಧ್ಯತೆ ಇದೆ.

ಈ ಮಧ್ಯೆ, ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಎರಡು ಆಂಬುಲೆನ್ಸ್‌ಗಳು ಮತ್ತು ಒಂದು ಟ್ರ್ಯಾಕ್ಟರ್ ಕೆಟ್ಟು ನಿಂತು, ಸಂಜೆ ಮೇಲೆ ಆರು ಗಂಟೆಗಳ ಕಾಲ ಟ್ರಾಫಿಕ್ ಜ್ಯಾಮ್ ಆಗಲಿದೆ. ಹವಾಮಾನ ಉಷ್ಣತೆಯಿಂದಾಗಿ, ಕೆಂಪೇಗೌಡ ವಿಮಾನ ನಿಲ್ದಾಣದ ಬಳಿ ಗಾಳಿ ಮೇಲೇರಿ, ಬಿ.ಡಿ.ಎ. ಹತ್ತಿರ ಆಗುವ ಗಾಳಿ ಕುಸಿತದಿಂದ, ಕಾವೇರಿ ಜಂಕ್ಷನ್ ಕಡೆಗೆ ಅರವತ್ತು ಎಪ್ಪತ್ತು ಕಿಲೋ ಮೀಟರ್‌ಗಳ ವೇಗದಲ್ಲಿ ಬಂದು, ಅರ್ಧಗಂಟೆಯಲ್ಲಿ ನಾಲ್ಕು ಸೆಂಟಿಮೀಟರ್ ಮಳೆ ತರಿಸಲಿದೆ. ಇದರಿಂದಾಗಿ ಮೇಕ್ರಿ ಸರ್ಕಲ್, ಕಾವೇರಿ ಥಿಯೇಟರ್ ಮತ್ತು ವಿಂಡ್ಸರ್ ಮ್ಯಾನರ್ ಬ್ರಿಡ್ಜ್‌ಗಳ ಕೆಳಗೆ ನಾಲ್ಕು ಅಡಿ ನೀರು ನಿಲ್ಲುವುದಲ್ಲದೆ, ಪ್ಯಾಲೆಸ್ ಗ್ರೌಂಡ್ಸ್ ಮುಂದೆ, ಗಾಲ್ಫ್ ಕೋರ್ಸ್ ಮುಂದೆ ಮತ್ತು ಚಾಲುಕ್ಯ ಸರ್ಕಲ್ ಪಕ್ಕ ತಲಾ ಎರಡು ಮರಗಳು ಬಿದ್ದು, ನಾಲ್ಕು ಆಟೋ ರಿಕ್ಷಾ, ಎರಡು ಮಾರುತಿ ಕಾರ್‌ಗಳು, ಒಂದು ಗೋಡೆ, ಹತ್ತು ಲೈಟ್ ಕಂಬಗಳು ನಾಶವಾಗುತ್ತವೆ. (ಕಾವೇರಿ ಅಂಡರ್ ಪಾಸ್‌ನಲ್ಲಿ ನಿಲ್ಲೋ ನೀರಿನಲ್ಲಿ, ಯಾವ ಬಗೆಯ ವಿಹಾರಿ ಬೋಟ್‌ಗಳನ್ನು ಚಾಲನೆ ಮಾಡಬಾರದು ಮತ್ತು ಮೀನುಗಾರಿಕೆಗೆ ಯಾರೂ ಇಳಿಯಬಾರದು ಎಂದು ಸರ್ಕಾರ ಎಚ್ಚರಿಕೆ ನೀಡಲಿದೆ–ಸಂ).

ಬನ್ನೇರುಘಟ್ಟ ರಸ್ತೆಯಲ್ಲಿ ಡಿವೈಡರ್ ಎತ್ತರಕ್ಕೆ ನೀರು ನಿಂತು, ರೋಡ್ ಯಾವುದು–ಮೋರಿ ಯಾವುದು ಅಂತ ತಿಳಿಯದೇ, ಒಂದು ಸ್ಕೂಲ್ ವ್ಯಾನ್ (ಖಾಲಿ), ಎರಡು ಸ್ಕೂಟರ್ ಗಳು, ಮೂರು ಗ್ರಾನೈಟ್ ಲಾರಿಗಳು ಮೋರಿಗೆ ನುಗ್ಗುವ ಸಾಧ್ಯತೆಯಿದೆ. ಅವುಗಳನ್ನು ಮೇಲಕ್ಕೆ ಎತ್ತಲು ಹೋಗಿ ಒಬ್ಬರೋ ಇಬ್ಬರೋ ಕೊಚ್ಚಿಕೊಂಡು ಹೋಗಿ, ಎಲೆಕ್ಟ್ರಾನಿಕ್ ಸಿಟಿ ಹತ್ತಿರ ಪತ್ತೆ ಆಗುತ್ತಾರೆ. ಆದರೆ ಬದುಕಿರ್ತಾರೆ ಅಂತ ಕಂಪ್ಯೂಟರ್ ಹೇಳ್ತಿದೆ.

ಚಿಕ್ಕಪೇಟೆ, ತರಗುಪೇಟೆ ಮತ್ತು ಕಾಟನ್‌ಪೇಟೆ ಮೇಲೆ, ಮೋಡಗಳು ಇಲ್ಲದಿದ್ದರೂ, ಎರಡು ಅಥವಾ ಮೂರು ಟ್ರಾನ್ಸ್‌ಫಾರ್ಮರ್‌ಗಳು ಸ್ಫೋಟವಾಗಿ, ಸಿಡಿಲು ಮತ್ತು ಮಿಂಚಿನ ವಾತಾವರಣ ಆಗಲಿದೆ. ವಿಧಾನಸೌಧ ಮತ್ತು ಮಂತ್ರಿಗಳು ವಾಸಿಸುವ ಜಾಗಗಳನ್ನು ಬಿಟ್ಟು, ಮಿಕ್ಕಡೆಯಲ್ಲೆಲ್ಲಾ ಬೆಂಗಳೂರು ಪೂರ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲ. ಪಶ್ಚಿಮ ಮತ್ತು ಉತ್ತರ ಬಡಾವಣೆಗಳಲ್ಲಿ ಸುಮಾರು ನೂರು ಮರಗಳು ಬೀಳುತ್ತೆಂಬ ಅಂದಾಜಿದ್ದು, ಫೈರ್

ಎಂಜಿನ್‌ಗಳ ಮೇಲೆ ಬೀಳುವ ಸಂಭವವಿದೆ. ಹೀಗಾಗಿ, ನಾಳೆಯೆಲ್ಲಾ ಅಲ್ಲಿನ ರಸ್ತೆಗಳಲ್ಲಿ, ಅದರಲ್ಲೂ ಏರ್‌ಪೋರ್ಟ್ ರಸ್ತೆಯಲ್ಲಿ ವಾಹನ ಸಂಚಾರ ಇರೋದಿಲ್ಲ.

ಕುಮಾರಸ್ವಾಮಿ ಬಡಾವಣೆ ಮತ್ತು ನಾಗರಭಾವಿಯ ಕಡೆ, ಸುಂಟರ ಗಾಳಿ ಎದ್ದು, ಸಂಜೆ ಆರು ಗಂಟೆಯ ನಂತರ, ಮೂರು ಬಸ್ ಶೆಲ್ಟರ್‌ಗಳು ಹಾರಿಹೋಗೋದಲ್ಲದೆ ಹತ್ತರಿಂದ ಹನ್ನೆರಡು ಮನೆಗಳು ಕುಸಿದು ಬೀಳುತ್ತವೆ. ಪುಟ್ಟೇನಹಳ್ಳಿ ನಿವಾಸಿಗಳಿಗೆ ಎಚ್ಚರಿಕೆ. ಅಟ್ಲಾಂಟಿಕ್ ಸಾಗರದಲ್ಲಿ ವಾಯು ಕುಸಿತ ಆಗಿರುವುದರಿಂದ, ಪುಟ್ಟೇನಹಳ್ಳಿ ಕೆರೆಯ ಮೇಲೆ ಮೇಘ ಸ್ಫೋಟವಾಗಲಿದ್ದು, ಮನೆಯೊಳಗೆ ನೀರು ನುಗ್ಗುವುದಲ್ಲದೆ, ಕಪ್ಪೆ ಮತ್ತು ನೀರುಹಾವುಗಳು ಅತಿಥಿಗಳಾಗಿ ಬರಲಿವೆ. ಕೋಣನಕುಂಟೆಯ ರಸ್ತೆಯಲ್ಲಿ ಸಿಡಿಲು ಬಡಿದು, ಎರಡೋ ಮೂರೋ ಕುರಿಗಳು ಸಾವನ್ನಪ್ಪುವ ಸಂದರ್ಭಗಳಿವೆ. ಜಪಾನ್‌ನಲ್ಲಿ ಇಂದು ಆದ ಭೂಕಂಪದಿಂದ ಹೊರಟ ಸುನಾಮಿ ಅಲೆಯಿಂದಾಗಿ ವಿಧಾನಸೌಧ ಹತ್ತಿರದ ಮೆಟ್ರೋ ಕಂಬಿಗಳು ನೀರಿನ ಕೆಳಗೆ ಮುಳುಗುವುದರಿಂದ, ಸರ್ಕಾರ ದೋಣಿ ವ್ಯವಸ್ಥೆ ಮಾಡುವ ಯೋಚನೆಯಲ್ಲಿದ್ದು, ಜನರು ದೋಣಿಯಲ್ಲಿ ಮನೆಗೆ ಹೋದರೆ ಉತ್ತಮ. ಉತ್ತರ ಬೆಂಗಳೂರಿನಲ್ಲಿ ಒಂದೆರಡು ಮೊಬೈಲ್ ಟವರ್‌ಗಳು ನೆಲ ಕಚ್ಚುವುದರಿಂದ, ಟೆಲಿಫೋನ್ ವ್ಯವಸ್ಥೆ, ಅಲ್ಲಿ ಬಿಟ್ಟು ಮಿಕ್ಕೆಲ್ಲಾ ಕಡೆಗಳಲ್ಲಿ ಕಾರ್ಯನಿರತವಾಗಿದ್ದು, ಜನರು ಬಿ.ಬಿ.ಎಂ.ಪಿ.ಗೆ ದೂರು ಕೊಡಲು ಯಾವ ತೊಂದರೆಯೂ ಇರುವುದಿಲ್ಲ. ಆದರೆ ಬಿ.ಬಿ.ಎಂ.ಪಿ.ಯ ಮುಖ್ಯ ಕಚೇರಿಯೇ ನೀರಿನಲ್ಲಿ ಮುಳುಗುವ ಸಾಧ್ಯತೆಯಿಂದಾಗಿ, ದೂರುಗಳನ್ನು ದೇವರಿಗೆ ತಲುಪಿಸಿದರೆ ಉತ್ತಮ ಎಂದು ಕಂಪ್ಯೂಟರ್ ಹೇಳುತ್ತಿದೆ. ಅಂದ ಹಾಗೆ, ನಮ್ಮ ಹವಾಮಾನ ಕಛೇರಿಯೂ ನೀರಿನಲ್ಲಿ ಮುಳುಗುವುದರಿಂದ, ನಾಳೆ ನಮ್ಮ ಮುನ್ಸೂಚನೆ ಹೊರ ಬರುವುದಿಲ್ಲ.

ಈಗ ಒಂದು ಬಿಸಿ ಸುದ್ದಿ ಬರುತ್ತಿದೆ. ಬೆಂಗಳೂರನ್ನು ಸಧ್ಯಕ್ಕೆ ಮರೆತು, ನಮ್ಮ ಪ್ರಪಂಚದ ಕಡೆಗೆ ಕಣ್ಣು ಹಾಯಿಸಿದರೆ, ಅಮೇರಿಕ ಮೇಲೆ ಮತ್ತು ಉತ್ತರ ಕೊರಿಯಾ ಮೇಲೆ ನಾಳೆ ಕಪ್ಪು ಮೋಡಗಳು ಕವಿದು, ನಮ್ಮ ಭೂಮಿಯೇ ನಾಳೆ ನಾಶವಾಗುವ ಹಾಗೆ ಕಾಣುತ್ತೆ. ನಿಮ್ಮ ಜೀವನದಲ್ಲಿ ಏನೇನು ಮಾಡಬೇಕೋ, ಅವನ್ನೆಲ್ಲಾ ಇವತ್ತೇ ಮಾಡಿಬಿಡಿ ಅಂತ ನಮ್ಮ ಸೂಪರ್ ಕಂಪ್ಯೂಟರ್ ನಮಗೆಲ್ಲಾ ಸೂಚಿಸುತ್ತಿದೆ......

✤

## ಎಲ್ಲಿದೆ?

'ಸಕ್ಕರೆ' ಎಂಬ ಪದ ಬಳಸಿ ಒಂದು ವಾಕ್ಯ ರಚನೆ ಮಾಡು.

'ನಾನು ಕಾಫಿ ಕುಡಿದೆ'.

ಅದರಲ್ಲಿ 'ಸಕ್ಕರೆ' ಎಲ್ಲಿದೆ?

ಕಾಫಿಯಲ್ಲಿದೆ.

# ದೋಣಿ ವಿಹಾರ ಭಾಗ್ಯ

**- ಗಣೇಶ ಹೆಗ್ಗಡೆ**

**ಮ**ಕ್ಕಳೇ.... ಇಂದು ನಮಗೆಲ್ಲರಿಗೂ ಒಂದು ಸುದಿನ. ದೋಣಿಯಲ್ಲಿ ಬೆಂಗಳೂರು ನಗರದರ್ಶನದ, ನಿಮ್ಮ ಬಹು ದಿನದ ಕನಸು ಇಂದು ನನಸಾಗುವ ಕಾಲ ಬಂದಿದೆ. ವರುಣನ ಕೃಪೆಯಿಂದ ಶಾಲಾ ಬಾಗಿಲ ಬಳಿಗೇ ವಿಹಾರದ ದೋಣಿ ಬಂದಿರುವುದು ನಿಜಕ್ಕೂ ನಮ್ಮೆಲ್ಲರ ಸೌಭಾಗ್ಯವಾಗಿದೆ. ಈ ವಿಹಾರಕ್ಕಾಗಿ ಶ್ರಮಪಟ್ಟಿರುವ ಶಾಲಾ ಆಡಳಿತ ಮಂಡಳಿಯನ್ನು ನಾವು ಮೊದಲು ಅಭಿನಂದಿಸೋಣ. ಮಕ್ಕಳೆ ಸಾಲಾಗಿ ಬನ್ನಿ. ಹೆಣ್ಣು ಮಕ್ಕಳು ಬಲಭಾಗದ ಬೆಂಚಿನ ಮೇಲೆ ಮತ್ತು ಗಂಡು ಹೈಕ್ಳು ಎಡಭಾಗದ ಬೆಂಚಿನ ಮೇಲೆ ಕುಳಿತುಕೊಳ್ಳಲಿ. ನಿಧಾನವಾಗಿ ದೋಣಿ ಹತ್ತಿ. ಲೈಫ್ ಜಾಕೆಟ್ಟನ್ನು ಹೇಗೆ ಧರಿಸಬೇಕೆಂಬುದನ್ನು ಶಾಲೆಯಲ್ಲಿಯೇ ನೆನ್ನೆ ನಿಮಗೆ ಮನದಟ್ಟು ಮಾಡಿಕೊಡಲಾಗಿದೆ. ಈ ಶಾಲಾ ಪ್ರವಾಸದ ಮುಖ್ಯ ಉದ್ದೇಶ ನಿಮಗೆಲ್ಲಾ ಇಂದಿನ ಬೆಂಗಳೂರು ನಗರದ ದರ್ಶನವನ್ನು ಮಾಡಿಸುವುದು. ಸಮಯದ ಅಭಾವದಿಂದ ಹಾಗೂ ಅಪಾಯದಿಂದ ನಮ್ಮ ಹೆಮ್ಮೆಯ ನಗರದ ಒಂದು ಭಾಗದ ದರ್ಶನ ಮಾತ್ರ ನಿಮಗೆ ಇಂದು ಲಭ್ಯ. ಈ ವಿಹಾರವನ್ನು ಪ್ರಾರಂಭಿಸುವ ಮೊದಲು ಒಂದೆರಡು ಎಚ್ಚರಿಕೆಯ ಮಾತು. ನೀವುಗಳು ಯಾವ ಕಾರಣಕ್ಕೂ ನೀರಿನತ್ತವಾಲಿ ಆಟವಾಡಲು ಹೋಗಬೇಡಿ. ಇದರಿಂದ ದೋಣಿ ಮಗುಚಿ ಅನಾಹುತವಾಗಿ ನಮ್ಮ ನೆಚ್ಚಿನ ಶಾಲೆಗೆ ಹಾಗೂ ಘನ ಸರ್ಕಾರಕ್ಕೆ ಕೆಟ್ಟ ಹೆಸರು ಬಂದೀತು. ಅಕಸ್ಮಾತ್ ನೀರಿನಲ್ಲಿ ಹಾವು... ಮೀನು... ಸ್ಕೂಟರ್.. ಆಟೋರಿಕ್ಷಾ... ಕಾರುಗಳು ಇತ್ಯಾದಿ ತೇಲಿಕೊಂಡು ನಿಮ್ಮ ಪಕ್ಕದಲ್ಲೇ ಹಾದು ಹೋಗುತ್ತಿದ್ದರೆ ಭಯಭೀತರಾಗಬೇಡಿ. ಮಕ್ಕಳೆ ಈಗ ನೀವೆಲ್ಲರೂ ನಿಮ್ಮ ನಿಮ್ಮ ಮನೆ ದೇವರನ್ನು ನೆನೆದು ಈ ಪ್ರಯಾಣ ಶುಭಕರವಾಗಿರಲೆಂದು ಮನದಲ್ಲೇ ಪ್ರಾರ್ಥಿಸಿ. ಒಕ್ಕೊರಲಿನಿಂದ ಎಲ್ಲರೂ ಈ ಹಾಡಿಗೆ ದನಿ ಸೇರಿಸಿ...

*'ದೋಣಿ ಸಾಗಲಿ... ಮುಂದೆ ಹೋಗಲಿ...*

*ಜೀವರಾಶಿಯು... ಉಳಿಯಲಿ.....'*

ಮಕ್ಕಳೆ... ನಮ್ಮ ದೋಣಿ ಈಗ ಮೆಜೆಸ್ಟಿಕ್ ದಾಟಿ ಕಾರ್ಪೊರೇಷನ್ ವೃತ್ತದ ಬಳಿಗೆ ಬರುತ್ತಿದೆ. ಇಲ್ಲಿ ಎರಡು ನಿಮಿಷದ ನಿಲುಗಡೆ ಮಾಡುತ್ತೇವೆ. ಅಗೋ.. ಅಲ್ಲಿ ನೀರಿನಲ್ಲಿ ಅರ್ಧ ಮುಳುಗಿರುವ ಒಂದು ಕಲ್ಲಿನ ಪ್ರತಿಮೆ ಕಾಣಿಸುತ್ತಿದೆಯಲ್ಲವೆ? ನಿಮ್ಮ ಊಹೆ ದಿಟ. ಇದು ಬೆಂಗಳೂರು ಎಂಬ ಈ ಸುಂದರ ನಗರದ ನಿರ್ಮಾಣದ ಕನಸಿಗೆ ಬುನಾದಿ ಹಾಕಿದ ಪಾಳೆಯಗಾರ ಮಾಗಡಿ ಕೆಂಪೇಗೌಡರದು. ಅವರ ಮುಖದಲ್ಲಿ ಯಾಕೋ ಚಿಂತೆಯ ಗೆರೆಗಳು ಅಂದಿರಾ? ದಿಟ... ಅಂದು ತಾನು ಈ ಪಟ್ಟಣ ನಿರ್ಮಿಸಿದಾಗ ಇದ್ದ ನೂರಾರು ಕೆರೆಗಳು ಈಗೆಲ್ಲಿ ಮಾಯವಾಗಿ ಹೋದವು? ಎಂಬ ಚಿಂತೆ ಈ ನಿರ್ಮಾತೃವಿನದು. ಈಗ ಬೆರಳೆಣಿಕೆಯಷ್ಟು ಕೆರೆಗಳು ಮಾತ್ರ ಉಳಿದುಕೊಂಡಿದ್ದು... ಮುಂದಿನ ದಿನಗಳಲ್ಲಿ ಅವೂ ಮಾಯವಾಗಿ ಮುಂದಿನ ಮಳೆಗಾಲದ ಪ್ರವಾಹದಲ್ಲಿ ಎಲ್ಲಿ ತಮ್ಮ ವಿಗ್ರಹ ಸಂಪೂರ್ಣವಾಗಿ



ಮುಳುಗಿ ಹೋಗುವುದೂ ಎಂಬ ಆತಂಕ ಈತನದು. ಹೀಗಾಗದಿರಲಿ ಎಂದು ನಾವು ವರುಣ ದೇವರಿಗೆ ಮತ್ತು ಘನ ಸರ್ಕಾರಕ್ಕೆ ಪ್ರಾರ್ಥನೆ ಸಲ್ಲಿಸೋಣ.

ಮಕ್ಕಳೆ ಈಗ ಎಲ್ಲರೂ ನಿಮ್ಮ ಎಡಕ್ಕೆ ತಿರುಗಿ, ನೀರಿನ ದಂಡೆಯಲ್ಲಿ ಒಂದು ಭವ್ಯವಾದ ಕಲ್ಲಿನ ಕಟ್ಟಡ ನಿಮ್ಮ ಕಣ್ಣಿಗೆ ಗೋಚರಿಸುತ್ತಿದೆಯಲ್ಲವೇ? ಇದು ಕಾರ್ಪೊರೇಷನ್ ಕಛೇರಿ. ಅಂದರೆ ಇಡೀ ರಾಜಧಾನಿಯ ನಾಗರಿಕರ ದೈನಂದಿನ ಬದುಕಿಗೆ ಬೇಕಾಗುವ ಸೌಲಭ್ಯದ ಹೊಣೆಯನ್ನು ಹೊತ್ತಿರುವ ಒಂದು ಆಡಳಿತ ಕಛೇರಿ. ಇದೇನಿದು ಆಶ್ಚರ್ಯ. ದಡದಲ್ಲಿ ಒಂದು ದೊಡ್ಡ ಗುಂಪೇ ನೆರೆದಿದ್ದು ಅವರೆಲ್ಲರ ಕೈಯಲ್ಲಿ ಮೀನಿನ ಗಾಳವಿರುವುದು ನಿಮಗೆ ಗೊಂದಲವಾಗಿರಲಿಕ್ಕೂ ಸಾಕು. ಅವರೆಲ್ಲಾ ಪಾಲಿಕೆಯ, ಅಂದರೆ ಪಾಲು ಪಡೆಯುವ ನೌಕರ ಸಿಬ್ಬಂದಿಗಳು. ನಿಮಗೆ ಸೂಚ್ಯವಾಗಿ ವಿವರಿಸಬೇಕೆಂದರೆ 'ದೆ ಆರ್ ಆಲ್ ಫಿಷಿಂಗ್ ಇನ್ ದಿ ಟ್ರಬಲ್ಡ್ ವಾಟರ್ಸ್! ಮೆ ದೇರ್ ಬೈಬ್ ಸ್ವಾರಿ ಟ್ರೈಬ್ ಇನ್‌ಕ್ರೀಸ್...' ಈ ರಾಜಧಾನಿಯಲ್ಲಿ ಬಹುತೇಕ ಕೆರೆಗಳು ಮತ್ತು ರಾಜಕಾಲುವೆಗಳು ಗಾಯೆಬ್ ಆಗುವುದಕ್ಕೆ ಈ ಪಾಲಿಕೆಯ ಇಂದಿನ ಹಾಗೂ ಹಿಂದಿನ ಅಧಿಕಾರಿಗಳ ಮಹತ್ವದ ಕೊಡುಗೈ ಇರುವುದು ನಮಗೆಲ್ಲರಿಗೂ ಹೆಮ್ಮೆ ತರುವ ವಿಷಯವಾಗಿದೆ. ಅವರೆಲ್ಲರಿಗೂ ಹೃದಯದಾಳದಲ್ಲಿ ನಮಿಸುತ್ತಾ ಎಲ್ಲರೂ ಒಕ್ಕೊರಲಿನಿಂದ ಹಾಡುತ್ತಾ ಸಾಗಿ....

*'ಕೆರೆಯ ನೀರನು... ಕೆರೆಗೆ ಚೆಲ್ಲಿ....'*

ಮಕ್ಕಳೆ ನಿಮ್ಮ ದೋಣಿಯ ಅನತಿ ದೂರದಲ್ಲಿ ವೇಗವಾಗಿ ಒಂದು ಮೋಟಾರ್ ಬೋಟು ಹೋಗುತ್ತಿದೆ ಈ ಬೋಟಿನೊಳಗೆ ಒಬ್ಬ ದಪ್ಪನೆಯ ಹೆಂಗಸು ಹಾಗೂ ಒಬ್ಬ ರಾಜಕಾರಣಿ ಹಾಗೂ ಅವರ ಸುತ್ತ ಮುತ್ತ ಟಿವಿ ಮಾಧ್ಯಮದ ಪ್ರತಿನಿಧಿಗಳು ಇರುವುದು ಕಾಣುತ್ತಿದೆಯಲ್ಲವೇ? ಆಕೆ ಈ ರಾಜಧಾನಿಯ ಮೇಯರ್. ಪಕ್ಕದಲ್ಲಿ ನಿಂತಿರುವವರು ಈ ರಾಜ್ಯದ ನಗರಾಭಿವೃದ್ಧಿ ಸಚಿವರು.. ಆ ಬೋಟಿನೊಳಗೆ ತುಂಬಿಕೊಂಡಿರುವ ಹೂವಿನ ಹಾರಗಳ ರಾಶಿ ಕಂಡು ಅಚ್ಚರಿಗೊಂಡಿರಾ? ಈ ಹಾರಗಳು... ಹಾಗೂ ಪರಿಹಾರಗಳು ವರುಣನ ಕೃಪೆಗೆ ಒಳಗಾಗಿ ಪ್ರಾಣ ಕಳೆದುಕೊಂಡ ಸಂತ್ರಸ್ಥರಿಗೆ. ಈ ಜವಾಬ್ದಾರಿಯನ್ನು ಈ ಸಚಿವರಿಗೆ ಘನ ಸರ್ಕಾರ ವಹಿಸಿಕೊಟ್ಟಿದೆ. ಇಂಥಹ ಕಾಳಜಿಯುಳ್ಳ ಸರ್ಕಾರಕ್ಕೆ ನಾವೆಲ್ಲಾ ಜಯಕಾರ ಹಾಕೋಣ.

ಮಕ್ಕಳೆ, ನಾವು ಈಗ ಸುಬ್ಬಯ್ಯ ಸರ್ಕಲ್ ದಾಟಿ ಸಿದ್ದಯ್ಯ ರಸ್ತೆಯಲ್ಲಿ ಲಾಲ್‌ಬಾಗ್ ಕಡೆಗೆ ಪಯಣ ಬೆಳೆಸುತ್ತಿದ್ದೇವೆ. ನೀವೆಲ್ಲಾ ಈಗ ಇಕ್ಕೆಲಗಳಲ್ಲಿರುವ ನೀರಿನತ್ತ ಗಮನ ಹರಿಸಿ. ನೀರಿನಲ್ಲಿ ತೇಲಿ ಹೋಗುತ್ತಿರುವ ಚಿಕ್ಕ ಪೂರಿಗಳನ್ನು ನೀವು ಗಮನಿಸುತ್ತಿದ್ದೀರಿ. ರಸ್ತೆ ಬದಿಯಲ್ಲಿ ಪಾನಿ ಪೂರಿ ಗಾಡಿಗಳನ್ನು ನಿಲ್ಲಿಸಿದ್ದ ಅಂಗಡಿ ಮಾಲೀಕರು ನೀರಿನ ಮಟ್ಟ ಅಚಾನಕ್ ಏರಿದ್ದನ್ನ ಕಂಡು ಕಂಗಾಲಾಗಿ ಓಡಿ ಹೋಗಿರುವುದು. ಅಂತೆಂದರೆ ಅನಾಥ ಪೂರಿಗಳು ಪಾನಿಯ ಪಾಲಾಗುವುದಕ್ಕೆ ಸಕಾರಣವಾಗಿದೆ.

ಮಕ್ಕಳೇ, ನಿಮಗೆಲ್ಲಾ ಈಗಾ ಹೊಟ್ಟೆ ಚುರ್ ಎನ್ನುತ್ತಿದೆಯೆ? ಚಿಂತೆ ಬೇಡ. ದಾರಿಯಲ್ಲಿ ಎಲ್ಲಾದರೂ ಇಂದಿರಾ ಕ್ಯಾಂಟೀನು ಅಥವಾ ಕ್ಯಾಂಟೀನ್ ಬೋರ್ಡು ನಿಮಗೆ ಕಾಣಿಸಿದರೆ ನಮಗೆ ಹೇಳಿ. ದೋಣಿಯನ್ನು ಪಾರ್ಕ್ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ನಿಮಗೆ ಹಾರದ..... ಕ್ಷಮಿಸಿ ಉಪಾಹಾರದ ವ್ಯವಸ್ಥೆಯನ್ನ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ.

ಮಕ್ಕಳೆ, ಇನ್ನು ಇಪ್ಪತ್ತು ನಿಮಿಷ ಪಯಣಿಸಿದರೆ ಈ ವಿಹಾರ ದರ್ಶನ ಅಂತಿಮಗೊಳ್ಳುತ್ತದೆ. ಇನ್ನೇನು ನಾವು ಶಾಂತಿನಗರ ಬಸ್‌ಸ್ಟ್ಯಾಂಡ್ ತಲುಪಲಿದ್ದೇವೆ. ಇದು ಈ ವಿಹಾರದ ಅತ್ಯಂತ ಕಷ್ಟಕರ ಘಟ್ಟ. ನೀವ್ಯಾರೂ ಗಾಬರಿ ಬೀಳುವ ಅವಶ್ಯಕತೆ ಇಲ್ಲ. ನೀರಿನ ಸೆಳೆತ ಹಾಗೂ ಆಳ ಹೆಚ್ಚಿದ್ದರೆ ಆತಂಕವಿಲ್ಲ. ಎಕ್ಸ್‌ಪರ್ಟ್ ಮತ್ತು ಅನುಭವಸ್ಥ ನಾವಿಕ ನಮ್ಮ ಜತೆಗಿದ್ದಾನೆ. ನಿಮ್ಮೆಲ್ಲರ ಸೇಫ್ಟಿಗೆ ಅವನು ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡಿದ್ದಾನೆ ಮಕ್ಕಳೆ. ಅಗೋ ಅಲ್ಲಿ ಕಾಣುತ್ತಿರುವುದೇ ಶಾಂತಿನಗರ ಬಸ್ ನಿಲ್ದಾಣ. ಇಲ್ಲಿ ಸಾರಿಗೆ ಬಸ್‌ಗಳ ಬದಲಿಗೆ ವಿವಿಧ ಏರಿಯಾಗಳಿಗೆ ಸಾರಿಗೆ ದೋಣಿಗಳ ವ್ಯವಸ್ಥೆಯನ್ನು ಘನ ಸರ್ಕಾರ ಮಾಡಿ, ನೊಂದು ಬೆಂದಿರುವ ನಾಗರೀಕರ ಅಪಾರ ಪ್ರಶಂಸೆಗೆ ಪಾತ್ರವಾಗಿದೆ. ಅಯ್ಯೋ ಇದೇನಿದು ಗದ್ದಲ. ಬಸ್ ನಿಲ್ದಾಣದ ಎದುರು ಜನರ ಒಂದು ದೊಡ್ಡ ಗುಂಪು. ನಡುವೆ ಆಳವಿರುವ ನೀರಿನಲ್ಲಿ ಏನೋ ಗಾಬರಿಗೊಂಡು ಹುಡುಕುತ್ತಿರುವವರಲ್ಲಿ ಇದೇನಿದು ಚಪ್ಪಾಳೆ, ಸಜೀವವಾಗಿರುವ ಒಬ್ಬ ವ್ಯಕ್ತಿಯನ್ನ ಮ್ಯಾನ್ ಹೋಲಿನಿಂದ ಎತ್ತುತ್ತಿರುವವರ ಕೈಯಲ್ಲಿ ತಂಬೂರಿಯನ್ನು ಗಟ್ಟಿಯಾಗಿ ಹಿಡಿದಿರುವ ವ್ಯಕ್ತಿ. ನೀವೆಲ್ಲಾ ಭಾವಿಸಿರುವ ಹಾಗೆ ತ್ರಿಲೋಕ ಸಂಚಾರಿಯಾದ ನಾರದನಲ್ಲ, ಯಾವುದೋ ಯಕ್ಷಗಾನದ ಕಲಾವಿದರೂ ಅಲ್ಲ ಬದಲಿಗೆ ಒಬ್ಬ ಬಡ ಸಂಗೀತ ಶಿಕ್ಷಕ. ಈ ರುದ್ರಮಳೆಯಲ್ಲಿ ಮನೆಗೆ ನಡೆದುಕೊಂಡು ಹೋಗುತ್ತಿರುವ ನೀರಿನ ರಭಸಕ್ಕೆ ಮ್ಯಾನ್ ಹೋಲಿನ ಮುಚ್ಚಳ ಓಪನ್ ಆಗಿ ಈತ ಕಾಣದೆ ತಂಬೂರಿ ಸಮೇತಾ ಗುಂಡಿಯೊಳಗೆ ಬಿದ್ದು ಬಿಟ್ಟಿದ್ದಾನೆ. ಆದರೆ ತಂಬೂರಿಯ ಎರಡೂ ಬುರುಡೆಗಳು ಭೂಮಿಯ ಮೇಲಿದ್ದು... ಈತನ ಬುರುಡೆ ಹಾಗೂ ಪ್ರಾಣ ಉಳಿದುಕೊಂಡಿದೆ. ಮಾಧ್ಯಮ ವೃಂದಕ್ಕೆ ಇದು ಬ್ರೇಕಿಂಗ್ ನ್ಯೂಸ್ ಆಗಿ ಸ್ಥಳಕ್ಕೆ ದೌಡಾಯಿಸಿ ಬಂದಿದೆ. ಮಕ್ಕಳೆ ಈ ವ್ಯಕ್ತಿಯ ಜೀವನೋತ್ಸಾಹ ನಾವೆಲ್ಲರೂ ಮೆಚ್ಚುವಂಥಾದ್ದು ಹಾಗೂ ಅನುಕರಿಸುವಂಥಾದ್ದು. ಎಲ್ಲರೂ ಕಿವಿಗೊಟ್ಟು ಕೇಳಿ ಮಾಧ್ಯಮದ ಮುಂದೆ ಇಡೀ ಬೆಂಗಳೂರಿನ ನಾಗರೀಕರಿಗೆ 'ಈಸಬೇಕು... (ಆಕಸ್ಮಾತ್ ಬದುಕುಳಿದರೆ) ಇದ್ದು ಜಯಿಸಬೇಕು...!' ಎಂಬ ಸಕಾಲಿಕ ಸಂದೇಶವನ್ನು ಸಾರುತ್ತಿದ್ದಾರೆ ಈ ಅದೃಷ್ಟ ಜೀವಿ!

✤

# ಗೂಬೆಯ ಪ್ರಭಾವ

**- ಡಿ.ವಿ. ಗುರುಪ್ರಸಾದ್**

**ಸ**ಹಾಯಕ ಪೊಲೀಸ್ ಅಧೀಕ್ಷಕನಾಗಿ ಅದೇ ತಾನೇ ಇಲಾಖೆಯಲ್ಲಿ ನನ್ನ ಸೇವೆಯನ್ನು ಪ್ರಾರಂಭಿಸಿದ್ದೆ. ಊರ ಹೊರವಲಯದಲ್ಲಿರುವ ಒಂದು ಪುರಾತನ ಕಲ್ಲಿನ ಕಟ್ಟಡವೇ ನನ್ನ ಕಛೇರಿ ಹಾಗೂ ನಿವಾಸವಾಗಿತ್ತು. ಮೊದಲ ಮಹಡಿಯ ನಿವಾಸದಲ್ಲಿ ವಿಶಾಲವಾದ ಬಾಲ್ಕನಿಗೆ



ಬಂದು ನಿಂತಕೂಡಲೇ ಎದುರಿಗೆ ನಯನ ಮನೋಹರ ದೃಶ್ಯ ಕಾಣುತ್ತಿತ್ತು. ಅನತಿ ದೂರದಲ್ಲಿಯೇ ವೃಕ್ಷಗಳಿಂದ ಕಣ್ಗೊಳಿಸುತ್ತಿದ್ದ ಗುಡ್ಡಗಳು, ಅದರ ತಪ್ಪಲಿನಲ್ಲಿ ಜುಳು ಜುಳು ಹರಿಯುತ್ತಿರುವ ಕಾಲುವೆ, ಮನೆಯ ಆವರಣದಲ್ಲಿ ಇದ್ದ ಹೂವಿನ ಗಿಡಗಳು, ಬಾಲ್ಕನಿಗೆ ತಾಗಿದ್ದ ದೊಡ್ಡಬೇವಿನ ಮರ ಮುದ ತರುತ್ತಿದ್ದವು. ಮನೆಯಂತೂ ಸೊಗಸಾಗಿದೆ, ಜತೆಯಲ್ಲಿ ವಾಸಮಾಡಲು ಯಾರೂ ಇಲ್ಲವಲ್ಲ ಎಂದು ಮನದಲ್ಲಿಯೇ ನಾನು ಮರುಗುತ್ತಿದ್ದುದ್ದನ್ನು ನನ್ನ ಮಾತಾ-ಪಿತರು ಕೇಳಿಸಿಕೊಂಡರೇನೋ. ಕೆಲವೇ ತಿಂಗಳುಗಳಲ್ಲಿ ನನ್ನ ಲಗ್ನವಾಯಿತು. ಪತ್ನಿ ಮನೆಗೆ ಬಂದ ಮೇಲಂತೂ ಎಲ್ಲ ಗೆಳೆಯರೂ ನನಗೆ 'ಹನಿಮೂನ್ ಪೋಸ್ಟಿಂಗ್' ಸಿಕ್ಕಿದೆ ಎಂದು ಛೇಡಿಸುತ್ತಿದ್ದರು.

ಪತ್ನಿ ಮನೆಗೆ ಬಂದ ಕೆಲವೇ ಸಮಯದ ನಂತರ ಒಂದು ರಾತ್ರಿ ಕಿಟಾರನೆ ಕಿರುಚಿಕೊಂಡು ನನ್ನನ್ನು ತಿವಿದು ಎಬ್ಬಿಸಿದಳು. ಏನಾಯಿತು ಎಂದು ಕೇಳಿದರೆ ಅವಳ ಬಾಯಿಂದ ಮಾತೇ ಹೊರಡಲಿಲ್ಲ. ಕೂಡಲೇ ಲೈಟ್ ಹಾಕಿ ನೋಡಿದೆ. ಕೋಣೆಯ ಒಳಗಡೆ ಒಂದು ಬಾವಲಿ ಪಟ-ಪಟನೆ ರೆಕ್ಕೆ ಬಡಿಯುತ್ತಾ ಅಲ್ಲಿಂದಿಲ್ಲಿಗೆ ಹಾರಾಡುತ್ತಿತ್ತು. ಕೂಡಲೇ ಕಛೇರಿಯಲ್ಲಿದ್ದ ಕಾನ್‌ಸ್ಟೇಬಲ್‌ನನ್ನು ಸಹಾಯಕ್ಕೆ ಕರೆದೆ. ಆತ ಒಂದು ಟವಲ್ ಬೀಸಿ ಆ ಬಾವಲಿಯನ್ನು ಹೊರಗೋಡಿಸಿದ. ''ಬಾವಲಿಗಳು ಮನೆಯೊಳಗೆ ಬರುವುದು ಅಪಶಕುನವಲ್ಲವೇ?'' ಎಂದು ನನ್ನ ಪತ್ನಿ ಕೇಳಿದಾಗ ಉತ್ತರಿಸಿದ ಆ ಕಾನ್‌ಸ್ಟೇಬಲ್, ''ಮೇಡಂ ನೀವು ಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ. ಈ ಬಾವಲಿ ಆಗಿಂದ್ದಾಗ್ಗೆ ಈ ಮನೆಯೊಳಗೆ ಬರುತ್ತಲೇ ಇರುತ್ತದೆ'' ಎಂದ. ''ಈ ಹಿಂದೆ ಈ ಮನೆಯಲ್ಲಿದ್ದವರು ಏನು ಮಾಡುತ್ತಿದ್ದರು?'' ಎಂದು ನಾನು ಕೇಳಿದೆ. ''ಬಾವಲಿ ಬರುವುದು ಅಪಶಕುನವೆಂದು ನಮ್ಮ ಹಿಂದಿನ ಸಾಹೇಬರು ಬಾಡಿಗೆ ಮನೆಯೊಂದನ್ನು ಮಾಡಿಕೊಂಡು ಅಲ್ಲಿ ವಾಸಮಾಡುತ್ತಿದ್ದರು'' ಎಂದ. ಪತ್ನಿ ಗಾಭರಿಯಾಗಿ ರಾತ್ರಿ ಜಾಗರಣೆ ಮಾಡಿದಳು.

ಬೆಳಗಾಗುತ್ತಿದ್ದಂತೆಯೇ ಶ್ರೀಮತಿ ತವರಿಗೆ ದೂರವಾಣಿ ಕರೆಮಾಡಿದಳು. ''ಬಾವಲಿ ಮನೆಯೊಳಗೆ ಬರುವುದು ಅಪಶಕುನ. ಜೋಯಿಸರನ್ನು ಕೇಳಿ ಪರಿಹಾರ ತಿಳಿಸುತ್ತೇನೆ'' ಎಂದರು ಆಕೆಯ ತಾಯಿ. ಸಂಜೆ ಅವರೇ ಕರೆ ಮಾಡಿ, ''ಜೋಯಿಸರು ಮನೆ ಖಾಲಿ ಮಾಡಬೇಕು ಇಲ್ಲವೇ ಮನೆಯಲ್ಲಿ ಹೋಮ-ಹವನಗಳನ್ನು ಮಾಡಿ ಪುಣ್ಯಾವರ್ಚನೆ

ಮಾಡಬೇಕೆಂದು ಹೇಳಿದರು'' ಎಂದು ತಿಳಿಸಿದರು. ಈ ಸಲಹೆಗೆ ನಾನಂತೂ ಸುತಾರಾಂ ಒಪ್ಪಲಿಲ್ಲ. ಮಲಗುವ ಕೋಣೆಯು ಶುದ್ಧಿಯಾಗುವವರೆಗೂ ತಾನು ಆ ಕೋಣೆಯಲ್ಲಿ ಮಲಗುವುದೇ ಇಲ್ಲ ಎಂದು ಹಠ ಮಾಡಿದಳು ನನ್ನ ಪತ್ನಿ. ಹೀಗಾಗಿ ಅಂದಿನಿಂದ ನಮ್ಮ ಮನೆಯ ಹಾಲೇ ನಮ್ಮ ಮಲಗುವ ಕೋಣೆಯಾಯಿತು.

ಏತನ್ಮಧ್ಯೆ ಹಿರಿಯರು ಪದೇ ಪದೇ ಫೋನಾಯಿಸಿ ನಮಗೇನಾದರೂ ತೊಂದರೆ ಬಂದೀತೇ ಎಂದು ವಿಚಾರಿಸುತ್ತಿದ್ದರು. ಪ್ರತಿ ಬಾರಿಯೂ ಬಾವಲಿಯ ಆಗಮನದಿಂದ ಏನೂ ತೊಂದರೆಯಾಗಿಲ್ಲ ಎಂದು ಉತ್ತರ ಕೊಡುವುದೇ ದೊಡ್ಡ ತೊಂದರೆಯಾಯಿತು. ಇದೇ ಬಾವಲಿ ಇನ್ನೂ ಎರಡು ಬಾರಿ ಮನೆಯೊಳಗೆ ಬಂದಿದ್ದ ವಿಷಯವನ್ನು ನಾನು ನನ್ನ ಪತ್ನಿಯಿಂದ ಹಾಗೂ ಹಿರಿಯರಿಂದ ಮುಚ್ಚಿಟ್ಟಿದ್ದಂತೂ ನಿಜ.

ಇದಾದ ಕೆಲ ವಾರಗಳ ನಂತರ ನಾನು ಬಾಲ್ಕನಿಯಲ್ಲಿ ಕುಳಿತು ಬೆಳಗಿನ ಕಾಫಿಯನ್ನು ಹೀರುತ್ತಿದ್ದಾಗ ಯಾರೋ ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದಾರೆ ಎನಿಸಿತು. ತಲೆ ಎತ್ತಿ ನೋಡಿದೆ. ಬಾಲ್ಕನಿಯ ಪಕ್ಕದ ಬೇವಿನ ಮರದ ಕೊಂಬೆಯ ಮೇಲೆ ಕುಳಿತಿದ್ದ ಗೂಬೆಯೊಂದು ಕುಳಿತು ನಮ್ಮನ್ನೇ ಎವೆಇಕ್ಕದೆ ನೋಡುತ್ತಿತ್ತು. ಅದರ ಕಣ್ಣುಗಳು ಹಾಗೂ ಅದು ತಲೆಯನ್ನು ಅಲ್ಲಾಡಿಸುವ ರೀತಿಯನ್ನು ನೋಡಿ ನಾನು ಮಂತ್ರಮುಗ್ಧನಾದೆ. ಗೂಬೆಯನ್ನು ನೋಡಿದ ನನ್ನ ಹೆಂಡತಿ ಕಿಠಾರನೆ ಕಿರುಚಿದಳು. ''ಹೆದರಬೇಡ, ಇದೊಂದು ಸಾಧು ಪ್ರಾಣಿ'' ಎಂದೆ. ''ಅಯ್ಯೋ ಮನೆಯೊಳಗೆ ಗೂಬೆ ಬಂದಿತಲ್ಲಾ ಖಂಡಿತಾ ಅಪಾಯ ಕಾದಿದೆ'' ಎಂದು ಆಕೆ ಹೇಳಿದಾಗ. ''ಇವೆಲ್ಲಾ ನಮ್ಮ ಮೂಢನಂಬಿಕೆ. ಏನೂ ಆಗುವುದಿಲ್ಲ'' ಎಂದೆ. ತೀರಾ ಗಾಭರಿಯಾಗಿ ಆಕೆ ಬೆಂಗಳೂರಿನಲ್ಲಿದ್ದ ಹಿರಿಯರಿಗೆ ಕೂಡಲೇ ಫೋನ್ ಮಾಡಿದಳು. ಎಲ್ಲರಿಗೂ ಆತಂಕ. ''ನಿಮ್ಮ ಮನೆಗೆ ಹೋದ ತಿಂಗಳು ಬಾವಲಿ ಬಂದಿತ್ತು. ಈಗ ಗೂಬೆ ಬಂದಿದೆ. ಪೊಲೀಸ್ ಇಲಾಖೆಯಲ್ಲಿ ನಿಮ್ಮ ಯಜಮಾನರು ತಮ್ಮ ಪ್ರಥಮ ಕೆಲಸದಲ್ಲಿದ್ದಾರೆ. ನಿಮ್ಮ ಮದುವೆಯಾಗಿ ಇನ್ನೂ ಆರು ತಿಂಗಳೂ ಕಳೆದಿಲ್ಲ. ಖಂಡಿತವಾಗಿ ಏನೋ ಕೆಟ್ಟದ್ದು ಆಗುತ್ತದೆ. ಕೂಡಲೇ ಮನೆಯನ್ನು ಖಾಲಿ ಮಾಡಿ'' ಎಂದರು ಹಿರಿಯರು.

ನಾನು, ''ನಮ್ಮ ಹಣೆಯಲ್ಲಿ ಬರೆದದ್ದಾಗಲಿ'' ಎಂದು ಹೇಳಿ ಪೇಪರ್ ಓದುವುದನ್ನು ಮುಂದುವರೆಸಿದೆ. ''ನೀವು ನಿಮ್ಮನ್ನು ಬಹಳ ಬುದ್ಧಿವಂತರೆಂದುಕೊಂಡಿದ್ದೀರಿ. ಕಾರಿನ ಮೇಲೆ ಕಾಗೆ ಕುಳಿತ ಕಾರಣ ಮುಖ್ಯಮಂತ್ರಿಗಳು ಕಾರನ್ನು ಬದಲಿಸಲಿಲ್ಲವೇ? ಕರಿನಾಗರ ಬಂತೆಂದು ಇನ್ನೊಬ್ಬರು ಮನೆ ಬದಲಾಯಿಸಲಿಲ್ಲವೇ? ಕ್ಯಾಬಿನೆಟ್‌ಹಾಲ್‌ನಲ್ಲಿ ಗೂಬೆ ಬಂದಾಗ ಶಾಂತಿ ಮಾಡಿಸಲಿಲ್ಲವೇ? ನೀವೇನು ಮುಖ್ಯಮಂತ್ರಿಗಿಂತ ದೊಡ್ಡವರೇ? ಹಿರಿಯರು ಹೇಳುವ ಮಾತುಗಳನ್ನು ಕೇಳದೇ ಮೊಂಡುತನ ಮಾಡಬೇಡಿ. ಈ ಮನೆಯಲ್ಲಿಂತೂ ನನಗೆ ಇನ್ನು ಇರಲು ಸಾಧ್ಯವೇ ಇಲ್ಲ'' ಎಂದು ಹಠ ಹಿಡಿದಳು ನನ್ನ ಹೆಂಡತಿ.

ಅವಳ ಆತಂಕವನ್ನು ನೋಡಲಾರದೆ, ''ಖಂಡಿತಾ ಇನ್ನು ಹತ್ತು ದಿನಗಳ ಒಳಗಡೆ ನಿನ್ನನ್ನು ಬೇರೆ ಮನೆಗೆ ಕರೆದೊಯ್ಯುತ್ತೇನೆ. ಅಲ್ಲಿಯವರೆಗೆ ಸುಧಾರಿಸಿಕೋ'' ಎಂದು ಸಮಾಧಾನ ಹೇಳಿದೆ.

ಎರಡೇ ದಿನಗಳ ನಂತರ ನನ್ನ ತಂದೆ ಫೋನ್ ಮಾಡಿ, ''ಪೇಪರ್‌ನಲ್ಲಿ ಬಂದಿರುವ ಸುದ್ದಿಯನ್ನು ಓದಿದೆಯಾ?'' ಎಂದು ಕೇಳಿದರು. ''ರಾತ್ರಿ ಗಸ್ತುಮಾಡಿ ಈಗ ತಾನೇ ಮನೆಗೆ

ಬಂದಿದ್ದೇನೆ. ಪೇಪರ್ ನೋಡಿಲ್ಲ'' ಎಂದೆ. ''ಆಳುವ ಪಕ್ಷದ ಶಾಸಕರೊಬ್ಬರನ್ನು ನೀನು ಬಂಧಿಸಿದ್ದು ನಿಜವೇ'' ಎಂದರು. ''ಹೌದು'' ಎಂದೆ. ''ಆ ಶಾಸಕರು ನೆನ್ನೆ ಶಾಸನ ಸಭೆಯಲ್ಲಿ ನಿನ್ನನ್ನು ಅಮಾನತ್ತಿನಲ್ಲಿಡಲು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿಗಳು ಕೂಡಲೇ ಕ್ರಮಕೈಗೊಳ್ಳುವ ಆಶ್ವಾಸನೆ ನೀಡಿದ್ದಾರೆ. ಕಡೆಗೂ ಗೂಬೆಯ ಪ್ರಭಾವ ಆಗೇ ಹೋಯಿತು'' ಎಂದರು.

ಮುಂದಿನ 24 ಗಂಟೆಗಳ ಕಾಲ ಎಲ್ಲರೂ ಮುಳ್ಳಿನ ಮೇಲೆ ನಿಂತಂತೆ ಕಾಲ ಕಳೆದೆವು. ಮಾರನೆಯ ಬೆಳಗ್ಗೆ ಇಲಾಖಾ ಮುಖ್ಯಸ್ಥರು ನನಗೆ ಫೋನ್ ಮಾಡಿದಾಗ ನಡುಕದಿಂದಲೇ ಫೋನ್ ಕೈಗೆತ್ತಿಕೊಂಡೆ. ''ಗುರುಪ್ರಸಾದ್, ಕಂಗ್ರಾಜುಲೇಷನ್ಸ್. ಪದೋನ್ನತಿ ನೀಡಿ ಸರ್ಕಾರ ನಿನ್ನನ್ನು ಪಕ್ಕದ ಜಿಲ್ಲೆಯ ಎಸ್.ಪಿ. ಎಂದು ನೇಮಕ ಮಾಡಿದೆ. ನಾಳೆಯೇ ಹೊಸ ಜಿಲ್ಲೆಯ ಅಧಿಕಾರ ವಹಿಸಿಕೊಂಡು ನನಗೆ ವರದಿ ನೀಡು'' ಎಂದರು.

ತಕ್ಷಣವೇ ಮನೆಯಿಂದ ಹೊರಗೆ ಬಂದು ಬೇವಿನ ಮರದತ್ತ ಕಣ್ಣು ಹಾಯಿಸಿದೆ.

ಗೂಬೆ ಕಣ್ಣು ಮಿಟುಕಿಸಿತು.

✤

---

## ಮರೆವು

ಗಂಡ ಹೆಂಡತಿಗೆ ವಯಸ್ಸಾಗಿದೆ. ಅಸಾಧ್ಯ ಮರೆವು. ವೈದ್ಯರ ಬಳಿ ಹೋದರು. 'ಬೇರೆ ಏನೂ ತೊಂದರೆ ಇಲ್ಲ, ಮರೆವು ಅಷ್ಟೆ. ಅದಕ್ಕಾಗಿ ಇನ್ನು ಮುಂದೆ ಮಾಡಬೇಕಾದ ಕೆಲಸವನ್ನು ಬರೆದು ಇಟ್ಟುಕೊಳ್ಳಿ ಉಪಯೋಗವಾಗುತ್ತೆ' ಎಂದರು.

ಕೆಲವು ದಿನಗಳ ನಂತರ ಮನೆಯಲ್ಲಿ....

ಟಿವಿ ನೋಡುತ್ತಿದ್ದ ಗಂಡ ಮೇಲೆದ್ದ.

'ಎಲ್ಲಿಗೆ ಹೋಗ್ತೀರಿ?' ಎಂದು ಹೆಂಡತಿ ಕೇಳಿದಳು.

'ಅಡಿಗೆ ಮನೆಗೆ' ಎಂದ ಗಂಡ.

'ನನಗೆ ಐಸ್ಕ್ರೀಂ ತನ್ನಿ' ಎಂದಳು ಹೆಂಡತಿ.

'ಸರಿ'

'ಬರೆದುಕೊಂಡು ಹೋಗಿ. ಮರೀತೀರಿ' ಎಂದಳು ಹೆಂಡತಿ.

'ಏನೂ ಬೇಡ, ನೆನಪಿರುತ್ತೆ' ಎಂದ ಗಂಡ.

'ಐಸ್ಕ್ರೀಂ ಮೇಲೆ ಡ್ರೈಫ್ರೂಟ್ ಹಾಕಿ. ಅಲ್ಲೇ ಇಟ್ಟಿದ್ದೀನಿ. ಅದನ್ನು ಬರೆದುಕೊಂಡು ಹೋಗಿ'.

'ಬೇಡ ಬೇಡ. ನೆನಪಿರುತ್ತೆ. ಐಸ್ಕ್ರೀಂ ಮೇಲೆ ಡ್ರೈಫ್ರೂಟ್ ತಾನೆ?'

ಗಂಡ ಒಳಗೆ ಹೋದ. ವಾಪಸ್ ಬಂದಾಗ 20 ನಿಮಿಷ ಕಳೆದಿತ್ತು. ಅವಳಿಗೆ ಖಾರ ಹಚ್ಚಿದ ಪುರಿ ತುಂಬಿದ ಪ್ಲೇಟ್ ಕೊಟ್ಟ.

'ನಂಗೊತ್ತಿತ್ತು ನೀವು ಮರೀತೀರಿ ಅಂತ. ನಾನು ಹೇಳಿದ್ದು ಕೋಡುಬಳೆ ತನ್ನಿ ಅಂತ' ಎಂದಳು ಹೆಂಡತಿ.

# ದೀಪಾವಳಿ... ಡಿಸ್ಕೌಂಟ್ ಹಾವಳಿ

**- ವಿಜಯ್ ಕುಮಾರ್ ಎಮ್.ಎಲ್.**

**ಕ**ಟ್ಟೆ ಬಳಗದ ಹುಡುಗರು ಎಂದಿನಂತೆ ಸಂಜೆ ಸರಿಯಾದ ಸಮಯಕ್ಕೆ ನಾಗನ ಅಂಗಡಿಯ ಕಟ್ಟೆ ಸೇರಿದ್ದರು. ಸಾಮಾನ್ಯವಾಗಿ ಯಾವುದೇ ಸಭೆ ಸೇರುವುದು ಯಾವುದೋ ಗಹನವಾದ ವಿಚಾರದ ಬಗ್ಗೆ ಚರ್ಚಿಸಲಿಕ್ಕೆ ಅಥವಾ ವಿಷಯಗಳ ಮಂಡನೆ, ಅನುಮೋದನೆ, ಶ್ರದ್ಧಾಂಜಲಿ ಇಂತಹ ಕಾರ್ಯಕ್ರಮಗಳಿಗೆ. ಕಟ್ಟೆ ಬಳಗದ ವಿಶೇಷವೆಂದರೆ ಪ್ರತಿದಿನವೂ ಸಭೆ ಸೇರಿದ ನಂತರ ಯಾವುದಾದರೊಂದು ಹೊಸ ವಿಷಯವನ್ನು ಶೋಧಿಸಿ ಅಥವಾ ಸೃಷ್ಟಿಸಿ ಚರ್ಚಿಸುವುದು. ಅಂತಹ ಯಾವುದೇ ವಿಷಯ ಇನ್ನೂ ಸೃಷ್ಠಿಯಾಗಿಲ್ಲದ ಕಾರಣ ಎಲ್ಲರೂ ಸುಮ್ಮನೆ ಕುಳಿತಿದ್ದರು. ಕಟ್ಟೆ ಬಳಗದ ಹುಡುಗರು ಸುಮ್ಮನೆ ಕುಳಿತಿರುವುದನ್ನು ಕಂಡು ದಾರಿಯಲ್ಲಿ ಓಡಾಡುವ ಜನರಿಗೆ ''ಬಟ್ಟೆಗಳ ಮೇಲೆ ಭಾರಿ ರಿಯಾಯಿತಿ ದರದಲ್ಲಿ ಮಾರಾಟ'' ಎಂಬ ಕರಪತ್ರವನ್ನು ಹಂಚುತ್ತಿದ್ದ ಹುಡುಗನೊಬ್ಬ ಇವರ ಬಳಿಗೆ ಬಂದು ಒಂದಷ್ಟು ಕರಪತ್ರಗಳನ್ನು ಹಂಚಿದ. ದೀಪಾವಳಿ ಹಬ್ಬ ಸಮೀಪಿಸಿದ್ದರಿಂದ ನಗರದ ಎಲ್ಲೆಡೆ 'ಡಿಸ್ಕೌಂಟ್ ಸೇಲ್‌ಗಳ ಹಾವಳಿ ಜಾಸ್ತಿಯಾಗಿ ಡಿಸ್ಕೌಂಟ್ ಜಾತ್ರೆಯೇ ನಡೆಯುತ್ತಿತ್ತು. ಕರಪತ್ರದ ಮೇಲೆ ಕಣ್ಣಾಡಿಸಿದ ಆ್ಯಂಡಿ ''ಸಿಕ್ಕಾಪಟ್ಟೆ ಡಿಸ್ಕೌಂಟ್ ಇದೆ ಕಣ್ರೋ, ಹೋಗಿ ನೋಡೋಣ್ವೇ?'' ಎಂದ. ''ಬರಿ ನೋಡೋದಾದರೆ ಓಕೆ, ಬೈ ಮಾಡೋದಾದ್ರೆ ಯಾವುದೇ ಡಿಸ್ಕೌಂಟ್ ಇಲ್ದೆ ನನ್ನ ಹತ್ರ ಬೈಸ್ಕೋತೀಯ'' ಎಂದ ಸಿಟ್ಟಾದ ಕವಿರಾಜ. ಕಳೆದ ಬಾರಿ ಡಿಸ್ಕೌಂಟ್ ಸೇಲ್‌ನಲ್ಲಿ 40% ಡಿಸ್ಕೌಂಟ್ ಇದೆ ಎಂದು ಆ್ಯಂಡಿ ಒತ್ತಾಯ ಮಾಡಿ ಕೊಡಿಸಿದ್ದ ಪ್ಯಾಂಟ್ 40% ನಷ್ಟೇ ಶ್ರಿಂಕ್ ಆಗಿ 3/4 ಆಗಿದ್ದು, ಷರ್ಟ್ ಕೂಡಾ 40% ನಷ್ಟೇ ಶ್ರಿಂಕ್ ಆಗಿ ಹೆಂಗಸರ ಜಾಕೇಟ್‌ನಂತೆ ಬಿಗಿಯಾಗಿದ್ದನ್ನು ನೆನಪಿಸಿದ ಕವಿರಾಜ.

''ಪ್ಯಾಂಟು, ಶರ್ಟ್‌ಗಳೇ ಈ ಪಾಟಿ ಶ್ರಿಂಕ್ ಆಗಿ ಸಣ್ಣಾಗಿವೆ ಅಂದ್ರೆ, ಡಿಸ್ಕೌಂಟ್ ಸೇಲ್‌ನಲ್ಲಿ ಬಿಕಿನಿ ಕೊಂಡವರ ಕಥೆ ಹೆಂಗ್ಲಾ?'' ಎಂದು ಒಳ ಉಡುಪುಗಳ ಮೇಲೂ ಅಪ್‌ಟು 50% ಡಿಸ್ಕೌಂಟ್ ಎಂದು ಇರುವುದನ್ನು ಕಂಡು ಗಾಬರಿಯಾದ ಸರ್ಜಾ. ಕಟ್ಟೆ ಬಳಗದ ಹುಡುಗರಿಗೆ ಅಂದು ಚರ್ಚೆಗೆ ಡಿಸ್ಕೌಂಟ್ ಸೇಲ್ ವಿಷಯ ಸಿಕ್ಕಂತಾಗಿತ್ತು.

''ಡಿಸ್ಕೌಂಟ್ ಸೇಲ್ ಅಂದಾಕ್ಷಣ ಬಟ್ಟೆ ಶ್ರಿಂಕೇಯಾಗಬೇಕೆಂದೇನೂ ಇಲ್ಲ ಕಣ್ಲಾ, ಸ್ಟ್ರೆಚ್ ಕೂಡಾ ಆಗಬಹುದು. ನಾನೂ ಹೀಗೇ ಡಿಸ್ಕೌಂಟ್ ಸೇಲ್‌ನಲ್ಲಿ ಕೊಂಡ ಒಳಚಡ್ಡಿ 40% ನಷ್ಟು ಸ್ಟ್ರೆಚ್ ಆಗಿ ಈರುಳ್ಳಿ ಚೀಲದಂತೆ ಲೂಸ್ ಆಗಿ ದೊಗಲೆ ಚಡ್ಡಿಯಾಗಿತ್ತು. ಅದರಲ್ಲಿನ ಸೊಂಟದ ಇಲಾಸ್ಟಿಕ್ ಪಟ್ಟಿ ಒಂದೇ ವಾರದಲ್ಲಿ ಇಲಾಸ್ಟಿಕ್ ಕಳೆದುಕೊಂಡು ಚಡ್ಡಿಯನ್ನು ಉಡದಾರದಲ್ಲಿ ನಿಲ್ಲಿಸುವಂತಾಯ್ತು'' ಎಂದು ಡಿಸ್ಕೌಂಟ್ ಪ್ರಭಾವದ ಇನ್ನೊಂದು ಮುಖವನ್ನು ತೆರೆದಿಟ್ಟನಾಗ.

''ಹೌದು ಹೌದು, ಡಿಸ್ಕೌಂಟ್ ಸೇಲ್‌ನಲ್ಲಿ ನಾನು ಕೊಂಡ ಪ್ಯಾಂಟ್ ಸ್ಟ್ರೆಚ್‌ಲಾನ್ ಬಟ್ಟೆಗಳಿಗಿಂತಲೂ ಹೆಚ್ಚಾಗಿ ಸ್ಟ್ರೆಚ್ ಆಗಿ ಪೈಜಾಮದಂತಾಗಿತ್ತು, ಶರ್ಟ್ ಜುಬ್ಬದಂತಾಗಿತ್ತು'' ಎಂದು ಬಟ್ಟೆ ಸ್ಟ್ರೆಚ್‌ನಿಂದಾದ ಅನಾಹುತದ ತನ್ನ ಅನುಭವವನ್ನು ಹಂಚಿಕೊಂಡ ಅನಿಲ.

ತೀರ್ಥಹಳ್ಳಿಯ ಜಾತ್ರೆಯ ಸಮಯದಲ್ಲಿ ಡಿಸ್ಕೌಂಟ್ ಸೇಲ್‌ನಲ್ಲಿ ಕೊಂಡ ತನ್ನ ಬಣ್ಣದ ಶರ್ಟ್ ಸೆಂಚುರಿ ಒಗೆತವನ್ನು ಕಂಡರೂ, ಇನ್ನೂ ಬಣ್ಣ ಬಿಡುತ್ತಿರುವುದರ ಬಗ್ಗೆ ಮತ್ತು ಅದರಿಂದ ಇತರ ಒಳ್ಳೆಯ ಬಟ್ಟೆಗಳಿಗೆ ಬಣ್ಣ ಅಂಟಿ ಉಪಯೋಗಕ್ಕೆ ಬಾರದಂತಾಗಿ ಡಿಸ್ಕೌಂಟ್ ಸೇಲ್‌ನಲ್ಲಿ ಕೊಂಡು ಪಡೆದ ಲಾಭಕ್ಕಿಂತ ಆದ ನಷ್ಟದ ಬಗ್ಗೆ ವಿವರಸಿದ ಪ್ರಾಣೇಶ.

''ಶ್ರಿಂಕ್ ಆಗುತ್ತೋ, ಸ್ಟ್ರೆಚ್ ಆಗುತ್ತೋ, ಹೆದುರ್ಕೋ ಬೇಡ್ರಿ. ಕೊಂಡ್ಕೊಳ್ರೋ. ಹೇಗೂ ..... ಆಗಲ್ಲ, ನಾಗ ಚಿಕ್ಕ ಆಳು, ಲಿಲಿಪುಟ್ ಇದ್ದಂಗೌನೆ. ಕಿಡ್ಸ್‌ವೇರ್‌ನಲ್ಲಿ ಕೊಂಡ ಬಟ್ಟೇನೇ ಅವನ್ಗೆ ಆಗತ್ತೆ. ಶ್ರಿಂಕ್ ಆದ್ರೆ ಅವನ್ಗೆ ಕೊಟ್ರಾಯ್ತು. ಜನಾರ್ಧನ ದೊಡ್ಡ ಆಳು. ದನ ಇದ್ದಂಗೌನೆ. ಅವನ ಸೈಜ್ ಬಟ್ಟೆ ಹುಡುಕ್ಕೊಂಡ್ ಹೋಗೋದು ಕಷ್ಟ ಸ್ಟ್ರೆಚ್ ಆದರೆ ಅವನ್ಗೆ ಕೊಟ್ರಾಯ್ತು'' ಎಂದು ಎರಡೂ ಸಮಸ್ಯೆಗಳಿಂದ ಉಂಟಾಗಬಹುದಾದ ಅನಾಹುತಗಳಿಗೆ ಉಪಾಯ ಕೊಟ್ಟ ಸರ್ಜಾ.

''ಈ ಡಿಸ್ಕೌಂಟ್ ಸೇಲ್‌ನಲ್ಲಿ ಕೊಂಡ ಬಟ್ಟೆಗಿಂತ ರಸ್ತೆ ಬದಿಯಲ್ಲಿ ಮಾರಾಟವಾಗೋ ಇಂಪೋರ್ಟೆಡ್ ಶರ್ಟ್, ಪ್ಯಾಂಟ್‌ಗಳು ಕ್ವಾಲಿಟಿಯಲ್ಲೂ ಚೆನ್ನಾಗಿದ್ದು ಹೆಚ್ಚು ಕಾಲ ಬಾಳಿಕೆ ಬರ್ತವೆ'' ಎಂದ ಕವಿರಾಜ.

''ಈ ರಸ್ತೆ ಬದಿಯಲ್ಲಿ ಮಾರಾಟವಾಗುವ ಇಂಪೋರ್ಟೆಡ್ ಶರ್ಟ್, ಪ್ಯಾಂಟ್ ಜಾಕೆಟ್ಸ್‌ಗಳು ಭೂಕಂಪ, ಸುನಾಮಿಯಂತಹ ನೈಸರ್ಗಿಕ ವಿಕೋಪಗಳಾದಾಗ ಸಂತ್ರಸ್ಥರಿಗೆ ನೆರವಾಗಲು ವಿದೇಶಗಳಲ್ಲಿ ಸಂಗ್ರಹಿಸಿ ಬಂದಂತಹ ಮಾಲುಗಳು. ನಮ್ಮ ದೇಶದಲ್ಲಿ ಇವುಗಳು ಕೂಡಾ ಸರಿಯಾಗಿ ಸಂತ್ರಸ್ಥರಿಗೆ ವಿತರಣೆಯಾಗದೆ ಅವನ್ನು ಮಾರಿಕೊಳ್ಳುವ ಜಾಲವೇ ಇದೆಯಂತೆ'' ಎಂದು ಇಂಪೋರ್ಟೆಡ್ ಬಟ್ಟೆಗಳ ಒಳರಹಸ್ಯವನ್ನು ತೆರೆದಿಟ್ಟ ಆ್ಯಂಡಿ.

''ಥೂ, ಇಂಥ ಯಾರ್ಯಾರೋ ಉಪಯೋಗಿಸಿ ಬಿಟ್ಟ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಯಾಕೋ ಕೊಳ್ತೀಯಾ'' ಎಂದ ಸರ್ಜಾ.

ಈ ಚರ್ಚೆಯ ನಡುವೆಯೇ ಅಂದಿನ ದಿನಪತ್ರಿಕೆಯ ಮೇಲೆ ಕಣ್ಣಾಡಿಸುತ್ತಿದ್ದ ಜನಾರ್ಧನ ''ಸ್ಕೂಟರ್, ಬೈಕ್, ಕಾರ್ ಮತ್ತು ಇತರೆ ವಾಹನಗಳ ಮೇಲೆ ಭಾರೀ ಡಿಸ್ಕೌಂಟ್ ಇದೆಯಂತೆ ಕಣ್ರೋ...... 2-ವೀಲರ್ಸ್‌ಗೆ 5,000/- ರೂಪಾಯಿಯಿಂದ 10,000/- ದವರೆಗೆ ಮತ್ತು ಕಾರುಗಳ ಮೇಲೆ 10,000/- ರೂಪಾಯಿಯಿಂದ 70,000/- ದವರೆಗೆ ಡಿಸ್ಕೌಂಟ್ ಇದೆಯಂತೆ. ಪ್ರಾಣಿ, ನೀನು ಹೇಗೂ ಸೆಕೆಂಡ್ ಹ್ಯಾಂಡ್ ಕಾರ್ ಕೊಳ್ಳಬೇಕೆಂದಿದ್ದೆ. ಇದೇ ರೈಟ್ ಟೈಂ. ಯಾಕೆ ಹೊಸ ಕಾರ್ ಕೊಳ್ಳಬಾರದು? ಹೇಗೂ ಒಳ್ಳೆಯ ಆಫರ್‌ಗಳು ಇದೆಯಲ್ಲ'' ಎಂದ ಜನಾರ್ಧನ.

''ಈ ನನ್ಮಕ್ಕಳು ಈ ಭಾರಿ ಡಿಸ್ಕೌಂಟ್‌ಗಳನ್ನೆಲ್ಲಾ ದಸರಾ ಹಬ್ಬಕ್ಕೆ ಶುರು ಮಾಡಿ ದೀಪಾವಳಿ ಹಬ್ಬಕ್ಕೆ ನಿಲ್ಲಿಸಿ ಬಿಡ್ತಾರೆ. ಆನಂತರ ವರ್ಷವೆಲ್ಲಾ ರೇಟ್ ಹೆಚ್ಚೇ ಇರುತ್ತದೆ. ಇಷ್ಟೊಂದು ಡಿಸ್ಕೌಂಟ್ ಕೊಟ್ರೂ ಲಾಭ ಆಗೋದಾದರೆ ವರ್ಷವೆಲ್ಲಾ ಯಾಕೆ ಇದೇ ರೇಟ್‌ಗೆ ಮಾರಬಾರದು?'' ಎಂದ ನಾಗ. ಅದಕ್ಕೆ ಆ್ಯಂಡಿ ''ಅದು ಹಾಗಲ್ಲಮ್ಮಾ ನಾಗ, ಈ ಡಿಸ್ಕೌಂಟ್‌ಗಳ ಸೀಸನ್ ಶುರುವಾಗುವುದು ಗಣೇಶನ ಹಬ್ಬದಿಂದ. ಅಲ್ಲಿಂದ ದಸರಾ,

ದೀಪಾವಳಿ, ಕ್ರಿಸ್‌ಮಸ್ ಮತ್ತು ಹೊಸ ವರ್ಷದವರೆಗೆ ಮ್ಯಾಕ್ಸಿಮಂ ಡಿಸ್ಕೌಂಟ್ ಕೊಟ್ಟು ನಿಲ್ಲಿಸಿ ಬಿಡ್ತಾರೆ. ವರ್ಷದ ಕೊನೆಯಲ್ಲಿ ವಾಹನವನ್ನು ಕೊಂಡ್ರೆ ಹೊಸ ವರ್ಷಕ್ಕೆ ಅದು ಹಿಂದಿನ ವರ್ಷದ ಹಳೇ ಮಾಡೆಲ್ ಎಂದು ಬ್ರಾಂಡ್ ಆಗುತ್ತೆ. ಸೆಕೆಂಡ್ ಹ್ಯಾಂಡ್ ವಾಹನಗಳನ್ನು ಸೇಲ್‌ಗೆ ಇಟ್ಟಾಗ ಅದರ ಬೆಲೆ ನಿಗದಿಯಾಗುವುದು ಅದು ಯಾವ ವರ್ಷದ ಮಾಡೆಲ್ ಎನ್ನುವುದರ ಮೇಲೆ. ಜನವರಿ ಬಂತೆಂದರೆ ನವೆಂಬರ್, ಡಿಸೆಂಬರ್‌ನಲ್ಲಿ ತಯಾರಾದ ವೆಹಿಕಲ್‌ಗಳನ್ನು ಜನ ಕೊಳ್ಳಲ್ಲ. ಷೋರೂಮಿನವರು ಆ ವರ್ಷದ ಮಾಡೆಲ್‌ಗಳನ್ನು ಆ ವರ್ಷವೇ ಖಾಲಿ ಮಾಡ್ಲಿಕ್ಕೆ ಭಾರೀ ಡಿಸ್ಕೌಂಟ್ ಕೊಡ್ತಾರೆ'' ಎಂದು ಉತ್ತರಿಸಿದ ಆ್ಯಂಡಿ.

''ಕಾರ್‌ಗಳ ಮೇಲೆ 30,000/- ರೂ. ಇಂದ 70,000/- ದವರೆಗೆ ಡಿಸ್ಕೌಂಟ್ ಎಂದು ಹಾಕಿದ್ದಾರೆ. ಕಾರಿನ ಯಾವುದಾದರೂ ಪಾರ್ಟ್ಸ್‌ಗಳನ್ನು ''ಮಿಸ್‌ಕೌಂಟ್'' ಮಾಡಿ ಮಾರಿ ಬಿಡ್ತಾರೇನೋ?'' ಎಂದು ಆತಂಕ ವ್ಯಕ್ತಪಡಿಸಿದ ಪ್ರಾಣೇಶ.

''ನಮ್ಮೂರಿನ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವೀಕೆಂಡ್ ಬಂತೆಂದರೆ ನಾರ್ಥ್ ಇಂಡಿಯನ್, ಸೌತ್ ಇಂಡಿಯನ್, ವೆಜ್ ಮತ್ತು ನಾನ್-ವೆಜ್ ಥಾಲಿಗಳಿಗೆ ಡಿಸ್ಕೌಂಟ್ ರೇಟ್ ಇಟ್ಟು ಅಡ್ವರ್ಟೈಜ್‌ಮೆಂಟ್ ಕೊಡುತ್ತಾರೆ. ಅದು ಅವರಿಗೆ ಹೇಗೆ ವರ್ಕ್ಔಟ್ ಆಗುತ್ತೋ ಅರ್ಥವಾಗಲ್ಲ'' ಎಂದ ಅನಿಲ.

''ಈ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ಚಿಕನ್ ಐಟಂ, ಫಿಷ್ ಐಟಂ, ತರಕಾರಿಗಳು ಮತ್ತು ಅರೆ ತಯಾರಿ ಮಾಡಿಕೊಂಡ ಅನೇಕ ಪದಾರ್ಥಗಳನ್ನು ಡೀಪ್ ಫ್ರೀಜರ್‌ಗಳಲ್ಲಿ ಶೇಖರಿಸಿ ಇಟ್ಟಿರುತ್ತಾರೆ. ಇಂತಹ ಶೇಖರಿಸಿಟ್ಟ ಐಟಂಗಳನ್ನೆಲ್ಲ ವೀಕೆಂಡ್‌ನಲ್ಲಿ ಡಿಸ್ಕೌಂಟ್‌ರೇಟ್‌ನಲ್ಲಿ ಕೊಟ್ಟು ಖಾಲಿ ಮಾಡಿಕೊಳ್ಳುತ್ತಾರೆ'' ಎಂದು ಹೋಟೆಲ್ ಉದ್ಯಮದಲ್ಲಿ ಸ್ವಲ್ಪ ಮಟ್ಟಿಗೆ ಕೈಯಾಡಿಸಿದ್ದ ಜನಾರ್ಧನ ತನ್ನ ಊಹೆಯ ಉತ್ತರವನ್ನು ಬಿಟ್ಟ.

''ಒಟ್ಟಿನಲ್ಲಿ ಇದು ಒಂದು ರೀತಿ ವೀಕೆಂಡ್ ತೀರುವಳಿ ಮಾರಾಟ ಅನ್ನು'' ಎಂದ ಪ್ರಾಣೇಶ.

''ನಾವು ಮನೇಲಿ ಮಾಡಿದ ಅಡಿಗೆ ಉಳಿದರೆ ಮಾರನೆಯ ದಿನ ಅದು ಚೆನ್ನಾಗಿಯೇ ಇದ್ದರೂ ಹಳಸಿದ್ದು ಎಂದು ಭಿಕ್ಷುಕರಿಗೆ ಫ್ರೀ ಆಗಿ ಹಾಕ್ತೇವೆ. ಈ ದೊಡ್ಡ ಹೋಟೆಲ್‌ನವರು ನಮ್ಮ ಹತ್ರಾ ದುಡ್ಡು ತಗೊಂಡು, ಹಳಸಿದ್ದನ್ನು ನಮಗೇ ಹಾಕ್ತಾರೆ ಅನ್ನು'' ಎಂದ ಸರ್ಜಾ.

''ಈ ಹಾಲು ಮಾರೋ ಹಳ್ಳಿಜನ ಮನೆಗೇ ಬಂದು ಡೈರಿ ಹಾಲಿಗಿಂತ ಕಡಿಮೆ ಬೆಲೆಗೆ ಹಾಲು ಹಾಕ್ತಾರೆ. ಅವರಿಗೆ ಇದು ಹೇಗೆ ವರ್ಕ್ಔಟ್ ಆಗುತ್ತೋ ನಾಗ?'' ಎಂದು 25 ವರ್ಷಗಳಿಂದ ನಾಗನ ಕುಟುಂಬ ಡೈರಿ ಹಾಲಿನ ಏಜೆನ್ಸಿ ನಡೆಸುತ್ತಿದ್ದ ವಿಷಯ ತಿಳಿದಿದ್ದ ಜನಾರ್ಧನ ನಾಗನನ್ನು ಪ್ರಶ್ನಿಸಿದ. ''ಇದೇ ಪ್ರಶ್ನೇನ ನನ್ನ ಮನೆಗೆ ಹಾಲು ಹಾಕೋ ಹಾಲೇಶನಿಗೆ ನಾನು ಕೇಳಿದ್ದೆ. ಅಲ್ಲಕಣ್ಲಾ ಹಾಲೇಶ, ನಿನ್ ಮನೆ ಬಾಗ್ಲಾಗೇ ನೀನು ಡೈರಿಗೆ ಹಾಲು ಹಾಕಿದ್ರೆ ಸರ್ಕಾರದವರು ನಿನಗೆ ಲೀಟರ್‌ಗೆ 24 ರೂಪಾಯಿ ಕೊಡ್ತಾರೆ. ನೀನು ಸ್ಕೂಟರ್‌ನಲ್ಲಿ ದಿನವೆಲ್ಲಾ ಊರೆಲ್ಲಾ ತಿರುಗಾಡಿಕೊಂಡು ಮನೆಗಳಿಗೆ ಹಾಲು ಹಾಕ್ತಾ ಮೈ ಕೈಯೆಲ್ಲಾ ಯಾಕ್ಲಾ ಹಣ್ಣು ಮಾಡ್ಕೋತೀಯಾ?'' ಎಂದೆ. ನನ್ನ ಪ್ರಶ್ನೆಗೆ ಹಾಲೇಶ ''ಅಣ್ಣಾ, 10 ಲೀಟರ್ ಹಾಲಿಗೆ 5 ಲೀಟರ್ ನೀರು ಸೇರಿಸಿ ಎಳೆದು ಬಿಡ್ತೀವಿ ಕಣಣ್ಣಾ, ವರ್ಕ್ಔಟ್ ಆಯ್ತದೆ'' ಎಂದು

ಪ್ರಾಮಾಣಿಕವಾಗಿ ಉತ್ತರಿಸಿದ್ದ. ''ಅದ್ಕೆ ಕಣ್ಲಾ, ನಮ್ಮನೇಲಿ ಇವತ್ತಿನವರೆಗೂ ಹಾಲನ್ನು ಎಷ್ಟೇ ಕಾಯಿಸಿದರೂ ಕುದಿಯುತ್ತಿತ್ತೇ ಹೊರತು ಉಕ್ಕಲಿಲ್ಲ. ನೀನು ಕೊಡೋ ಹಾಲಿನಿಂದ ಬೆಣ್ಣೆ ತೆಗೀಬೇಕು, ನಿನಗೆ ನಮ್ಮನೇಲಿ ಒಂದ್ ಸಾರಿನಾದ್ರು ನಿನ್ನ ಹಾಲಿನಿಂದಲೇ ತೆಗೆದ ಬೆಣ್ಣೆಯನ್ನು ಹಾಕಿ ನಿನಗೆ ಬೆಣ್ಣೆದೋಸೆ ತಿನ್ನಿಸಬೇಕು ಅನ್ನೊ ಆಸೆಯಿಂದ ಬಹಳ ದಿನದಿಂದ ಬೆಣ್ಣೆ ತೆಗಿಯೋ ಪ್ರಯತ್ನ ಪಟ್ಟಿದ್ದೆ. ಆದ್ರೆ ಬೆಣ್ಣೇನೇ ಬರ್ತಿರ್ಲಿಲ್ಲ. ಅದರ ರಹಸ್ಯ ಏನಂತ ಈಗ ತಿಳೀತು ಎಂದು ಉತ್ತರಿಸಿದೆ'' ಎಂದ ಸರ್ಜಾ.

''ಒಟ್ಟಿನಲ್ಲಿ ಈ ಡಿಸ್ಕೌಂಟ್ ಎಂದರೆ ರಿಸ್ಕೌಂಟ್ ಎನ್ನಬಹುದು'' ಎಂದ ಕವಿ.

''ಈ ಡಿಸ್ಕೌಂಟ್ ವಿಷಯ ಹಾಳಾಗಿ ಹೋಗಲಿ ಬಿಡು. ನಿನ್ನ ಅಂಗಡಿಯಲ್ಲಿ ಕೊಂಡ ಶೇವಿಂಗ್ ಕ್ರೀಮ್ ಟ್ಯೂಬ್‌ನ ಮೇಲೆ 30% ಎಕ್ಸ್ಟ್ರಾ ಎಂದಿತ್ತು. ಶೇವ್ ಮಾಡುವಾಗ ಟ್ಯೂಬ್ ಹಿಚುಕಿದರೆ ಕ್ರೀಂ ಬಾರದೇ 30% ಬರೀ ಗ್ಯಾಸ್ ಬರೋದೇ?'' ಎಂದು ನಾಗನನ್ನು ಪ್ರಶ್ನಿಸಿದ ಅನಿಲ ವಿಷಯವನ್ನು ಡಿಸ್ಕೌಂಟ್‌ನಿಂದ ಎಕ್ಸ್ಟ್ರಾ ಕಡೆಗೆ ತಿರುಗಿಸಿ ತನ್ನ ಅಳಲನ್ನು ತೋಡಿಕೊಂಡ.

''ನಿನ್ನ ಹೆಸರೇ ಅನಿಲ. ಅದಕ್ಕೆ ಹೆಸರಿಗೆ ತಕ್ಕಂತೆ ಟ್ಯೂಬ್‌ನಿಂದ ಬರೀ ಅನಿಲವೇ ಬಂದಿದೆ'' ಎಂದು ಛೇಡಿಸಿದ ಕವಿರಾಜ. ಪೌಡರ್, ಪೇಸ್ಟ್, ಬಿಸ್ಕಟ್ ಹೀಗೆ ಸುಮಾರು ಐಟಂಗಳ ಮೇಲೆ 10%, 20%, 25% ಎಕ್ಸ್ಟ್ರಾ ಅಥವಾ 200 ಗ್ರಾಂ. ಪೇಸ್ಟ್ ಕೊಂಡರೆ 20 ಗ್ರಾಂ. ಎಕ್ಸ್ಟ್ರಾ ಎಂದು ಹಾಕಿರುತ್ತಾರೆ. ಹೀಗೆ ಕೊಡೋದ್ರಿಂದ ಅವ್ರಿಗೆ ಹೇಗೆ ಲಾಭಾನೋ?'' ಎಂದು ನಾಗನನ್ನು ಪ್ರಶ್ನಿಸಿದ ಅನಿಲ.

''ಕಂಪನಿಯವ್ರು ಹೀಗೆ ಪ್ರಚಾರ ಕೊಡುವುದ್ರಲ್ಲೂ ಬುದ್ಧಿವಂತಿಕೆ ಮಾಡ್ತಾರೆ. ಉದಾ: 20 ಗ್ರಾಂ. ಶೇವಿಂಗ್ ಕ್ರೀಂ ಗೆ 9 ಗ್ರಾಂ. ಎಕ್ಸ್ಟ್ರಾ ಕೊಟ್ಟರೆ ಪರ್ಸೆಂಟೇಜ್ ಲೆಕ್ಕದಲ್ಲಿ 30% ಆಗುತ್ತದೆ. ಆಗ ಅವರು 9 ಗ್ರಾಂ ಎಕ್ಸ್ಟ್ರಾ ಎಂದು ಹಾಕಲ್ಲ. 30% ಎಕ್ಸ್ಟ್ರಾ ಅಂತ ಹಾಕ್ತಾರೆ. ಯಾಕಂದ್ರೆ ನಂಬರ್ 30 ನಂಬರ್ 9ಕ್ಕಿಂತ ಹೆಚ್ಚು. ನಮಗೆ ಜಾಸ್ತಿ ಕೊಟ್ರೇನೋ ಅನ್ಸುತ್ತೆ. ಅದೇ 200 ಗ್ರಾಂ. ಪೇಸ್ಟ್‌ಗೆ 20 ಗ್ರಾಂ. ಎಕ್ಸ್ಟ್ರಾ ಕೊಟ್ಟರೆ ಪರ್ಸೆಂಟೇಜ್ ಲೆಕ್ಕದಲ್ಲಿ 10% ಆಗುತ್ತದೆ. ಆಗ 10% ಎಕ್ಸ್ಟ್ರಾ ಅಂತ ಹಾಕಲ್ಲ, 20 ಗ್ರಾಂ. ಎಕ್ಸ್ಟ್ರಾ ಅಂತ ಹಾಕ್ತಾರೆ, ಯಾಕಂದ್ರೆ ನಂಬರ್ 20 ನಂಬರ್ 10ಕ್ಕಿಂತ ಜಾಸ್ತಿ'' ಎಂದು ಬಿಸಿನೆಸ್ ಬಗ್ಗೆ ಸ್ವಲ್ಪ ತಿಳುವಳಿಕೆ ಹೊಂದಿದ್ದ ಪ್ರಾಣೇಶ ಉತ್ತರಿಸಿದ.

''ಇವೆಲ್ಲ ಐಟಂಗಳ ಮೇಲೆ ರೇಟ್ ಜಾಸ್ತಿ ಮಾಡುವಾಗ ಮಾಡುವ ಗಿಮಿಕ್ಸ್. 200 ಗ್ರಾಂ. ಪೇಸ್ಟ್‌ನ ಬೆಲೆ 50 ರೂಪಾಯಿ ಇದ್ದದ್ದು 60 ರೂಪಾಯಿಗೆ ಏರಿಸುವಾಗ ಈ ಎಕ್ಸ್ಟ್ರಾಗಳನ್ನು ಆಫರ್ ರೂಪದಲ್ಲಿ ಕೊಡುತ್ತಾರೆ. ನಂತರದಲ್ಲಿ ಎಕ್ಸ್ಟ್ರಾ ಕೊಡೋದನ್ನು ಬಿಟ್ಟು 200 ಗ್ರಾಂ. ಗೆ 60 ರೂಪಾಯಿ ಇಟ್ಟುಬಿಡ್ತಾರೆ ಎಂದು ಅಂಗಡಿ ನಡೆಸಿದ್ದ ತನ್ನ ಅನುಭವವನ್ನು ಹಂಚಿಕೊಂಡ ನಾಗ.

''ಈ ಎಕ್ಸ್ಟ್ರಾ ಕೊಡೋದು, ಒಂದಕ್ಕೊಂದು ಫ್ರೀ ಕೊಡೋದು, ಇಂಥ ಆಫರ್‌ಗಳು ಕ್ಲಬ್‌ಗಳಲ್ಲಿ, ಬಾರ್‌ಗಳಲ್ಲಿ ಕ್ರಿಸ್‌ಮಸ್‌ಗೆ ಮತ್ತು ನ್ಯೂ ಇಯರ್ ಸೆಲೆಬ್ರೇಷನ್‌ಗಳಲ್ಲಿ ತುಂಬಾ ಕಾಮನ್. ಒಂದು ಲಾರ್ಜ್ ತೊಗೊಂಡ್ರೆ ಒಂದು ಲಾರ್ಜ್ ಪೆಗ್ ಅಥವಾ ಒಂದು ಸ್ಮಾಲ್ ಪೆಗ್ ಆಫರ್ ಇರುತ್ತೆ'' ಎಂದು ತನ್ನ ಅನುಭವದ ಆಫರ್‌ಗಳ ಲೋಕವನ್ನು ವಿಸ್ತರಿಸಿದ ಆ್ಯಂಡಿ.

''ಫಾಸ್ಟ್ ಮೂವಿಂಗ್ ಬ್ರಾಂಡ್‌ಗಳಿಗೆ ಆಫರ್‌ಗಳು ಕಮ್ಮಿ ಇರುತ್ತೆ. ಹೆಚ್ಚು ಮೂವ್ ಆಗದ ಬ್ರಾಂಡ್‌ಗಳನ್ನು ಕೊಂಡಲ್ಲಿ ಅಷ್ಟೇ ಮೊತ್ತದ ಅದೇ ಬ್ರಾಂಡನ್ನು ಫ್ರೀ ಆಗಿ ಕಂಪನಿಯವರು ಕ್ಲಬ್, ಬಾರ್‌ಗಳಿಗೆ ಕೊಟ್ಟಿರುತ್ತಾರೆ. ಅದನ್ನೇ ಅವರು ನಮಗೆ ಆಫರ್ ರೂಪದಲ್ಲಿ ಕೊಡ್ತಾರೆ'' ಎಂದ ಆ್ಯಂಡಿ.

''ಥೂತ್ ನನ್ಮಗನೇ, ಸಂಜೆ ಇಷ್ಟೊತ್ನಲ್ಲಿ, ಎಣ್ಣೆ ಹೊಡೆಯೋ ಹೊತ್ನಲ್ಲಿ ಎಣ್ಣೆ ವಿಷಯ ಎತ್ತಿಬ್ಟ್ಯಲ್ಲೋ. ಎಣ್ಣೆ ಅಂದರೆ ನನಗೆ ಆಣೆ ಹಾಕ್ದಂಗೆ ಅಂತಾ ನಿನಗ್ಗೊತ್ತು. ಆದ್ರೂ ವಿಷ್ಯ ಎತ್ತಿಬ್ಟ್ಟೆ ಈಗ ನೋಡು, ಎಣ್ಣೆ ಹೊಡೀಲೇಬೇಕು ಅನ್ನಿಸ್ತಿದೆ'' ಎಂದು ಎಣ್ಣೆ ವಿಚಾರ ಎತ್ತಿದ ಆ್ಯಂಡಿಗೆ ಆಕ್ಷೇಪಿಸಿದ ಕವಿರಾಜ.

''ಎಣ್ಣೆ ಎಂದರೆ ನಮ್ಮಲ್ಲಿ ಯಾರಾದರೂ ಯಾವತ್ತಾದ್ರೂ ಬೇಡಾ ಅಂದಿದ್ದಾರೇನೋ, ನಡೀ ಹೋಗೋಣ'' ಎಂದು ಉತ್ತೇಜಿಸಿದ ಸರ್ಜಾ. ಎಲ್ಲರೂ ''ಚಿಯರ್ ಬಾಯ್ಸ್'' ಗಳಂತೆ ಹುರುಪಿನಿಂದ ಎದ್ದು ಚರ್ಚೆಯ ಮುಂದಿನ ಭಾಗವನ್ನು ''ಚಿಯರ್ಸ್'' ಹೇಳಿ ಬಾಟಲ್‌ಗಳ ಸಮ್ಮುಖದಲ್ಲಿ ಮುಂದುವರೆಸಲು ಬಾರ್ ಕಡೆ ಹೆಜ್ಜೆ ಹಾಕಿದರು.

✤

## ರಾಂಗ್ ನಂಬರ್

ಇದು ಅಮೆರಿಕದಲ್ಲಿ ಮಾತ್ರ ಸಾಧ್ಯ.
ಒಬ್ಬ ಮನೆಗೆ ಫೋನ್ ಮಾಡುತ್ತಾನೆ. ಅಪರಿಚಿತ ಹೆಂಗಸಿನ ಧ್ವನಿ ಕೇಳುತ್ತದೆ.
ಯಾರು ನೀವು ಎಂದು ಕೇಳುತ್ತಾನೆ.
ನಾನು ಮನೆ ಕೆಲಸದಾಕೆ ಎಂಬ ಉತ್ತರ ಬರುತ್ತದೆ.
ಆದರೆ ನಮ್ಮ ಮನೆಯಲ್ಲಿ ಕೆಲಸದವಳಿಲ್ಲವಲ್ಲ?
ಇಂದಷ್ಟೇ ನನ್ನ ನೇಮಕವಾಯಿತು ಅಮ್ಮಾವ್ರಿಂದ.
ನಾನು ಅವಳ ಗಂಡ. ಅವಳು ಮನೆಯಲ್ಲಿದ್ದಾಳೆಯೆ?
ಅವರು ಬೆಡ್‌ರೂಂನಲ್ಲಿದ್ದಾರೆ. ಅವರ ಜತೆ ಗಂಡಸೊಬ್ಬರಿದ್ದಾರೆ. ಅವರೇ ಅವರ ಗಂಡ ಅಂತ ನಾನೆಂದುಕೊಂಡೆ.
ಇವನಿಗೆ ಭಯಂಕರ ಕೋಪ ಬಂದಿತು.
ನಿನಗೆ 50,000 ಡಾಲರ್ ಬೇಕೆ? ಅವಳನ್ನು ಕೇಳಿದ.
ನಾನೇನು ಮಾಡಬೇಕು?
ನನ್ನ ರೂಂನಲ್ಲಿ ಗನ್ ಇದೆ, ಅದನ್ನು ತೊಗೊಂಡು ಇಬ್ಬರನ್ನೂ ಮುಗಿಸು.
ಅವಳು ಫೋನ್ ಕೆಳಗಿಟ್ಟಳು. 10 ಸೆಕೆಂಡ್ ನಂತರ ಗುಂಡಿನ ಶಬ್ದ ಕೇಳುತ್ತದೆ.
ಈಗೇನು ಮಾಡಲಿ? ಕೆಲಸದಾಕೆ ಕೇಳುತ್ತಾಳೆ.
ಆ ಹೆಣಗಳನ್ನು ಸ್ವಿಮಿಂಗ್‌ಪೂಲ್‌ನಲ್ಲಿ ಬಿಸಾಕು.
ಸ್ವಿಮಿಂಗ್ ಪೂಲ್? ಇಲ್ಲಿ ಸ್ವಿಮಿಂಗ್ ಪೂಲೇ ಇಲ್ಲ!
ಹೌದೆ? ಹಾಗಿದ್ದರೆ ನಾನು 3456832432ಗೆ ಅಲ್ಲವಾ ಫೋನ್ ಮಾಡಿದ್ದು?

# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

## ರಾಜ್ಯೋತ್ಸವ ಸಾ ರ್‍ರಾಜ್ಯೋತ್ಸವ

–1–

ಎಲ್ಲರ ಕಾಡಿ ಬೇಡಿ
ಚಾಂದಾವಸೂಲಿ ಮಾಡಿ
ವೇದಿಕೆಯಲ್ಲಿ
ಕನ್ನಡ ಕನ್ನಡ
ಮನೆಯಲಿ ಮಮ್ಮಿಡ್ಯಾಡಿ !

–2–

ಬಂದರೆ ನವಂಬರು
ಕನ್ನಡ ಕನ್ನಡ ಎಂಬರು
ಡಿಸೆಂಬರಿಂದ ಅಕ್ಟೋಬರು
ಕನ್ನಡರಾಂಗ್ ನಂಬರು !

–3–

ಬೇರಾವ ಹೂಗಳಿಗೂ ಇಲ್ಲ
ಮೈಸೂರು ಮಲ್ಲಿಗೆಯ ಕಂಪು
ಇನ್ನಾವ ಭಾಷೆಗೂ ಇಲ್ಲ
ಕನ್ನಡ ನುಡಿಯ ಇಂಪು
ಆದ್ದರಿಂದಲೆ ನಮಗೆ
ಸದಾ ನಿದ್ದೆ ಜೊಂಪು !

–4–

ಕನ್ನಡ ಗೀತೆಗಳನ್ನು ಹಾಡಲು
ಪರ ಭಾಷೆಯವರೇ ಬೇಕು
ಇದು ಗಾಂಧಿನಗರದ
ಅಲಿಖಿತ ನಿಯಮ
ಪ್ರತಿಭೆಯಿದ್ದರೂ ನಮ್ಮವರಿಗೆ
ಅವಕಾಶವೇ ಇಲ್ಲ
''ಗಾಯಕನ್ನೆಣಿಕ ರಾರಾಮ !''

–5–

ಕಾನ್ವೆಂಟ್ ಸೇರಿ ಕನ್ನಡ ಮರೆತು
ಹಾಯ್ ಬಾಯ್ ಅನ್ನೋ ಜಾಣೆ
ನೋವಾದಾಗ ಹೇಳೋ ಶಬ್ದ
ಅಮ್ಮಾ ಅಂತ ತಾನೆ?

✤

# ಸ್ಯಾಂಡಲ್‌ವುಡ್ ಎಂಬ ಶಾಲೆ

**- ಸುಕನ್ಯಾ ಸುರೇಶ್**

ಕನ್ನಡ ಚಿತ್ರರಂಗ ಒಂದು ಶಾಲೆಯಾದರೆ ಅಧ್ಯಾಪಕರು ಯಾರಿರಬಹುದು?
ಇಲ್ಲಿದೆ ಒಂದು ಚಿತ್ರಣ

**ಪ್ರಾಣಿಶಾಸ್ತ್ರ**

**ಮೇಡಂ** : ಐಂದ್ರಿತಾ ರೈ

ಕಾರಣ : ನಾಯಿ ಮತ್ತು ಇತರ ಪ್ರಾಣಿಗಳ ಬಗ್ಗೆ ಈಕೆಗೆ ಇರುವ ಪ್ರೇಮ ಅಪಾರ. ತಮ್ಮ ಸುತ್ತಮುತ್ತಲಿರುವ ಮನುಷ್ಯರಿಗಿಂತ ಪ್ರಾಣಿಗಳನ್ನೇ ಇವರು ಹೆಚ್ಚು ಪ್ರೀತಿಸುತ್ತಾರೆ ಎಂಬ ಗುಮಾನಿಯೂ ಇದೆ. ಹಾಗಿದ್ದ ಮೇಲೆ ಇವರೇ ಪ್ರಾಣಿಶಾಸ್ತ್ರ ಬೋಧಿಸಲು ಅರ್ಹರು ಅಲ್ಲವೆ?

**ಕನ್ನಡ**

**ಮೇಷ್ಟ್ರು** : ಗಣೇಶ್

ಕಾರಣ : ಯೋಗರಾಜ್ ಭಟ್ಟರು ಬರೆದಿರುವ 2 ಪುಟದ ಏಕಾಲಾಪದ ಮಾತುಗಳನ್ನು ಒಂದೇ ಉಸಿರಿನಲ್ಲಿ ಹೇಳುವ ಸಾಮರ್ಥ್ಯ ಇವರಿಗಿದೆ. ಇದನ್ನು ಅವರ ಅಭಿಮಾನಿಗಳು ಅನುಕರಿಸುತ್ತಾರೆ ಎಂದ ಮೇಲೆ ಇವರಿಗಿಂತ ಬೇರೆ ಮೇಷ್ಟ್ರು ಬೇಕೆ? ಸಿಗುವರೆ?

**ಭೂಗೋಳ**

**ಮೇಷ್ಟ್ರು** : ಸುದೀಪ್

ಕಾರಣ : ಇವರು ಯಾವಾಗಲೂ ಪ್ರಯಾಣ ಮಾಡುತ್ತಿರುತ್ತಾರೆ. ಮೊದಲು ಸ್ಯಾಂಡಲ್‌ವುಡ್ ನಂತರ ಬಾಲಿವುಡ್ ಆಮೇಲೆ ಟಾಲಿವುಡ್, ಮಾಲಿವುಡ್ ಮತ್ತು ಕಾಲಿವುಡ್. ಹೀಗೆ ಸುತ್ತುವುದರಿಂದ ಅವರ ಭೌಗೋಳಿಕ ಜ್ಞಾನ ಅಪಾರವಾಗಿರಲೇಬೇಕಲ್ಲವೆ?

**ಇಂಗ್ಲಿಷ್**

**ಮೇಷ್ಟ್ರು** : ಶ್ರದ್ಧಾ ಶ್ರೀನಾಥ್

ಕಾರಣ : ಇವರ ಇಂಗ್ಲಿಷ್ ಜ್ಞಾನ ಅಪಾರ. ತಮ್ಮ ಮೊದಲನೆ ಚಿತ್ರದಲ್ಲಿಯೇ ಅವರು ಪತ್ರಿಕೆಯ ವರದಿಗಾರ್ತಿ ಆಗಿದ್ದರು ಎಂದಮೇಲೆ ಕೇಳಬೇಕೆ? ಸೊ ಶ್ರದ್ಧಾ ಮೇಡಂ ಅವರೇ ಇಂಗ್ಲಿಷ್ ಟೀಚರ್.

**ಭೌತಶಾಸ್ತ್ರ**

**ಮೇಷ್ಟ್ರು** : ಯಶ್

ಕಾರಣ : ಈ ರಾಕಿಂಗ್ ಸ್ಟಾರ್‌ಗೆ ಬಲ, ರಭಸ, ವೇಗ ಬಗ್ಗೆ ಬಲು ಚೆನ್ನಾಗಿ ಗೊತ್ತಿದೆ. ಯಶ್ ಬರೋವರಿಗೂ ಮಾತ್ರ ಬೇರೆಯವರ ಹವಾ. ಇವರು ಬಂದಮೇಲೆ ಅವರದ್ದೇ ಹವಾ. ಅಂದಮೇಲೆ ಇವರೇ ಫಿಸಿಕ್ಸ್ ಮಾಸ್ಟರ್.

**ಚರಿತ್ರೆ**

**ಮೇಷ್ಟ್ರು** : ದರ್ಶನ್

ಕಾರಣ : ಮೊದಲು ಸಂಗೊಳ್ಳಿ ರಾಯಣ್ಣ ಈಗ ಮಹಾಭಾರತದ ದುರ್ಯೋಧನ. ದರ್ಶನ್‌ಗೂ ಮತ್ತು ಚರಿತ್ರೆ/ಪುರಾಣಕ್ಕೂ ನಿಕಟ ಸಂಬಂಧ. ಅವರ ಅಭಿಮಾನಿಗಳ ಸಂಖ್ಯೆ ನೋಡಿದರೆ ಅವರ ಕ್ಲಾಸುಗಳಲ್ಲೆಲ್ಲಾ ಫುಲ್ ಅಟೆಂಡನ್ಸ್.

**ಗಣಿತ**

**ಮೇಷ್ಟ್ರು** : ಪುನಿತ್ ರಾಜ್‌ಕುಮಾರ್

ಕಾರಣ : ಕೋಟ್ಯಾಧಿಪತಿ ಕಾರ್ಯಕ್ರಮ ನಡೆಸಿದ್ದರಿಂದ ಇವರಿಗೆ ಕೋಟಿಯವರೆಗೂ ಎಣಿಸಲು ಬರುತ್ತದೆ. ಆದುದರಿಂದ ಇವರು ಗಣಿತ ಪ್ರೇಮಿ.

**ಪೀಟಿ**

**ಮೇಷ್ಟ್ರು** : ಸಂಜನಾ

ಕಾರಣ : ಯೋಗ, ಫಿಟ್‌ನೆಸ್ ಎಂದಾಗ ತಟ್ಟನೆ ಹೊಳೆಯುವುದು ಸಂಜನಾ. ಇವರು ಯೋಗಾ ಅಕಾಡೆಮಿ ಮಾಲೀಕರು ಸಹ. ಮತ್ತೇಕೆ ತಡ, ಆಗಲಿ ಇವರ ನೇಮಕ.

**ಪೌರನೀತಿ**

**ಮೇಷ್ಟ್ರು** : ಉಪೇಂದ್ರ

ಕಾರಣ : ಐ ಲೈಕ್ ಇಟ್ ಐ ಲೈಕ್ ಇಟ್ ಕಾಂತ! ತಮ್ಮ ಸಿನಿಮಾಗಳಲ್ಲಿ ಇವರು ನಾಗರಿಕ ಪ್ರಜ್ಞೆಯನ್ನು ಬೋಧಿಸುತ್ತಲೇ ಬಂದಿದ್ದಾರೆ. ಈಗಂತೂ ರಾಜಕೀಯ ಪ್ರಜ್ಞೆಯೂ ಜಾಗ್ರತಗೊಂಡಿದೆ. ಅಂದಮೇಲೆ ಇವರಿಗಿಂತ ಒಳ್ಳೇ ಮಾಸ್ಟರ್ ಸಿಗುವರೆ?

ಎಲ್ಲಾ ಓಕೆ, ಪ್ರಿನ್ಸಿಪಾಲ್ ಬೇಕೆ? ಯಾರವರು ಯಾರವರು?

ಅಂಬರೀಶಣ್ಣ.

ಅಂಬರೀಶ್ ಬರೇ ಮಾತನಾಡರು. ಗರ್ಜಿಸುತ್ತಾರೆ. ಅವರನ್ನು ವಿರೋಧಿಸುವವರು ಯಾರೂ ಇಲ್ಲ. ಅಂದಮೇಲೆ ಸ್ಯಾಂಡಲ್‌ವುಡ್ ಶಾಲೆಗೆ ಸಮಸ್ಯೆಯೇ ಇರುವುದಿಲ್ಲ.

*ಸೌಜನ್ಯ : ಬೆಂಗಳೂರ್ ಟೈಂಸ್*

✤

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

*58 ವರ್ಷಗಳಿಂದ ವ್ಯಂಗ್ಯಚಿತ್ರಗಳ ಮಹಾಪೂರವನ್ನೇ ಹರಿಸುತ್ತಿರುವ ರಾಜ್ಯದ ಹೆಮ್ಮೆಯ ಕೆ.ಆರ್.ಸ್ವಾಮಿ ತಮ್ಮ ರೇಖಾ ಶೈಲಿಯನ್ನು ಮೂರು ಬಾರಿಯಾದರೂ ಬದಲಾಯಿಸಿರಬೇಕು.*



"ಒಂದೈವತ್ತು ರೂಪಾಯಿ ಸಾಲ ಕೊಡ್ಡಿರಿ ಸಾರ್! ಕೇರಳ,ಮದ್ರಾಸ್, ಮೈಸೂರು ಲಾಟರಿ ಬಂದ ಕೂಡ್ಲೇ ವಾಪಸು ಕೊಟ್ಬುಡ್ತೀನಿ..." [1970]




"ಪರ್ವಾಗಿಲ್ಲ...ಸ್ವಲ್ಪ ಕೂತ್ಕೊಳ್ಳಿ... ಕಾಫಿ ಮಾಡ್ಕೊಂಡು ಬಂದ್ಬಿಡ್ತೀನಿ... ಒಂದೆರಡು ಗಂಟೆ ವಳ್ಗೆ...." [1975]



"ಐದನೇ ಅಳಿಯಂದಿರನ್ನೂ ಹಬ್ಬಕ್ಕೆ ಬರಹೇಳಿದ್ದೆ..." [1982]